# ಯುಗರಶ್ಮಿ

★ ವಿಜ್ಞಾನ ಯುಗದಲ್ಲಿ ಧರ್ಮ

★ ಕ್ರಿಸ್‌ಮಸ್

★ ಇಸ್ಲಾಂ-ನವೀನ ಪಾಶ್ಚಾತ್ಯರ ನೋಟದಲ್ಲಿ

★ ಪ್ರವಾದಿತ್ವ

★ ಜಿಹಾದ್ ಎಂದರೆ....

★ ಇಸ್ಲಾಂ ಮತ್ತು ತತ್ತ್ವಜ್ಞಾನ

ತ್ರೈಮಾಸಿಕ

ಜನವರಿ 1982

ಬೆಲೆ: ರೂ. 1-00

ಯಾರು ನೆಚ್ಚಿ ಸತ್ಕರ್ಮ ಗೈಯ್ಯುತ್ತಾರೋ, ನಾವು ಅವರಲ್ಲಿರುವ ಕೆಡುಕುಗಳನ್ನು ಹೋಗಲಾಡಿಸಿ, ಅವರ ಪ್ರವೃತ್ತಿಗಳಿಗೆ ಅತ್ಯುತ್ತಮ ಪ್ರತಿಫಲವನ್ನು ನೀಡುವೆವು.

—ಪವಿತ್ರ ಖುರ್‌ಆನ್ (29:8)

# ಯುಗರಶ್ಮಿ ತ್ರೈಮಾಸಿಕ

10/23–1008, ಅನ್ಸಾರಿ ರೋಡ್, ಬಂದರ, ಮಂಗಳೂರು–575 001.

ಸಂಪುಟ : **7** ಡಿಸೆಂಬರ್ 1981–ಜನವರಿ 1982 / ಫತಹ್ 1360 – ಸುಲ್ಹ 1361 ಸಂಚಿಕೆ : **3**

ಬಿಡಿ ಪ್ರತಿ : ರೂ. **1–00** ವಾರ್ಷಿಕ ಚಂದಾ : ರೂ. **4–00**


**ವಿಷಯ ಸೂಚಿಕೆ:** ಪುಟ


* ದೇವನ ಕ್ಷಮಾಗುಣ ... ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... 2
* ವಿಜ್ಞಾನ ಯುಗದಲ್ಲಿ ಧರ್ಮ ... ... 3
* ಕ್ರಿಸ್‌ಮಸ್ ... ... 7
* ಇಸ್ಲಾಂ ಧರ್ಮದಲ್ಲಿ ಸೂಫೀ ಪಂಥದ ಸ್ಥಾನ ... ... 9
* ಖಾತಮುನ್ನಬಿಯ್ಯೀನ್ ... ... 13
* ಜಿಹಾದ್ ಎಂದರೆ...... ... ... 22
* ಅಹ್ಮದಿಯಾ ವಾರ್ತೆಗಳು ... ... 24
* ಪುಸ್ತಕ ವಿಭಾಗ—ಇಸ್ಲಾಂ ಮತ ತತ್ತ್ವಜ್ಞಾನ


## ನಿಧನ ವಾರ್ತೆ

ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರ ಸಹಧರ್ಮಿಣಿ ಹಝ್ರತ್ ಸಯ್ಯಿದಾ ಮನ್‌ಸೂರಾ ಬೇಗಂ ಅವರು ಡಿಸೆಂಬರ್ 3ರಂದು ಗುರುವಾರ ತನ್ನ 70ನೇ ವಯಸ್ಸಿನಲ್ಲಿ ನಿಧನರಾದರೆಂಬ ಶೋಕವಾರ್ತೆ ತಿಳಿದುಬಂದಿದೆ. "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಮೃತರಾದ ಮಹಿಳಾಮಣಿಗೆ ಅಲ್ಲಾಹು ಮಗ್‌ಫಿರತನ್ನೂ ಬಂಧುಗಳಿಗೆ ಸಹನಾ ಶಕ್ತಿಯನ್ನೂ ಕರುಣಿಸಲಿ.

بسم الله الرحمن الرحيم

نحمده ونصلي على رسوله الكريم

# ಯು ಗ ರ ಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ: 7 | ಡಿಸೆಂಬರ್ 1981–ಜನವರಿ 1982 / ಫತಹ್ 1360–ಸುಲ್ಹ 1361 | ಸಂಚಿಕೆ: 3 |
|---|---|---|


## ದೇವನ ಕ್ಷಮಾಗುಣ

ದೈವಿಕ ನಲ್ಮೆಯ ರಾಜಕವಾಟ ಎಂದಿಗೂ ಮುಚ್ಚಲ್ಪಡುವುದಿಲ್ಲ. ಮನುಷ್ಯನು ಶುದ್ಧ ಹೃದಯದಿಂದ, ಪರಿಪೂರ್ಣವಾದ ಆತ್ಮಾರ್ಥತೆಯಿಂದ ದೇವನೆಡೆಗೆ ತಿರುಗಿ ಅರ್ಥಿಸಿದರೆ ಅವನ ಪಾಪ ಕ್ಷಮಿಸಲ್ಪಟ್ಟು, ಅವನಿಗೆ ಕರುಣೆ ಲಭಿಸಿ, ಅವನ ಪಶ್ಚಾತ್ತಾಪ ಸ್ವೀಕರಿಸಲ್ಪಡುವುದು. ಪಾಪವನ್ನು ಕ್ಷಮಿಸಿಕೊಡುವ ದೇವನ ಗುಣವನ್ನು ತಾತ್ವಿಕವಾಗಿ ವಿಂಗಡಿಸಿಕೊಂಡು ಕೆಲವು ಪಾಪಿಗಳ ಪಾಪಗಳು ಕ್ಷಮಿಸಲ್ಪಡುವುವೆಂದೂ ಕೆಲವರ ಪಾಪ ಅಕ್ಷಮ್ಯವೆಂದೂ ಹೇಳುವುದು ದೇವನ ಬಗ್ಗೆ ತೋರಿಸುವ ಬಾಲಚಾಪಲ್ಯವೂ ಅನಾದರವೂ ಆಗಿದೆ. ಅವನ ಕರುಣೆಯ ಭಂಡಾರ ಅತಿ ವಿಸ್ತಾರ ಹಾಗೂ ಸೀಮಾತೀತ. ಅವನ ಅನುಗ್ರಹಕ್ಕೆ ಕೊರತೆ ಬಾಧಿಸುವುದಿಲ್ಲ. ಅವನ ಬಾಗಿಲುಗಳು ಯಾರಿಗೂ ಮುಚ್ಚಲ್ಪಡುವುದಿಲ್ಲ." (ಅಲ್‌ಹಕಂ, ಜುಲೈ 10, 1902).

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ಆಹಾರ ಪಾನೀಯಗಳು

1. ಆಹಾರ ಸೇವನೆಯ ಮೊದಲು ಮತ್ತು ನಂತರ ಕೈಗಳನ್ನೂ ಬಾಯನ್ನೂ ಶುಚೀಕರಿಸುವುದು ಆಹಾರದ ಪ್ರಯೋಜನವನ್ನು ಹೆಚ್ಚಿಸುತ್ತದೆ.

2. ಒಂದೇ ಉಸಿರಿನಲ್ಲಿ ಒಂಟೆಯ ಹಾಗೆ ಕುಡಿಯದೆ, ಎರಡು ಅಥವಾ ಮೂರು ಸಲ ನಿಲ್ಲಿಸಿ ನಿಲ್ಲಿಸಿ ಕುಡಿಯಿರಿ.

3. ಆಶೆಯಾಗುವುದನ್ನೆಲ್ಲಾ ತಿನ್ನುವುದು ಒಳ್ಳೆಯದಲ್ಲ.

4. ಆಹಾರವನ್ನು ಆದರಿಸಿರಿ.

5. ಆಹಾರವನ್ನು ಮೂಸಿ ನೋಡಬೇಡಿರಿ; ಅದು ಮೃಗಸ್ವಭಾವವಾಗಿದೆ.

6. ಹೆಚ್ಚು ಬಿಸಿ ಇರುವುದನ್ನು ತಿನ್ನಬಾರದು; ಅದರಲ್ಲಿ ಒಳಿತೇನೂ ಇಲ್ಲ. ಬಿಸಿ ಕಮ್ಮಿಯಾದರೆ ತಿನ್ನಿರಿ; ಅದು ತಿನ್ನಲಿಕ್ಕೆ ಸುಲಭ ಹಾಗೂ ಹೆಚ್ಚು ಗುಣಕರ.

7. ಮುಚ್ಚದೆ ಇದ್ದ ಪಾತ್ರೆಯಿಂದ ಕುಡಿಯಬಾರದು.

8. ಊಟಕ್ಕೆ ಕುಳಿತುಕೊಳ್ಳುವಾಗ ಪಾದರಕ್ಷೆಗಳನ್ನು ಕಳಚಿಡಿರಿ; ಅದು ಒಳ್ಳೆಯ ಸ್ವಭಾವವಾಗಿದೆ.

9. ಮಿತ ಭಕ್ಷಣ ಹಿತವನ್ನುಂಟು ಮಾಡುವುದು.

10. ಮಿತಾಹಾರಿ ತನ್ನ ಹೊಟ್ಟೆಯಲ್ಲಿ ಪ್ರಕಾಶವನ್ನು ತುಂಬುತ್ತಾನೆ.

**(ಸರ್ ಮುಹಮ್ಮದ್ ಝಫರುಲ್ಲಾ ಖಾನರ Wisdom of the Holy Prophet ಎಂಬ ಪುಸ್ತಕದಿಂದ ಆಯ್ದುದು.)**


## AHMADIYYA URDU LITERATURE

1 Ahmadiyyat Ka Paigham
2 Kya Hazrat Masih Nasiri Zinda Hein ?
3 Silsila Nubuwwat Allah Ka Abdi Ahd Hai
4 Zuroorathe Mazhab
5 Khatamunnabiyyeen

**WILL BE SENT FREE**

Apply with 25 paise Stamp for each book to :

**The Editor : "YUGARASHMI" Kannada Quarterly,**

10-23/1008, Ansari Road, Bunder, Mangalor-575 001

# ವಿಜ್ಞಾನ ಯುಗದಲ್ಲಿ ಧರ್ಮ

□ ಎಂ. ಮುಹಮ್ಮದ್ ಎಂ. ಎ.

ಈ ಕಾಲದಲ್ಲಿ ಧರ್ಮದ ಕುರಿತಾಗಲಿ ವಿಜ್ಞಾನದ ಕುರಿತಾಗಲಿ ಏನು ಹೇಳಿದರೂ ಅದು ಮಾನವ ಜೀವಿತಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಪರ್ಶಿಸದೆ ಇರುವುದಿಲ್ಲ. ವಿಜ್ಞಾನ ಮತ್ತು ಧರ್ಮ ಜೀವಿತಕ್ಕೆ ಬೇಕಾಗಿದೆ, ತದ್ವಿರುದ್ಧವಲ್ಲ. ಹೀಗೆ ನೋಡುವಾಗ ಮನುಷ್ಯ ಜೀವಿತವನ್ನು ಅದರ ಗುರಿ ಮುಟ್ಟಿಸಲು ವಿಜ್ಞಾನ ಮತ್ತು ಮತ ಎಷ್ಟರ ಮಟ್ಟಿಗೆ ಪ್ರಯೋಜನಕರವೆಂದು ನಮಗೆ ಪರಿಶೀಲಿಸಬೇಕಾಗುತ್ತದೆ.

ವಿಜ್ಞಾನ ಇಂದು ಹಠಾತ್ ಉದಿಸಿ ಬಂದುದಲ್ಲ. ಅದರ ಬೆಳವಣಿಗೆ ಮತ್ತು ವಿಕಾಸ ಆರಂಭಿಸಿ ತುಂಬಾ ಕಾಲ ಕಳೆಯಿತು. ಆದರೆ ವಿಜ್ಞಾನದ ಪ್ರಗತಿಯೊಂದಿಗೆ ಮಾನವ ಜೀವಿತಕ್ಕೆ ಸಹ ಪ್ರಗತಿಯುಂಟಾಗಿದೆಯೇ ? ಒಂದು ಉತ್ತಮ ಜೀವನ ನಮಗೆ ಇನ್ನೂ ಸಿಗಬೇಕಾಗಿದೆಯಷ್ಟೆ. ಅದು ಎಂದಾದರೂ ಉಂಟಾದೀತೇ ? ಭವಿಷ್ಯಕಾಲದ ಕುರಿತು ನಮಗೆ ಎಷ್ಟರ ಮಟ್ಟಿಗೆ ಹೇಳಬಹುದು ? ನಮ್ಮ ವಿಶ್ವಾಸ ಮತ್ತು ವೀಕ್ಷಣಗತಿಯನುಸಾರ ಒಂದು ಉತ್ತಮ ಜೀವಿತ ಉಂಟಾದೀತೋ ಇಲ್ಲವೋ ಎಂದು ಸಾಧಿಸಬಹುದು. ಆ ಉತ್ತಮ ಜೀವನಕ್ರಮದೆಡೆಗೆ ನಾವು ಮುನ್ನಡೆಯಬೇಕು. ಲೋಕವು ಅನುಕ್ರಮವಾಗಿ ಪುರೋಗಮಿಸುತ್ತಿದೆಯೆಂದು ಚರಿತ್ರೆ ರುಜುಪಡಿಸುವುದಾದರೆ ಭವಿಷ್ಯದ ಕುರಿತು ನಮಗಿರುವ ಪ್ರತ್ಯಾಶೆಗೆ ಇನ್ನೂ ಹೆಚ್ಚು ಬಲ ಸಿಕ್ಕೀತು. ಆದರೆ ಅದು ಅಷ್ಟು ಸುಲಭದಲ್ಲಿ ರುಜುಪಡಿಸುವ ಸಂಗತಿಯಲ್ಲ. ಪುರೋಗತಿಯ ಕುರಿತು ಹೇಳುವಾಗ ಅದರ ಎರಡು ರೂಪಬೇಧಗಳನ್ನೂ ಗಮನಿಸಬೇಕಾಗಿದೆ. ಭೌತಿಕ ಪ್ರಗತಿ ಮತ್ತು ಆಧ್ಯಾತ್ಮಿಕ ಪ್ರಗತಿಗಳಾಗಿವೆ ಆ ಎರಡು ರೂಪಬೇಧಗಳು. ಮನುಷ್ಯನ ಸುಖ ಸೌಕರ್ಯಗಳಿಗಾಗಿ ನಿರ್ಮಿಸಲ್ಪಡುವ ಉಪಕರಣಗಳ ಪ್ರಗತಿ ಭೌತಿಕ ಪ್ರಗತಿಯಾಗಿದೆ. ಮನುಷ್ಯ ಮನಸ್ಸಿನ ಪ್ರಗತಿಯೇ ಆಧ್ಯಾತ್ಮಿಕ ಪ್ರಗತಿ. ಇವೆರಡರಲ್ಲಿ ಮೊದಲಿನದರ ಪ್ರಗತಿಯ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ.

ಈ ಕಳೆದ 20-25 ವರ್ಷಗಳ ಚರಿತ್ರೆ ಭೌತಿಕ ಪ್ರಗತಿಯ ಚರಿತ್ರೆಯಾಗಿದೆ. ಆ ಕ್ಷೇತ್ರದಲ್ಲಿ ಮನುಷ್ಯ ವರ್ಗ ಅನುಕ್ರಮವಾಗಿ ಮುನ್ನಡೆಯುತ್ತಿದೆಯೆಂದು ಎಲ್ಲರೂ ಒಪ್ಪುತ್ತಾರೆ. ಭೌತಿಕ ವಿಜ್ಞಾನ ರಂಗದಲ್ಲಿ ಮಾತ್ರವಲ್ಲ, ಮನಶ್ಶಾಸ್ತ್ರ, ಸಮಾಜ ಶಾಸ್ತ್ರ, ಅರ್ಥ ಶಾಸ್ತ್ರ, ವೈದ್ಯ ಶಾಸ್ತ್ರ ಇತ್ಯಾದಿಗಳಲ್ಲೆಲ್ಲಾ ಮನುಷ್ಯನು ಪ್ರಗತಿ ಪಡೆದಿದ್ದಾನೆ. ಚರಕ ಮತ್ತು ಸುಶ್ರುತನ ಕಾಲಕ್ಕಿಂತ ವೈದ್ಯಶಾಸ್ತ್ರ ಬಹಳಷ್ಟು ಅಭಿವೃದ್ಧಿ ಪಡೆದಿದೆ. ಆರ್ಕಿಮಿಡಿಸ್ ಮತ್ತು ಗಲೀಲಿಯೋನ ಕಾಲಕ್ಕಿಂತ ವಿಜ್ಞಾನ ಬಹಳಷ್ಟು ಮುಂದೆ ಸಾಗಿದೆ. ಹೀಗೆ ನೋಡುವಾಗ ಟೆಲಿವಿಷನ್, ಪೆನ್ಸಿಲಿನ್ ಮಾತ್ರವಲ್ಲ, ಅಣುಬಾಂಬ್ ಮತ್ತು ಹೈಡ್ರೋಜನ್ ಬಾಂಬ್ ಸಹ ಮನುಷ್ಯನ ಪ್ರಗತಿಯನ್ನು ಸೂಚಿಸುತ್ತದೆ.

19ನೇ ಶತಮಾನದಲ್ಲಿ ವೈಜ್ಞಾನಿಕ ಸಂಶೋಧನೆಗಳು ಒಂದರ ನಂತರ ಇನ್ನೊಂದರಂತೆ ಮನುಷ್ಯರನ್ನು ವಿಸ್ಮಯಗೊಳಿಸಿದುವು. "ಇನ್ನು ನಮಗೆ ದೇವ, ಮತ ಏನೂ ಬೇಡ, ವಿಜ್ಞಾನ ನಮ್ಮನ್ನು ನಮ್ಮ ಗುರಿ ಮುಟ್ಟಿಸೀತು, ನಮ್ಮ ಎಲ್ಲಾ ವಿಕಸನ ಯೋಜನೆಗಳು ಇನ್ನು ಮುಂದೆ ವಿಜ್ಞಾನದ ಮುನ್ನೇರುವಿಕೆಯನ್ನು ಮಾತ್ರ ಹೊಂದಿಕೊಂಡಿದೆ" ಎಂದು ಚಿಂತನಾಶೀಲರೂ ಜನಸಾಮಾನ್ಯರೂ ಭರವಸೆ ಪಟ್ಟರು. ಆದರೆ ಈ ಭರವಸೆ ಹೆಚ್ಚು ಕಾಲ ಉಳಿಯಲಿಲ್ಲ. ವಿಜ್ಞಾನವು ಮನುಷ್ಯನು ಊಹಿಸಿದಂತೆ ಇಂದ್ರಜಾಲಗಳೇನನ್ನೂ ತೋರಿಸಲು ಸಮರ್ಥವಲ್ಲವೆಂದೂ ಅದರ ಸಾಮರ್ಥ್ಯಗಳಿಗೆ ಅನೇಕ ಇತಿಮಿತಿಗಳಿವೆಯೆಂದೂ ವಿಜ್ಞಾನಿಗಳೇ ಒಪ್ಪಿದರು. ಕಾರ್ಲ್ ಮಾರ್ಕ್ಸ್‌ನ ಪೂರ್ವಿಕನಾದ ಓರ್ವ ಸೋಷ್ಯಲಿಸ್ಟ್ ಚಿಂತಕ ಹೂರಿಯರ್ ಕನಸು

ಕಂಡಿದ್ದನು–ಸಮುದ್ರದ ಉಪ್ಪು ನೀರನ್ನು ಸಂಪೂರ್ಣವಾಗಿ ನಮಗೆ ಲೆಮನೇಡಾಗಿ ಪರಿವರ್ತಿಸಬಹುದೆಂದು. ಹೋಮರನಂತಹ 370 ಲಕ್ಷ ಕವಿಗಳನ್ನೂ, ನ್ಯೂಟನನಂತಹ 370 ಲಕ್ಷ ವಿಜ್ಞಾನಿಗಳನ್ನೂ ವಿಜ್ಞಾನವೇ ನಮಗೆ ಕೊಡುಗೆಯೀಯುವುದೆಂದು ಸಹ ಆತನು ಊಹಿಸಿದ್ದನು. ಸ್ಟೆಫಾನ್ ಸ್ವೇಗ್ ಒಮ್ಮೆ ತನ್ನ ಸ್ನೇಹಿತನಾದ ಫ್ರಾನ್ಸ್ ವೆರ್ಫಲಿನೊಡನೆ ಹೇಳಿದನು: "ಬಾಲ್ಯ ಕಾಲದಲ್ಲಿ ನಾನು ದೃಢವಾಗಿ ನಂಬಿದ್ದೆ–ನನಗೆ ಪ್ರಾಯವಾಗುವಾಗ ಡಾಕ್ಟರರು ಮರಣವನ್ನು ಹೋಗಲಾಡಿಸುವರೆಂದು." ಈ ರೀತಿಯ ವಿಶ್ವಾಸಗಳು ಅಂದು ಹಲವರಲ್ಲಿ ಸಾಮಾನ್ಯವಾಗಿತ್ತು. ಇವರೆಲ್ಲರೂ ನಂತರ ವಿಷಾದಪಡಬೇಕಾಗಿಯೂ ನಿರಾಶೆಗೊಳ್ಳಬೇಕಾಗಿಯೂ ಬಂತು.

ಹಾಗಿರುವಾಗ ಪ್ರಥಮ ಲೋಕ ಮಹಾಯುದ್ಧ ಬಂತು. ವಿಜ್ಞಾನಿ ಕೂಡಲೇ ರಾಜ್ಯವನ್ನಾಳುವವನ ಆಜ್ಞಾನುಸಾರಿಯಾಗಿ, ಅವನ ಸಂಶೋಧನೆಗಳು ಮನುಷ್ಯನಿಗೆ ಹಾನಿಕರವಾಗಿ ಪರಿಣಮಿಸಿದುವು. ಇದರೊಂದಿಗೆ ಮನುಷ್ಯನ ಹಲವು ಸುಂದರ ಕನಸುಗಳು ಮಣ್ಣುಗೂಡಿದುವು. ಚಿಂತಕರೆಲ್ಲ ದು:ಖಿತರಾದರು. ಇನ್ನೇನು ಮಾಡಬೇಕೆಂದು ತೋಚದೆ ಅವರು ಕಂಗಾಲಾದರು. ಇದೋ ಗುರಿ ಮುಟ್ಟಲು ಹೋಗುವುದೆಂದು ಘೋಷಿಸಲ್ಪಡುತ್ತಿದ್ದ ವಿಜ್ಞಾನ ಯುಗ ಲೋಕವನ್ನು ಆ ಗುರಿಯಿಂದ ದೂರವಿರಿಸುತ್ತದೆಂಬ ಪ್ರಜ್ಞೆ ಎಲ್ಲರಲ್ಲೂ ಮೂಡಿತು. ಇದು ಪ್ರಥಮ ಲೋಕ ಮಹಾ ಯುದ್ಧದ ನಂತರದ ಅವಸ್ಥೆಯಾಗಿತ್ತು. ವಿಜ್ಞಾನ ಮನುಷ್ಯನಿಗೆ ಗುಣಕ್ಕಿಂತ ಹೆಚ್ಚು ದೋಷವನ್ನುಂಟುಮಾಡುತ್ತದೆಂದು ದ್ವಿತೀಯ ಜಾಗತಿಕ ಯುದ್ಧ ಸ್ಪಷ್ಟಪಡಿಸಿತು.

ವಿಜ್ಞಾನ ಇನ್ನೂ ಮುಂದೆ ಸಾಗಿತು. ಹೊಸ ಹೊಸ ಸಂಶೋಧನೆಗಳು ಮನುಷ್ಯನ ಬಾಹ್ಯ ಜೀವಿತಕ್ಕೆ ಮೊದಲಿಗಿಂತ ಸೌಕರ್ಯಗಳನ್ನು ಒದಗಿಸಿದುವು. ಆದರೆ ಲೋಕದಲ್ಲಿ ಇಂದೇನು ಸಂಭವಿಸುತ್ತಿದೆಯೆಂದು ನಮಗೆ ಗೊತ್ತು. ಹಿಂಸಾತ್ಮಕ ಪ್ರಚೋದನೆಗಳು ಲೋಕವನ್ನೆಲ್ಲಾ ವ್ಯಾಪಿಸಿವೆ. ಅನಿಶ್ಚಿತತೆ ಮತ್ತು ಭಯಾಶಂಕೆಯ ಇರುಳಿನಲ್ಲಿ ನಾವು ಸಿಲುಕಿದ್ದೇವೆ. ಯುದ್ಧಭೀತಿ ಬಿಟ್ಟು ಹೋಗದ ಲೋಕಚಿತ್ರ, ಆದರ ಅರಕ್ಷಿತಾವಸ್ಥೆ ನಮಗೆ ಕಂಡು ಬರುತ್ತದೆ. ಕಮ್ಯುನಿಸಮಿನ ತವರುಮನೆಗಳಾದ ರಶ್ಯಾದಲ್ಲೂ ಚೀನಾದಲ್ಲೂ, ಕ್ಯಾಪಿಟಲಿಸಮಿನ ಸ್ವರ್ಗ ರಾಜ್ಯವೆಂದೆನಿಸುವ ಐಶ್ವರ್ಯಪೂರ್ಣ ಅಮೇರಿಕನ್ ಸಂಯುಕ್ತ ರಾಜ್ಯಗಳಲ್ಲೂ ಇದೇ ಅವಸ್ಥೆಯಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಅಭೂತಪೂರ್ವ ಮುನ್ನಡೆ ಆಧುನಿಕ ಮನುಷ್ಯನನ್ನು ಚಂದ್ರಗೋಳಕ್ಕೆ ಹಾರಿಸಿದೆ. ಅದು ಈ ಲೋಕ ಬಲು ಚಿಕ್ಕದೆಂದೂ ಮನುಷ್ಯಕುಲ ಒಂದೆಂದೂ ನಮಗೆ ತಿಳಿಸಿಕೊಡುವುದಾದರೂ ಇಂದು ಸಹ ನಾವು ನೂರಾರು ಪ್ರಶ್ನೆಗಳ ಸಂಬಂಧಿಸಿ ವಿಭಿನ್ನರೂ ವಿಭಜಿತರೂ ಆಗಿದ್ದೇವೆ. ರಾಜಕೀಯ ಚಿಂತಾಲಹರಿಗಳ ಆಧಾರದಲ್ಲಿ, ಧರ್ಮಗಳ ಹೆಸರಿನಲ್ಲಿ ಮಾತ್ರವಲ್ಲ, ಭೂ ಗಡಿರೇಖೆಗಳ ಆಧಾರದಲ್ಲಿ ಸಹ ಆಧುನಿಕ ಮನುಷ್ಯರು ಅಗಲುತ್ತಾರೆ. ಈ ಅಗಲಿಕೆ ವಿದ್ವೇಷವನ್ನೂ ವೈರತ್ವವನ್ನೂ ಮನುಷ್ಯರಲ್ಲುಂಟುಮಾಡುತ್ತದೆ. ಪ್ರತಿಯೊಂದು ನಾಡು ಅದರ ಹಳೆಯ ಪಾರಂಪರ್ಯ ಮಹತ್ವವನ್ನು ಕೊಂಡಾಡುವುದರಲ್ಲಿ ಗಮನವನ್ನು ಕೇಂದ್ರೀಕರಿಸುತ್ತದೆ. ಆಧುನಿಕ ಯುಗ ಎದುರಿಸುತ್ತಿರುವ ಈ ರೀತಿಯ ಮೌಲಿಕ ಪ್ರಶ್ನೆಗಳಿಗೆ ಒಂದು ಪರಿಹಾರವನ್ನು ನೀಡಲು ಭೌತಿಕ ವಿಜ್ಞಾನಕ್ಕಾಗಲಿ ತಂತ್ರಜ್ಞಾನಕ್ಕಾಗಲಿ ಇಂದಿನ ತನಕ ಸಾಧ್ಯವಾಗಲಿಲ್ಲ. ಮನುಷ್ಯರೆಲ್ಲಾ ಪರಸ್ಪರ ಒಂದೇ ಕುಟುಂಬದಂತೆ ಒಗ್ಗಟ್ಟಾಗಿ ಅನ್ಯೋನ್ಯ ಅರಿತುಕೊಂಡು ಸಾಹಾರ್ದದಿಂದ ಕೂಡಿದ ಒಂದು ಜೀವನ ಕ್ರಮವನ್ನು ರೂಪೀಕರಿಸಲು ಭೌತಿಕ ವಿಜ್ಞಾನದ ಯಾವ ಗಳಿಕೆಯೂ ನಮಗೆ ನೆರವೀಯಲಿಲ್ಲ.

ತೀವ್ರ ಸ್ವಾರ್ಥತೆ ಮನುಷ್ಯನ ಎಲ್ಲಾ ಪ್ರವರ್ತನೆಗಳನ್ನು ನಿಯಂತ್ರಿಸುತ್ತಿರುವುದಾಗಿ ನಾವು ಕಾಣುತ್ತೇವೆ. ಉನ್ನತ ವಿದ್ಯಾಭ್ಯಾಸ ಸೌಕರ್ಯಗಳಾಗಲಿ ವಿಜ್ಞಾನವಾಗಲಿ ಮನುಷ್ಯನಿಗೆ ಯಥಾರ್ಥ ಸಂಸ್ಕಾರವನ್ನು ಒದಗಿಸಲಿಲ್ಲ. ಈ ವಸ್ತುಸ್ಥಿತಿಯನ್ನು ಗಮನಿಸಿಕೊಂಡು ಯುದ್ಧ, ವಿದ್ವೇಷ, ಸ್ವಾರ್ಥತೆಗಳನ್ನು ಮಾತ್ರ ಅವರಿಗೆ ನೀಡಿದ ಒಂದು ಸಮುದಾಯದೊಡನೆ ಯುವ ಪೀಳಿಗೆಗಿರುವ ವಿರೋಧ ಹಾಗೂ ಪ್ರತಿಭಟನೆಯಾಗಿದೆ ನಾವು ಇಂದು ಹಿಪ್ಪಿ–ಬೀಟ್ಲ್ ಪಂಥಗಳಲ್ಲಿ ಕಾಣುವುದು. ಆದರೆ ಬರೇ ನಿಷೇಧಾತ್ಮಕ ವಿರೋಧ ಮತ್ತು ಪ್ರತಿಭಟನೆ ಲೋಕದಲ್ಲಿ ಯಾವ ಪರಿವರ್ತನೆಯನ್ನಾಗಲಿ ಉಂಟುಮಾಡಲಾರದು. ಬದಲಾವಣೆಯನ್ನು ಬಯಸುವ ಈ ಯುವ ಪೀಳಿಗೆ ತಮ್ಮಲ್ಲೇ ಒಂದು ಬದಲಾವಣೆಯನ್ನು ಕೂಡಲೇ ಉಂಟುಮಾಡಬೇಕಾಗಿದೆ. ಗಡ್ಡ ಮತ್ತು ಕೂದಲು ಬೆಳೆಸಿ

ಕೊಂಡು ಹಿಪ್ಪಿಗಳಾಗಿಯೂ ಬೀಟ್ಲ್‌ಗಳಾಗಿಯೂ ನಡೆಯುವುದರಿಂದ ಆಧುನಿಕ ಲೋಕದ ಸಂಕೀರ್ಣ ಸಮಸ್ಯೆಗಳಲ್ಲಿ ಯಾವುದೂ ಬಗೆಹರಿಯಲಾರದು. ಅವರು ಸಹ ಒಳಗೊಂಡಿರುವ ಸಮುದಾಯದಲ್ಲಿ ಬದಲಾವಣೆಯುಂಟಾಗ ಬೇಕಾದರೆ ಅವರಲ್ಲೇ ಒಂದು ಮಾರ್ಪಾಟು ಉಂಟಾಗಬೇಕಾಗಿದೆ. ಆ ಪರಿವರ್ತನೆ ಮನುಷ್ಯನ ಮನಸ್ಸಿನಲ್ಲಿ ಉಂಟಾಗಬೇಕಾಗಿದೆಯೆಂದು ಎಲ್ಲಾ ಚಿಂತಕರು ಸಹ ಒಪ್ಪುತ್ತಾರೆ.

ಈ ವಿಜ್ಞಾನ ಯುಗದಲ್ಲಿ ಮನುಷ್ಯಮನಸ್ಸುಗಳಿಗೆ ಒಂದು ತರದ ಜಡತೆ ಸಂಭವಿಸಿದುದಾಗಿ ಗೋಚರಿಸುತ್ತದೆ. ಇದು ವಿಜ್ಞಾನದ ಕೊಡುಗೆಯಾದ ಯಂತ್ರಗಳಿಂದ ಉಂಟಾದ ಇನ್ನೊಂದು ಹಾನಿಯಾಗಿದೆ. ಅಸಂಖ್ಯಾತ ಯಂತ್ರಗಳು ಇಂದು ಮಾನವ ಜೀವನದೊಂದಿಗೆ ಬೆರೆತಿವೆ. ಮೋಟಾರ್ ಕಾರ್, ಟೆಲಿಫೋನ್, ರೇಡಿಯೋ, ಟೆಲಿವಿಷನ್, ಕಂಪ್ಯೂಟರ್ ಇತ್ಯಾದಿಗಳಿಲ್ಲದ ಮಾನವ ಜೀವನದ ಕುರಿತು ನಮಗಿನ್ನು ಊಹಿಸಲಿಕ್ಕೆ ಸಾಧ್ಯವಿಲ್ಲ. ಆದರೆ ಮನುಷ್ಯನು ಕ್ರಮೇಣ ಈ ಯಂತ್ರಗಳ ದಾಸನಾಗಿಬಿಡುವುದರ ಆಪತ್ತಿನ ಕುರಿತು ಗಾಂಧೀಜಿಯವರು ಈ ದೇಶದವರನ್ನು ಎಚ್ಚರಿಸಿದ್ದರು. ಇಂದು ಆ ಆಪತ್ತಿನಲ್ಲಿ ನಾವೆಲ್ಲಾ ಸಿಲುಕಿದ್ದೇವೆ. ಯಾಂತ್ರಿಕವಾಗಿ ಚಿಂತಿಸುವ, ಮಾತನಾಡುವ ಹಾಗೂ ಪ್ರವರ್ತಿಸುವ ಒಂದು ಪತನಕ್ಕೆ ವಿಜ್ಞಾನಯುಗದ ಮನುಷ್ಯರು ತಲಪಿದ್ದಾರೆ. ಸುತ್ತಲೂ ತಿರುಗುತ್ತಿರುವ ಅನೇಕ ಯಂತ್ರಗಳ ಮಧ್ಯದಲ್ಲಿ ಮನುಷ್ಯನು ಇನ್ನೊಂದು ಯಂತ್ರದಂತಾಗಿದ್ದಾನೆ. ಮನುಷ್ಯಾತ್ಮ ಅಲ್ಲಿ ವಿಸ್ಮರಿಸಲ್ಪಡುತ್ತದೆ. ಮಾನುಷಿಕ ಮೌಲ್ಯಗಳು ಹೂಣಲ್ಪಡುತ್ತವೆ. ದೇವನನ್ನು ವಿಸ್ಮರಿಸುವ ಮನುಷ್ಯನು ಸ್ವಯಂ ಇಲ್ಲದಾಗುತ್ತಾನೆ. ಇದೇ ಕಾರಣದಿಂದ ಭೌತಿಕವಾಗಿ ನಾವು ಬಹಳಷ್ಟು ಸುಧಾರಣೆಗೊಂಡಿದ್ದರೂ ಆತ್ಮಸಂತೃಪ್ತಿ ಮತ್ತು ಮನಶ್ಶಾಂತಿ ನಮಗೆ ಸಿಗುವುದಿಲ್ಲ. ಈ ಅವಸ್ಥೆಯಿಂದ ವಿಮುಕ್ತಿ ಪಡೆಯಲು ಇಚ್ಛಿಸುವ ಲೋಕದ ಮುಂದೆ ಒಂದು ಮಾರ್ಗ ಮಾತ್ರ ತೆರೆದಿರಿಸಲ್ಪಟ್ಟಿದೆ. ಅದು ಮಾನವಜೀವಿತದ ಕುರಿತು ಹಾಗೂ ಅದರ ಗುರಿಯ ಬಗ್ಗೆ ಪ್ರಜ್ಞಾವಂತರಾಗುವುದಾಗಿದೆ. ಈ ಪ್ರಜ್ಞೆಯ ಮೂಲಕ ಮಾತ್ರ ಮನುಷ್ಯ ವರ್ಗಕ್ಕೆ ಯಥಾರ್ಥ ಪ್ರಗತಿಯುಂಟಾದೀತು. ಪ್ರಾದೇಶಿಕ ಹಾಗೂ ವರ್ಗೀಯ ಚಿಂತಾ ಲಹರಿಗಳಲ್ಲಿ ಚಲಿಸುವವರಿಗೆ ಎಂದಿಗೂ ಈ ಪ್ರಜ್ಞೆ ಮೂಡಲಾರದು. ಅವೈಜ್ಞಾನಿಕ ಹಾಗೂ ವಿವೇಕರಹಿತ ಎಲ್ಲಾ ವಿಶ್ವಾಸಾಚಾರಗಳು ಶೀಘ್ರವಾಗಿ ಅಪ್ರತ್ಯಕ್ಷವಾಗುವ ಕಾಲವಾಗಿದೆ ಇದು. ಹೀಗಿರುವ ಒಂದು ಕಾಲದಲ್ಲಿ ಸಂಕುಚಿತ ಪ್ರಾದೇಶಿಕ ವಿಚಾರಲಹರಿ ಮತ್ತು ವರ್ಗದ್ವೇಷಕ್ಕೆ ಸ್ಥಾನವಿಲ್ಲ. ಸಂಕುಚಿತ ವಿಚಾರಧಾರೆಗಳನ್ನು ಮನುಷ್ಯಹೃದಯಗಳಲ್ಲಿ ಮೂಡಿಸುವ ಧರ್ಮ ಈ ವಿಜ್ಞಾನಯುಗದಲ್ಲಿ ಯುಕ್ತವೆನಿಸುವುದಿಲ್ಲ. ಸಾರ್ವಲೌಕಿಕ ವೀಕ್ಷಣಗತಿಯುಳ್ಳ ಧರ್ಮಕ್ಕೆ ಮಾತ್ರ ಈ ಯುಗದಲ್ಲಿ ಸ್ಥಾನವಿದೆ. ಮನುಷ್ಯರನ್ನು ಅನ್ಯೋನ್ಯ ಒಂದುಗೂಡಿಸುವ ಬದಲು ಅಗಲಿಸುವ ಒಂದು ಮತದ ಆವಶ್ಯಕತೆ ನಮಗಿಲ್ಲ. ಮಾನವಜೀವಿತದಲ್ಲಿ ಪ್ರಾಯೋಗಿಕವೆನಿಸದ ಒಂದು ಧರ್ಮ ಮನುಷ್ಯನಿಗೆ ಯಾವ ಒಳಿತನ್ನೂ ಮಾಡಲಿಕ್ಕಿಲ್ಲ. ಮನುಷ್ಯಜೀವಿತದ ಎಲ್ಲಾ ಪ್ರವರ್ತನ ರಂಗಗಳನ್ನೂ ಸಜೀವವಾಗಿ ನಿಯಂತ್ರಿಸುವ ಒಂದು ಧರ್ಮಕ್ಕೆ ಮಾತ್ರ ಈ ವಿಜ್ಞಾನಯುಗದಲ್ಲಿ ಮನುಷ್ಯನಿಗೆ ಆಧ್ಯಾತ್ಮಿಕ ಬೆಳಕನ್ನು ನೀಡಲು ಸಾಧ್ಯ. ಅಂತಹ ಒಂದು ಧರ್ಮಕ್ಕೆ ಮಾತ್ರ ವಿನಾಶದೆಡೆಗೆ ಓಡುತ್ತಿರುವ ಈ ಪೀಳಿಗೆಯನ್ನು ರಕ್ಷಿಸಲಿಕ್ಕೆ ಸಾಮರ್ಥ್ಯವಿದೆ. ಆರಾಧನಾ ಸ್ಥಳದಲ್ಲಿ "ನೀನು ನಿನ್ನ ನೆರೆಕರೆಯವನನ್ನು ಪ್ರೀತಿಸಬೇಕು" ಎಂದು ಹೇಳಿ ಆಫೀಸಿನಲ್ಲೂ ಫ್ಯಾಕ್ಟರಿಯಲ್ಲೂ ವ್ಯಾಪಾರ ಸ್ಥಳದಲ್ಲೂ ಆ ನೆರೆಕರೆಯವನಿಗೆ ಹಾನಿಯನ್ನುಂಟುಮಾಡಲು ಎಲ್ಲಾ ಬಗೆಯಲ್ಲಿ ಪ್ರಯತ್ನಿಸುವ ಮತವಿಶ್ವಾಸಿ ಒಂದು ಹೊಸ ಲೋಕ ಕ್ರಮವನ್ನು ಯಾವ ರೀತಿಯಲ್ಲೂ ಬೆಂಬಲಿಸುವುದಿಲ್ಲ. ಅನೇಕ ಚಿಂತಕರು ಈ ಕಾಲದಲ್ಲಿ ಧರ್ಮವನ್ನು ತಿರಸ್ಕರಿಸಲು ಕಾರಣ ಧರ್ಮ ಸಿದ್ಧಾಂತಗಳಿಗೂ ಮತವಿಶ್ವಾಸಿಗಳ ಪ್ರವೃತಿಗಳಿಗೂ ಇರುವ ಈ ರೀತಿಯ ಅಂತರವನ್ನು ಕಂಡದ್ದಾಗಿದೆ. ಕೆಲವು ನಿರ್ಜೀವ ಆಚಾರ–ಅನುಷ್ಠಾನಗಳಾಗಿ ಮಾತ್ರ ಧರ್ಮವು ಸಂಕುಚಿತಗೊಳ್ಳುವಾಗ ಅದಕ್ಕೆ ಮನುಷ್ಯಜೀವಿತದ ಪ್ರಾಯೋಗಿಕ ಅಂಶಗಳನ್ನು ನಿಯಂತ್ರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆರಾಧನಾ ಸ್ಥಳಗಳಲ್ಲಿ ಪೂಜೆ–ಪ್ರಾರ್ಥನೆ ಸಲ್ಲಿಸುವವರ ಸಂಖ್ಯೆಯೇನೂ ಕಮ್ಮಿಯಿಲ್ಲ. ಆದರೆ ದೈನಂದಿನ ಜೀವನ ಕ್ರಮದಲ್ಲಿ ಧರ್ಮ ವಿಧಿಸುವ ಪ್ರೀತಿ, ಅನುಕಂಪ, ನಿಸ್ವಾರ್ಥತೆ, ಸತ್ಯಸಂಧತೆ, ಕ್ಷಮೆ ಮೊದಲಾದ ನೈತಿಕ ಸ್ವಭಾವಗಳನ್ನು ತೋರ್ಪಡಿಸುವವರು ಇವರಲ್ಲಿ ಎಷ್ಟು ಮಂದಿಯಿದ್ದಾರೆ? ತದ್ವಿರುದ್ಧವಾಗಿ ಅವರಲ್ಲಿ ಬಹುತೇಕರು ಪರಸ್ಪರ ಸ್ವಾರ್ಥತೆ ಹಾಗೂ ಧನಮೋಹದ ಪ್ರತೀಕ

ಗಳಾಗಿ ಬಿಡುತ್ತಾರೆ. ಹಾಗಿರುವಾಗ ನಮ್ಮ ಧರ್ಮಾನುಷ್ಠಾನ ಬರೇ ಒಂದು ಅಭಿನಯವಾಗಿ ಬಿಡುತ್ತದೆ. ಅವುಗಳಿಗಾದರೋ ಮನುಷ್ಯಜೀವಿತವನ್ನು ಯಾವ ವಿಧದಲ್ಲೂ ರೂಪೀಕರಿಸಲು ಸಾಧ್ಯವಾಗಲಿಕ್ಕಿಲ್ಲ. ಇಂತಹ ಧರ್ಮವನ್ನು ಬರೇ ಮಾದಕ ವಸ್ತುವೆಂದು ಚಿತ್ರೀಕರಿಸಿದುದಕ್ಕೆ ಕಮ್ಯುನಿಸಮನ್ನು ದೂರಲಿಕ್ಕಾಗುವುದಿಲ್ಲ.

ವಿಜ್ಞಾನದ ವಿಸ್ಮಯಕಾರಿಯಾದ ಪ್ರಗತಿ ಒಂದು ಹೊಸ ಯುಗದ ನಾಂದಿಯನ್ನು ಸೂಚಿಸುತ್ತದೆ. ಈ ಹೊಸ ಯುಗಕ್ಕೆ ಹೊಸ ಮನುಷ್ಯನ ಅಗತ್ಯವಿದೆ. ಗುಂಡಿಯೊಂದನ್ನೊತ್ತಿ ಲೋಕದ ಮೂರನೇ ಎರಡಂಶವನ್ನು ನಾಶಪಡಿಸುವ ಸಾಮರ್ಥ್ಯ ವಿಜ್ಞಾನ ಯುಗ ಮನುಷ್ಯನಿಗೆ ಒದಗಿಸಿದೆ. ಈ ಶಕ್ತಿಯನ್ನು ಮಾನವರಾಶಿಯ ಸಂಪೂರ್ಣ ನಾಶಕ್ಕೆ ಪ್ರಯೋಗಿಸದಿರಲಿಕ್ಕೆ ಮನುಷ್ಯಜೀವಿತದ ಮಹತ್ತಾದ ಉದ್ದೇಶವನ್ನೂ ಈ ಪ್ರಪಂಚ ಸೃಷ್ಟಿಯ ರಹಸ್ಯವನ್ನೂ ತಿಳಿದಿರುವ ಒಬ್ಬ ದೊಡ್ಡ ಮನುಷ್ಯನ ಅವಶ್ಯವಿದೆ ಲೋಕಕ್ಕಿಂದು. ಅಜೇಯ ಅಧ್ಯಾತ್ಮ ಚೈತನ್ಯದಿಂದ ಕೂಡಿದವನಾಗಿರಬೇಕು ವಿಜ್ಞಾನ ಯುಗದ ಹೊಸ ಮನುಷ್ಯ. ಆ ರೀತಿಯ ಒಬ್ಬ ಮನುಷ್ಯನಿಗೆ ಮಾತ್ರ ವಿನಾಶಕಾರಿಯಲ್ಲದ ರಚನಾತ್ಮಕ ಮಾರ್ಗಗಳ ಮೂಲಕ ಈ ಆಧುನಿಕ ಲೋಕವನ್ನು ಮುನ್ನಡೆಸಲು ಸಾಧ್ಯವಿದೆ. ಭೌತಿಕ ವಿಜ್ಞಾನಕ್ಕಾಗಲಿ ತಾಂತ್ರಿಕ ವಿದ್ಯೆಗಾಗಲಿ ಈ ಬಗೆಯ ಮನುಷ್ಯನನ್ನು ಸೃಷ್ಟಿಸಲು ಸಾಧ್ಯವಿಲ್ಲವೆಂದು ನಾವು ಕಂಡಿದ್ದೇವೆ. ಧರ್ಮಕ್ಕೆ ಮಾತ್ರ ಈ ವಿಜ್ಞಾನಯುಗ ಬಯಸುವ ಮನುಷ್ಯನನ್ನು ಸೃಜಿಸಲಿಕ್ಕೆ ಸಾಧ್ಯ.

ಈ ಕಾಲದಲ್ಲಿ ಧರ್ಮದ ಆವಶ್ಯಕತೆಯೇನೆಂದೂ ಇಸ್ಲಾಂ ಹೇಗೆ ಈ ಯುಗದ ಮತವಾಗುವುದೆಂದೂ ಬಹಳ ಯುಕ್ತ ರೀತಿಯಲ್ಲಿ ಲೋಕಕ್ಕೆ ತೋರಿಸಿಕೊಟ್ಟ ಮಹಾತ್ಮರು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಆಗಿದ್ದಾರೆ. "ಸಜೀವ ದೈವ", "ಸಜೀವ ಪ್ರವಾದಿ", "ಸಜೀವ ಧರ್ಮ" ಎಂಬೀ ಮೂರು ವಿಶೇಷಣೆಗಳ ಮೂಲಕ ಅವರು ಪವಿತ್ರ ಖುರ್ಆನ್ ಸಾದರಪಡಿಸುವ ದೈವವನ್ನೂ ಪವಿತ್ರ ಪ್ರವಾದಿ ಮುಹಮ್ಮದ್‌ರನ್ನೂ ಇಸ್ಲಾಂ ಮತವನ್ನೂ ಲೋಕಕ್ಕೆ ಪರಿಚಯಪಡಿಸಿದರು. ನಿರೀಶ್ವರ, ನಿರ್ಮತವಾದಗಳ ಈ ಕಾಲ ಘಟ್ಟದಲ್ಲಿ ಇಸ್ಲಾಮಿನ ಅಧ್ಯಾತ್ಮ ಚೈತನ್ಯವನ್ನು ಆ ಮಹಾಪುರುಷರ ಮೂಲಕ ದೇವನು ಪುನಃ ಲೋಕದಲ್ಲಿ ಬಹಿರಂಗಪಡಿಸಿರುವನು. ಅಹ್ಮದಿಯಾ ಸಂಘಟನೆಯ ಒಬ್ಬ ಸದಸ್ಯ ಇಸ್ಲಾಮನ್ನು ತನ್ನ ವಿಶ್ವಾಸಸಂಹಿತೆಯಾಗಿ ಮಾತ್ರವಲ್ಲ, ತನ್ನ ದೈನಂದಿನ ಜೀವಿತದ ಪ್ರತಿಯೊಂದು ಚಲನೆಯನ್ನು ನಿಯಂತ್ರಿಸುವ ಒಂದು ಸಜೀವ ಶಕ್ತಿಯಾಗಿ ಅಂಗೀಕರಿಸಲು ಬಾಧ್ಯಸ್ತನಾಗಿದ್ದಾನೆ. ಈ ಅಂಗೀಕಾರ ವಿಜ್ಞಾನ ಯುಗದ ವಿನಾಶದಿಂದ ಮನುಷ್ಯರಾಶಿಯನ್ನು ಸಂಪೂರ್ಣವಾಗಿ ರಕ್ಷಿಸುವ ಸಾಮರ್ಥ್ಯದಿಂದ ಕೂಡಿದ ಒಂದು ಹೊಸ ನೇತೃತ್ವದ ಆವಿರ್ಭಾವವನ್ನು ಸೂಚಿಸುತ್ತದೆ.

**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ**

# ಮೈತ್ರಿ ಸಂದೇಶ

"……ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ

"……ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ

**ಪುಟಗಳು: 48** **ಬೆಲೆ: ಒಂದು ರೂಪಾಯಿ** **ಅಂಚೆ ವೆಚ್ಚ: ಉಚಿತ**

**ಬರೆಯಿರಿ:** The Editor, YUGARASHMI Kannada Quarterly,
10-23/1008, Ansari Road, Bunder, Mangalore-575 001.

# ಕ್ರಿಸ್ ಮಸ್

• ಎನ್. ಹಾಮಿದ್

ಕ್ರೈಸ್ತರು ಆಚರಿಸುತ್ತಿರುವ ಹಬ್ಬಗಳಲ್ಲಿ ಅತ್ಯಂತ ಪ್ರಧಾನವಾದುದು 'ಕ್ರಿಸ್‌ಮಸ್' ಅಥವಾ ಯೇಸುಕ್ರಿಸ್ತರ ಜನ್ಮದಿನಾಚರಣೆಯಾಗಿದೆ. ಅವರು ಈ ಹಬ್ಬವನ್ನಾಚರಿಸುವುದು ಡಿಸೆಂಬರ್ 25ರಂದು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಆದರೆ ಇಂತಹ ಒಂದು ಜನ್ಮದಿನಾಚರಣೆಯು ಬಗ್ಗೆ ಕ್ರೈಸ್ತರ ಧರ್ಮಗ್ರಂಥ ಯಾವ ನಿರ್ದೇಶವನ್ನಾಗಲಿ ಅವರಿಗೆ ನೀಡುವುದಿಲ್ಲ. ಈ ಆಚರಣೆಯ ಯಥಾರ್ಥತೆಯ ಕುರಿತು ಕ್ರೈಸ್ತೇತರರಿಗೆ ಮಾತ್ರವಲ್ಲ, ಕ್ರೈಸ್ತರಲ್ಲೇ ಹಲವರಿಗೆ ತಿಳುವಳಿಕೆಯಿಲ್ಲ. ಆದುದರಿಂದ ಇಲ್ಲಿ ಅದರ ವಸ್ತುಸ್ಥಿತಿಯ ಬಗ್ಗೆ ಸಂಕ್ಷಿಪ್ತವಾಗಿ ಒಂದು ನಿರೂಪಣೆ ಮಾಡುವುದುಚಿತವೆಂದು ಭಾವಿಸುತ್ತೇನೆ.

ಯೇಸುಕ್ರಿಸ್ತರು ಜನಿಸಿದ ವರ್ಷ ಮತ್ತು ದಿನಾಂಕದ ಬಗ್ಗೆ ಬೈಬಲ್ ನಿರ್ದಿಷ್ಟವಾಗಿ ಏನೂ ಹೇಳುವುದಿಲ್ಲ. ಯೇಸುಕ್ರಿಸ್ತರ ಅಪೋಸ್ತಲರಾಗಲಿ ಅವರ ಶಿಷ್ಯರಾಗಲಿ ಕ್ರಿಸ್‌ಮಸ್ ಆಚರಿಸಿದುದಾಗಿ 'ಹೊಸ ಒಡಂಬಡಿಕೆ'ಯಿಂದ ಸಾಬೀತಾಗುವುದಿಲ್ಲ. ಮಾತ್ರವಲ್ಲ, ಕ್ರಿಸ್ತಶಕ 5ನೇ ಶತಮಾನದ ವರೆಗೆ ಯೇಸುಕ್ರಿಸ್ತರ ಜನ್ಮದಿನ ಜನವರಿ 6ರಂದೋ, ಮಾರ್ಚ್ 25ರಂದೋ, ಎಪ್ರಿಲ್ 19ರಂದೋ, 20ರಂದೋ, ನವಂಬರ್ 17ರಂದೋ, ಡಿಸೆಂಬರ್ 25ರಂದೋ ಎಂಬ ಸಂಗತಿ ನಿರ್ಧಾರವಾಗಿರಲಿಲ್ಲ. ಆದಿ ಶತಮಾನಗಳಲ್ಲಿ ಜೀವಿಸಿದ್ದ ಕ್ರೈಸ್ತ ಪುರೋಹಿತರಿಗೆ ಈ ವಿಷಯದಲ್ಲಿ ಅಧಿಕೃತವಾದೊಂದು ಹೇಳಿಕೆ ಹೊರಡಿಸಲಿಕ್ಕೆ ಯಾವ ಆಧಾರವಾಗಲಿ ಲಭಿಸಿರಲಿಲ್ಲ. ಅಲೆಕ್ಸಾಂಡ್ರಿಯಾದ ಕ್ಲೈಮೆಂಟ್ ಎಂಬ ಪುರೋಹಿತ ಎರಡನೆಯ ಶತಮಾನದ ಕೊನೆಯಲ್ಲಿ, ಅಷ್ಟರ ವರೆಗೆ ಯೇಸುಕ್ರಿಸ್ತರ ಜನ್ಮದಿನವೆಂದು ವಿವಿಧ ಪಂಥದವರು ತಿಳಿದುಕೊಂಡಿದ್ದ ತಾರೀಕುಗಳೆಲ್ಲಾ ಬರೇ ಮಿಥ್ಯವೆಂದು ತಳ್ಳಿ ಹಾಕಿ ತನ್ನ ಮಟ್ಟಿಗೆ ಅತ್ಯಂತ ಸರಿಯಾದುದು ಕ್ರಿ. ಪೂ. 3ನೇ ವರ್ಷ ನವಂಬರ್ 17ನೇ ದಿನಾಂಕವೆಂದು ಪ್ರತಿಪಾದಿಸಿದನು. ಇನ್ನೊಂದು ಕಡೆಯಲ್ಲಿ, ಕ್ರಿ. ಶ. 385ರಲ್ಲಿ ಪೋಪ್ ಸಿರಿಕ್ಯೂಸ್ (Siricuis) ಕೂಡ ಜನವರಿ 6ರಂದು ಕ್ರಿಸ್ತರ ಹುಟ್ಟುದಿನವೆಂದು ತಿಳಿದುಕೊಂಡಿದ್ದರು. ತನ್ನ ಪೂರ್ವಿಕರ ಪೈಕಿ ಪೋಪ್ ಲಿಬೆರ‍್ಯೂಸ್ (353–4) ಕ್ರಿಸ್ತರ ಹುಟ್ಟುದಿನ ಡಿಸೆಂಬರ್ 25ರಂದು ಎಂದು ವಿಧಿಸಿದ್ದನ್ನು ತಿರಸ್ಕರಿಸಿ ಪೋಪ್ ಸಿರಿಕ್ಯೂಸ್ ಅದನ್ನು ಜನವರಿ 6 ಎಂದು ತಿದ್ದಿದರು. ಅವರು ಹೀಗೆ ದಿನಾಂಕವನ್ನು ಬದಲಾವಣೆ ಮಾಡಿದ್ದು ತನಗೆ ಆ ಬಗ್ಗೆ ಏನಾದರೂ ಯುಕ್ತವಾದ ಪುರಾವೆ ಲಭಿಸಿದ ಕಾರಣದಿಂದಾಗಿರಲಿಲ್ಲ; ಕ್ರಿಸ್ತರಿಗೆ ಜ್ಞಾನಸ್ನಾನ ಮೂಲಕ ಪುನರ್ಜನನ ಸಿದ್ಧಿಸಿದ್ದು ಜನವರಿ 6ರಂದು ಎಂಬ ಪ್ರಚಲಿತ ವಿಶ್ವಾಸವನ್ನು ಆಧಾರವಾಗಿಟ್ಟು, ಅವರು ಜನ್ಮತಾಳಿದ್ದು ಸಹ ಅದೇ ತಾರೀಕಿನಂದಾಗಿರಬೇಕೆಂಬ ಊಹೆಯನ್ನು ಅವಲಂಬಿಸಿ ಮಾತ್ರವಾಗಿತ್ತು. ಹೀಗೆ, ಐದನೇ ಶತಮಾನದ ವರೆಗೆ ಪೋಪ್ ಮಾರ್ಕ್ ಅವರಿಗೆ ಸಹ ಈ ವಿಷಯದಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವಂತಹ ಅಪ್ರಮಾದವಾದೊಂದು ತೀರ್ಮಾನ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಪೋಪ್ ಲಿಬೆರ‍್ಯೂಸ್ ಅವರ ಕಾಲಕ್ಕಿಂತ ಮುಂಚೆ ಕ್ರಿಸ್‌ಮಸ್ ಒಂದು ಕ್ರೈಸ್ತ ಹಬ್ಬವೆಂದು ಅಂಗೀಕರಿಸಲ್ಪಟ್ಟುದಕ್ಕೆ ಪುರಾವೆ ಕಾಣುವುದಿಲ್ಲ. ಅದೇ ಪ್ರಕಾರ 534ನೇ ವರ್ಷದ ವರೆಗೆ ಕ್ರಿಸ್‌ಮಸ್ ದಿನ ಕಚೇರಿಗಳಿಗೆ ರಜಾ ದಿನವೆಂದು ಸಾರಲ್ಪಡುತ್ತಿರಲಿಲ್ಲ.

ಮಾತ್ರವಲ್ಲ, 353ನೇ ವರ್ಷದಲ್ಲಿ ಕೂಡ ರೋಮಿನಲ್ಲಿ ಕ್ರಿಸ್‌ಮಸ್ ಆಚರಿಸಲ್ಪಡುತ್ತಿದ್ದುದು ಜನವರಿ 6ರಂದಾಗಿತ್ತು. ಜೆರೋಸಲೇಮಿನಲ್ಲೂ ಇದೇ ದಿನವನ್ನು 410ನೇ ವರ್ಷದ ವರೆಗೆ ಕ್ರಿಸ್ತರ ಜನ್ಮದಿನವೆಂದು ಗ್ರಹಿಸಲಾಗಿತ್ತು. ಆ ವರ್ಷ ಅಲ್ಲಿಯ ಬಿಷಪ್ ಡಿಸೆಂಬರ್ 25ರಂದಾಗಿದೆ ಕ್ರಿಸ್ತರ ಸರಿಯಾದ ಜನ್ಮದಿನವೆಂದು ಘೋಷಿ

ಸಿದ ಬಳಿಕ ಅಲ್ಲಿ ಸಹ ಹಳೆಯ ಕ್ರಮ ಬದಲಿಸಿತು. ಈ ಸಂಗತಿಯ ಕುರಿತು "ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ" ಎಂಬ ವಿಜ್ಞಾನಕೋಶದಲ್ಲಿ ಉಲ್ಲೇಖಿಸಲಾಗಿದೆ. ಅದೇ ಪ್ರಕಾರ, ಅಲೆಕ್ಸಾಂಡ್ರಿಯದಲ್ಲೂ ಐದನೇ ಶತಮಾನದ ಪೂರ್ವಾರ್ಧದಲ್ಲಿ ಡಿಸೆಂಬರ್ 25 ಕ್ರಿಸ್ತರ ಜನ್ಮದಿನವೆಂದು ಅಂಗೀಕರಿಸಲ್ಪಟ್ಟಿತು. ಆದರೆ ಗ್ರೀಕ್ ಸಭೆಗಳು ಇಂದು ಸಹ ಆ ದಿನವನ್ನು ಕ್ರಿಸ್ತರ ಜನ್ಮದಿನವೆಂದು ಒಪ್ಪುವುದಿಲ್ಲ.

ವಾಸ್ತವವಾಗಿ, ಬ್ರಿಟನ್ ಮತ್ತು ಪಶ್ಚಿಮ ಯೂರೋಪಿನ ಜನತೆ ಕ್ರೈಸ್ತ ಮತದ ಆವಿರ್ಭಾವಕ್ಕೆ ಮೊದಲೇ ಡಿಸೆಂಬರ್ 25ನ್ನು ಒಂದು ಉತ್ಸವ ದಿನವೆಂದು ಆಚರಿಸುತ್ತಿದ್ದರು. ಅವರು 'ಮಿತ್ರ' ದೇವನ ಜನ್ಮದಿನವೆಂದು ಕಲ್ಪಿಸಿಕೊಂಡು ಆ ದಿನವನ್ನು ಹಬ್ಬದಿನವಾಗಿ ಅಂಗೀಕರಿಸಿದ್ದರು. ಕ್ರೈಸ್ತಮತವನ್ನು ಸ್ವೀಕರಿಸಿದ ನಂತರವೂ ಅವರು ಅದೇ ದಿನದಂದು ಉತ್ಸವವನ್ನಾಚರಿಸುತ್ತಿದ್ದರು. ಅವರು ತಮ್ಮ ಪೂರ್ವಮತಾಚರಣೆಯಲ್ಲಿ ಸೇರಿದ ವಿಗ್ರಹಾರಾಧನೆಯಂತಹ ಹಲವು ಸಂಪ್ರದಾಯಗಳನ್ನು ಕ್ರೈಸ್ತಮತಾಚಾರಣೆಗಳಾಗಿ ಪರಿವರ್ತಿಸಿದಂತೆಯೇ ಈ ಆಚರಣೆಯನ್ನು ಸಹ ಕ್ರೈಸ್ತೀಕರಿಸಿದರು. ಇದು ಅವರಿಗೆ ಹೆಚ್ಚು ಕಷ್ಟವಾಗಲಿಲ್ಲ. ಮೊದಲು ಅವರು ಆರಾಧಿಸುತ್ತಿದ್ದ 'ಮಿತ್ರದೇವ' (Sun God)ನ ಬದಲಿಗೆ ಈಗ ಪುತ್ರದೇವ (Son God)ನನ್ನು ಸ್ವೀಕರಿಸಿದ ಮೂಲಕ ಪೂರ್ವಾಚಾರ ಪ್ರಕಾರದ ಆ ಆಚರಣೆಯನ್ನು ಪುತ್ರದೇವನ ಜನ್ಮದಿನವೆಂದು ಬದಲಿಸಿ ಅಂಗೀಕರಿಸಿದರು. ಒಂದು ಅಕ್ಷರದ ಬದಲಾವಣೆಯಿಂದ ಮತಪರವಾದ ದೊಡ್ಡದಾದೊಂದು 'ಅಡಿಮೇಲ'ನ್ನು ಅವರು ಸಾಧಿಸಿದರು.

ಹೆಚ್ಚೇಕೆ? ಕ್ರಿ. ಶ. 532ರಲ್ಲಿ ರೋಮಿನ ಓರ್ವ ಮಠಾಧಿಪತಿಯೂ ಜ್ಯೋತಿಷ್ಯನೂ ಆದ ಡಯೋನಿಷ್ಯಸ್ ಎಕ್ಸಿಗ್ಯೂಸ್ [Dionysius Exigues] ಎಂಬ ಸನ್ಯಾಸಿ ಯೇಸುಕ್ರಿಸ್ತರ ಜನನ ವರ್ಷವನ್ನೂ ತಾರೀಕನ್ನೂ ನಿರ್ಧರಿಸಲಿಕ್ಕಾಗಿ ನಿಯೋಗಿಸಲ್ಪಟ್ಟು* ಆತನು ಡಿಸೆಂಬರ್ 25 ರಂದು ಕ್ರಿಸ್ತರ ಹುಟ್ಟು ದಿನವೆಂದು ಲೆಕ್ಕ ಹಾಕಿ ತೀರ್ಮಾನಿಸುವ ತನಕ ಈ ವಿಷಯದ ಬಗ್ಗೆ ಏಕಾಭಿಪ್ರಾಯವಿರಲಿಲ್ಲ. ಆದರೆ ಈ ದಿನಾಂಕವನ್ನು ಯಾವ ಆಧಾರದಲ್ಲಿ ನಿರ್ಣಯಿಸಲಾಯಿತೆಂದು ಆತನು ಪ್ರತಿಪಾದಿಸಲಿಲ್ಲ. ಆದರೆ ಈ ತಾರೀಕು ಮತ್ತು ಅದರ ಸಮೀಪದ ಕೆಲವು ದಿನಾಂಕಗಳು ಸೂರ್ಯದೇವನ ಮೂರ್ತಿಗಳಾದ ಮಿತ್ರ, ಒಸಿರಿಸ್ ಮೊದಲಾದ ದೇವತೆಗಳ ಜನ್ಮದಿನಗಳೆಂದು ಪೂರ್ವಕಾಲದ ವಿಗ್ರಹಾರಾಧಕರು ಆಚರಿಸುತ್ತಿದ್ದರೆಂಬ ಸಂಗತಿ ಇಲ್ಲಿ ಮುಖ್ಯವಾಗಿ ಉಲ್ಲೇಖಾರ್ಹ.

ಹೀಗೆ, ಪಶ್ಚಿಮ ಯುರೋಪಿನ ವಿಗ್ರಹಾರಾಧಕರ ಸೃಷ್ಟಿಪೂಜಾಚಾರಗಳ ಅವಶಿಷ್ಟವಾದ ಈ ಕ್ರಿಸ್‌ಮಸ್ ಸಂಪ್ರದಾಯದ ವಿರೋಧವಾಗಿ 17ನೇ ಶತಮಾನದ ಉತ್ತರಾರ್ಧದಲ್ಲಿ ಕೂಡ ಪ್ರತಿಭಟನೆ ವ್ಯಕ್ತಪಡಿಸಲಾಗಿತ್ತು. ಹಾಗೆ ಕೆಲವು ಅನಾಚಾರಗಳು ಒಳಗೊಂಡಿರುವುದರಿಂದಲೇ ಇಂಗ್ಲೆಂಡಿನ 'ಪ್ಯೂರಿಟನ್' ಸಭೆ 1664ರಲ್ಲಿ ಒಂದು ಪಾರ್ಲಿಮೆಂಟ್ ನಿಯಮ ಮೂಲಕ ಆ ದಿನ ಯಾವ ರೀತಿಯ ಉಲ್ಲಾಸದಲ್ಲೂ ಪಾಲುಗೊಳ್ಳದೆ ವ್ರತಾನುಷ್ಠಾನ ಮಾಡಬೇಕೆಂದು ವಿಧಿಸಿತು. ಆದರೆ ಈ ನಿಯಮ ಅನಂತರ ಚಾರ್ಲ್ಸ್ ದ್ವಿತೀಯನ ಆಳ್ವಿಕೆ ಕಾಲದಲ್ಲಿ ರದ್ದುಗೊಳಿಸಲ್ಪಟ್ಟಿತು. ಹಾಗೆ, ಸೃಷ್ಟಿಪೂಜಾಪರವಾದ ಹಳೆಯ ಕ್ರಿಸ್‌ಮಸ್ ಸಂಪ್ರದಾಯ ಪುನರುಜ್ಜೀವನಗೊಂಡು ಅದು ಆಂಗ್ಲೇಯರೆಡೆಯಲ್ಲಿ ಅಂದಿನಿಂದ ವ್ಯವಸ್ಥಿತವಾಗಿ ನಡೆಯುತ್ತಾಬಂತು. ಒಟ್ಟಿನಲ್ಲಿ, ಯೇಸುಕ್ರಿಸ್ತರ ಜನನ ಡಿಸೆಂಬರ್ 25ರಂದು ಎಂಬುದು ಆಧಾರರಹಿತವಾದ ಒಂದು ಊಹೆಯೆಂದೂ ಅದನ್ನವಲಂಬಿಸಿದ ಇಂದಿನ ಕ್ರಿಸ್‌ಮಸ್ ಆಚರಣೆ ಯೇಸು ಕ್ರಿಸ್ತರಿಗೂ ಆದಿಕಾಲದ ಸಭೆಗಳಿಗೂ ಯಾವ ಸಂಬಂಧವೂ ಇಲ್ಲದ ಒಂದು ಅನಾಚಾರವೆಂದೂ ಇಷ್ಟರಿಂದಲೇ ವಿಶದವಾಗಿದೆಯೆಂದು ಭಾವಿಸುತ್ತೇನೆ. ★

* Pagan and Christian Creeds, Page 26.

★

### ಇಸ್ಲಾಂ - ನವೀನ ಪಾಶ್ಚಾತ್ಯರ ನೋಟದಲ್ಲಿ

# ಇಸ್ಲಾಂ ಧರ್ಮದಲ್ಲಿ ಸೂಫೀ ಪಂಥದ ಸ್ಥಾನ

—ಡಾ। ಲೋರಾ ವಿ. ವೇಗ್ಲಿಯೇರಿ

ಕಾಲಕ್ರಮೇಣ ಇತರ ಧರ್ಮಗಳಂತೆ ಇಸ್ಲಾಮ್ ಧರ್ಮದಲ್ಲಿಯೂ ಭಕ್ತಿಪಾರವಶ್ಯದಿಂದ ಕೂಡಿದ ಧ್ಯಾನ ಮಾರ್ಗವು ವೃದ್ಧಿಯನ್ನು ಪಡೆಯಿತು. ಇದು ಸಹಜವಾದ ಆಂತರಿಕವಾದ ಬೆಳವಣಿಗೆಯ ಕಾರಣದಿಂದಲೋ ಅಥವಾ ಹೊರಗಿನ ಪ್ರಭಾವಗಳ ಪರಿಣಾಮವಾಗಿಯೋ ಉಂಟಾಯಿತು. ಪ್ರಾರಂಭ ಘಟ್ಟದಲ್ಲಿ ಇಸ್ಲಾಮ್ ಧರ್ಮದಲ್ಲಿ ದೈನಂದಿನ ಕರ್ತವ್ಯಗಳು ಧಾರ್ಮಿಕವಾದ ಚಿಂತನೆಗಿಂತ ಉನ್ನತವಾದ ಸ್ಥಾನದಲ್ಲಿರಿಸಲ್ಪಟ್ಟ ಕಾರಣ ಈ ಧ್ಯಾನ ಮಾರ್ಗವು ವೃದ್ಧಿಯಾಗುವ ಸಾಧ್ಯತೆಯಿರಲಿಲ್ಲ. ನೇರವಾದ ಸಮೀಪದ ದಾರಿಯಲ್ಲಿ ಸೃಷ್ಟಿಕರ್ತನನ್ನು ತಲುಪಿ ಆತನೊಡನೆ ಬಾಂಧವ್ಯ ಸ್ಥಾಪಿಸುವುದೇ ಎಲ್ಲಾ ವಿಧದ ಯಥಾರ್ಥ ಭಕ್ತಿಯ ಮೂಲೋದ್ದೇಶವಾಗಿದೆ. ಆದುದರಿಂದ ದೇವರ ಕುರಿತು ಸ್ವಯಾನುಭವದ ಜ್ಞಾನ ವಿಶ್ವಾಸದ ಒಂದು ಭಾಗವಾಗಿದೆ.

ವಿಶ್ವಾಸಿಯ ಈ ಆವಶ್ಯಕತೆಯಿಂದ ಜನ್ಮ ತಳೆದ ಇಸ್ಲಾಮಿಕ ಧ್ಯಾನಮಾರ್ಗ ಸಾಂಕೇತಿಕವಾಗಿ ಸೂಫೀ ಪಂಥ ಎಂಬ ಹೆಸರಿನಲ್ಲಿ ಕರೆಯಲ್ಪಡುತ್ತಿದ್ದು, ಇದು ಪೈಗಂಬರರು ತನ್ನ ಶಿಷ್ಯರೊಡನೆ ಸಂಭಾಷಿಸುವಾಗ ಅನುಭವಿಸುತ್ತಿದ್ದ ದೈವಿಕ ಬಾಂಧವ್ಯದ ಗಾಢವಾದ ಭಾವನೆಯಲ್ಲಿ ಇದರ ಮೂಲವನ್ನು ಹೊಂದಿದ್ದು ಪೈಗಂಬರರ ಗಾಢವಾದ ದಯೆಯ ಉದಾಹರಣೆಗಳ ಮೇಲೆಯೂ ಇದರ ತಳಹದಿ ಇಡಲ್ಪಟ್ಟಿತು. ನವ ಪ್ಲೇಟೋನಿಕ್ ಸಿದ್ಧಾಂತಗಳ ವಿಸ್ತಾರವಾದ ಹರಡುವಿಕೆಯೂ ಈ ಪಂಥದ ಬೆಳವಣಿಗೆಗೆ ಸಹಾಯಕವಾಯಿತು. ನಾವು ಇದರ ಕುರಿತು ಸ್ಪಷ್ಟವಾದ ಅಭಿಪ್ರಾಯವನ್ನು ಹೊಂದಬೇಕಾಗಿದೆ. ಪವಿತ್ರ ಖುರ್ ಆನಿನ ವಚನಗಳನ್ನು ಮೇಲಿಂದ ಮೇಲೆ ಓದುವಾಗ ತಿಳಿಯಬಹುದಾದ ಅರ್ಥಕ್ಕಿಂತ ಗಾಢವಾದ ಮತ್ತು ಮರೆಯಾದ ಅರ್ಥಗಳು ಆ ವಚನಗಳಲ್ಲಿವೆ ಎಂಬ ಅಭಿಪ್ರಾಯ ಆ ವಚನಗಳ ನಿರ್ದಿಷ್ಟವಾದ ಅರ್ಥ ವ್ಯಾಪ್ತಿಯಿಂದಲೂ ಆಚಾರಗಳಿಂದಲೂ ತಲೆ ತಪ್ಪಿಸುವ ಉದ್ದೇಶದಿಂದಾಗಿರಲಿಲ್ಲ; ಅದು ದಿವ್ಯಗ್ರಂಥದ ವಚನಗಳು ಸಾಮಾನ್ಯ ವ್ಯಾಖ್ಯಾನಗಾರರು ವ್ಯಕ್ತಗೊಳಿಸಿದ ಅರ್ಥಗಳಿಗಿಂತ ಹೆಚ್ಚಿನ ಅರ್ಥ ವೈಶಾಲ್ಯವನ್ನು ಹೊಂದಿವೆ ಎಂಬ ದೃಢ ವಿಶ್ವಾಸದಿಂದ ಉದ್ಭವಿಸಿದುದಾಗಿದೆ.

ಆಂತರಿಕ ಬೆಳಕಿನ ಕುರಿತು ವಿವರಿಸುವ ಅತ್ಯಂತ ಹಳೆಯ ಹೇಳಿಕೆಗಳು ಪೈಗಂಬರರಾಗಲಿ ಅವರ ಆಧ್ಯಾತ್ಮಿಕ ಉಪದೇಶಗಳ ನೇರವಾದ ವಾರೀಸುದಾರರಾಗಲಿ ಜನರನ್ನು ಪ್ರಾಪಂಚಿಕವಾದ ಜವಾಬ್ದಾರಿಯುತ ಜೀವನವನ್ನು ತೊರೆದು ವಿಶ್ವಾಸದಾರ್ಢ್ಯವನ್ನೂ ಧಾರ್ಮಿಕ ಆಚಾರಗಳ ಆಂತರಿಕ ಪರಿಪೂರ್ಣತೆಯನ್ನೂ ಪಡೆಯಲು ಆಮಂತ್ರಿಸಿರುವರು ಎಂಬ ಸಿದ್ಧಾಂತಕ್ಕೆ ಯಾವುದೇ ಬಲವನ್ನು ನೀಡುವುದಿಲ್ಲ. ಸನ್ಯಾಸತ್ವ ಮತ್ತು ಅದರ ಎಲ್ಲಾ ರೀತಿಯ ಪ್ರದರ್ಶನವನ್ನು ಪೈಗಂಬರರು ಖಂಡಿಸಿರುವರು. ಹೀಗಿದ್ದರೂ ಹಲವು ಮುಸ್ಲಿಮರು ಆತ್ಮ ಸಂಬಂಧವಾದ ಪರಿಪೂರ್ಣತೆಯನ್ನು ಗಳಿಸುವ ಅಭಿಲಾಷೆಯಿಂದ ಪೂರಿತರಾಗಿ ಮಾನವ ಜೀವಿತ ಮುಂದುವರಿಯುತ್ತಿರುವ ಒಂದು ಹೋರಾಟವೆಂಬುದನ್ನು ಮರೆತು ಮತ್ತು ಉಮವೀ ಖಲೀಫರ ಕಾಲದಲ್ಲಿದ್ದ ಬಿಂಬಾರಾಧಕರ ಅತ್ಯಧಿಕ ವೈಭವಕ್ಕಿಂತ ಹೆಚ್ಚಾದ ಭೋಗವಿಲಾಸಗಳಿಂದ ಬೇಸತ್ತು ಅಥವಾ ತಮ್ಮ ಧಾರ್ಮಿಕವಾದ ಪುಣ್ಯ ಭಾವನೆಗಳಿಗೆ ವ್ಯತಿರಿಕ್ತವಾದ ರಾಜಕೀಯ ಸಂಭವಗಳಿಂದ ಮನನೊಂದು ಅಥವಾ ಇತರ ಕಾರಣಗಳಿಂದ ಈ ವಿರೋಧಾಭಿಪ್ರಾಯಗಾರರು ತಮ್ಮನ್ನು ಪ್ರಾಪಂಚಿಕ ವ್ಯವಹಾರಗಳಿಂದ ದೂರವಿರಿಸಿಕೊಂಡು ದೈವಾರಾಧನೆಯಲ್ಲೇ ಮಗ್ನವಾಗಿರುವ ಒಂದು ಜೀವಿತಕ್ಕೆ ಮುನ್ನಡೆದರು.

ದೈವಭಕ್ತಿಯಿಂದ ನಿಷ್ಕ್ರಿಯತೆಗೆ ಬಹಳ ಸಮೀಪವಿದೆ. ನಿಷ್ಕ್ರಿಯತೆಯಿಂದ ಸೂಫೀ ಸಂಪ್ರದಾಯಕ್ಕೆ ಬೆಳವಣಿಗೆ ಸಹಜವಾಗಿದೆ. ಪ್ರಾಚೀನವಾದ ದೈವಿಕ ಬಾಂಧವ್ಯ ಸ್ಥಾಪನಾ ಮಾರ್ಗ, ದೇವಸಾಮೀಪ್ಯ ಪ್ರಾಪ್ತಿ ಪ್ರಾಪಂಚಿಕವಾದ ವ್ಯವಹಾರಗಳ ಮಧ್ಯೆ ಅಸಾಧ್ಯವೆಂಬ ಆಂತರಿಕ

ಭಾವನೆ, ಇಸ್ಲಾಮ್ ಧರ್ಮದಲ್ಲಿ ಆತ್ಮ ಸಂಬಂಧವಾದ ಬೆಳವಣಿಗೆಯ ಒಂದು ಹೊಸ ಸಿದ್ಧಾಂತವು, ಇತರ ಧರ್ಮಗಳಲ್ಲಿರುವಂತೆ, ಮನುಷ್ಯನು ತನ್ನ ವ್ಯಕ್ತಿತ್ವವನ್ನು ಮರೆತು ಪರಿಪೂರ್ಣವಾಗಿ ದೇವಧ್ಯಾನದಲ್ಲಿ ಕಾಲ ಕಳೆಯಬೇಕೆಂಬ ಭಾವನೆಗೆ ಪ್ರೇರಕವಾಯಿತು. ಮನುಷ್ಯನು ತನ್ನನ್ನು ಕಂಡುಕೊಂಡು ಎಲ್ಲಾ ವಿಧದ ಪ್ರಾಪಂಚಿಕ ವಸ್ತುಗಳಿಂದ ತನ್ನನ್ನು ಸ್ವತಂತ್ರಗೊಳಿಸಿ, ದೇವರ ಸೌಂದರ್ಯ ಮತ್ತು ಒಳ್ಳೆಯತನಕ್ಕೆ ಪ್ರತಿಕ್ರಿಯೆ ತೋರಲು ಎಲ್ಲಾ ವಿಧದ ಪ್ರಯತ್ನಗಳನ್ನು ಮಾಡಬೇಕಾಗಿದೆ. ಅವನು ತನ್ನ ಸ್ವಂತ ಜೀವನಕ್ಕೆ ಸಂಬಂಧಿಸಿರುವ ಎಲ್ಲಾ ಬಾಹ್ಯ ವಸ್ತುಗಳಿಂದ ತನ್ನ ಸಂಬಂಧ ಕಡಿದುಕೊಂಡು ತನ್ನ ಆತ್ಮವನ್ನು ಏಕ ಮಾತ್ರ ಯಥಾರ್ಥ ಸಂಗತಿಯಾದ ದೈವಾಸ್ತಿತ್ವದೊಂದಿಗೆ ಜೊತೆಗೂಡಿಸಬೇಕಾಗಿದೆ. ಇದೊಂದು ಉನ್ನತವಾದ ಉದ್ದೇಶವಾಗಿದೆ, ಇದು ಅತ್ಯುನ್ನತ ಮಟ್ಟದ ಆತ್ಮಸಂಬಂಧವಾದ ಬೆಳವಣಿಗೆಯ ಅನ್ವೇಷಣೆಯಲ್ಲಿರುವವರನ್ನು ಆಕರ್ಷಿಸದೆ ಇರದು. ಇದು ಮುಸ್ಲಿಮರಿಗೆ ಬಹಳ ಒಳಿತನ್ನುಂಟುಮಾಡಿತು. ಅದು ಮುಸ್ಲಿಮರಲ್ಲಿ ದೀರ್ಘವಾದ ಮತ್ತು ಗಾಢವಾದ ಪರಿಶ್ರಮದಿಂದ ದೇವರ ಸಾಮಿಪ್ಯಗಳಿಸಬಹುದೆಂಬ ಭಾವನೆಯನ್ನು ನೆಲೆಗೊಳಿಸಿತು. ಅದು ಆತ್ಮ ಸಂಬಂಧವಾದ ಅಭಿಮಾನದ ಭಾವನೆಯನ್ನು ವೃದ್ಧಿಗೊಳಿಸಿತು. ಅದು ಅಂಧವಾದ ಮತ್ತು ಮೂಢವಾದ ಅನುಸರಣೆಯ ಸ್ಥಾನದಲ್ಲಿ ತ್ಯಾಗಮಯವಾದ ಶಿಸ್ತಿನ ಮೂಲಕ ಸ್ವಯಂ ಜ್ಞಾನಗಳಿಸುವ ಮಾರ್ಗವನ್ನು ತೆರೆಯಿತು ಮತ್ತು ಆತ್ಮವು ಪ್ರಾಪಂಚಿಕವಾದ ಮಾನದಂಡಕ್ಕೆ ಸಮ್ಮತಿ ಸೂಚಿಸದಂತೆ ತಡೆಯಿತು.

ಸೂಫೀ ಪಂಥ ಅದಕ್ಕನುಗುಣವಾದ ಶಿಸ್ತಿನಿಂದ ದುರದೃಷ್ಟವಶಾತ್ ಬೇರ್ಪಟ್ಟಾಗ ಅದರ ಸ್ವರೂಪ ಅನೇಕ ಮುಸ್ಲಿಮರ ಮನಸ್ಸಿನಲ್ಲಿ ಪೈಗಂಬರ್ ಮುಹಮ್ಮದ್ ಬೋಧಿಸಿದ ಮೂಲ ತತ್ವಗಳಿಗೆ ವ್ಯತಿರಿಕ್ತವಾದ ರೀತಿಯಲ್ಲಿ ರೂಪ ಪಡೆಯಿತು. ಇದರ ಫಲವಾಗಿ ಬಹುದೈವ ಸಂಬಂಧವಾದ ಭಾವನೆಗಳೂ ಹೊಸ ಮತ್ತು ವಿಚಿತ್ರ ನಿಬಂಧನೆಗಳೂ ಭ್ರಷ್ಟ ನೈತಿಕ ತತ್ವಗಳೂ ತಲೆದೋರಿದುವು. ಒಂದು ಭಯಂಕರವಾದ ಆಪತ್ತು ಇಸ್ಲಾಮಿಗೆ ಬಂದೆರಗಲು ಸಿದ್ಧವಾಯಿತು. ಇದೇ ಸಂದರ್ಭದಲ್ಲಿ ಸೂಫಿ ಪಂಥದಲ್ಲಿ ತಲೆದೋರಿದ ಭ್ರಷ್ಟಾಚಾರಗಳಿಗಿಂತ ಪ್ರಾಯಶಃ ಹೆಚ್ಚು ಆಪತ್ಕರವಾದ ಇನ್ನೊಂದು ಬೆಳವಣಿಗೆಯೂ ಇಸ್ಲಾಮಿನಲ್ಲಿ ಉಂಟಾಯಿತು. ಅದು ಸಂಪ್ರದಾಯಬದ್ಧ ಧಾರ್ಮಿಕ ಶಾಸ್ತ್ರವಾಗಿತ್ತು. (ದುರದೃಷ್ಟವಶಾತ್, ನಿರ್ಬಂಧಾತ್ಮಕವಾದ ಸಮ್ಮತಿ ಪಡೆಯುವಿಕೆ ಮತ್ತು ಭಿನ್ನಾಭಿಪ್ರಾಯದ ದಮನ ಎಲ್ಲಾ ಧಾರ್ಮಿಕ ವ್ಯವಸ್ಥೆಗಳ ಶಾಪವಾಗಿದೆ). ಈ ಧಾರ್ಮಿಕ ಶಾಸ್ತ್ರ ಬಹಳ ಕ್ಲಿಷ್ಟಕರವಾದ ಸಮಸ್ಯೆಗಳ ಕುರಿತು ಒಣಚರ್ಚೆಗಳನ್ನೊಳಗೊಂಡಿದ್ದು ಜನಸಾಮಾನ್ಯರು ತಮ್ಮ ದೈನಂದಿನ ಜೀವಿತದಲ್ಲಿ ಅರ್ಥಮಾಡಲು ಅಸಾಧ್ಯವಾಗಿದ್ದುವು. ಈ ತಾತ್ವಿಕ ಧಾರ್ಮಿಕ ಶಾಸ್ತ್ರ ಮನುಷ್ಯನ ಆತ್ಮದ ಧಾರ್ಮಿಕ ಆಕಾಂಕ್ಷೆಗಳನ್ನು ಪೂರೈಸದಂತಹ ಒಂದು ಶುಷ್ಕ ತತ್ವಸಂಹಿತೆಯಾಗಿ ಪರಿವರ್ತನೆಗೊಂಡಿತು. ಎಲ್ಲಕ್ಕಿಂತ ಹೆಚ್ಚು ದುರಂತಕರವೇನೆಂದರೆ ಹೆಚ್ಚಿನ ಧಾರ್ಮಿಕ ಪಂಡಿತರು ದೈವ ಸಂಬಂಧವಾದ ಪ್ರಶ್ನೆಗಳಿಗುತ್ತರ ಕಂಡುಹಿಡಿಯುವ ಹಂಬಲವನ್ನು ತೊರೆದು ತಮ್ಮ ಎಲ್ಲಾ ಸಮಯವನ್ನು ತಾವು ಅತ್ಯಂತ ಮಹತ್ವದೆಂದು ಗ್ರಹಿಸಿದ, ಕಾರ್ಯರೂಪದಲ್ಲಿ ದೈವಿಕ ನಿಯಮಗಳನ್ನು ಯಾವ ರೀತಿಯಲ್ಲಿ ಪ್ರಯೋಗಿಸಬಹುದು ಎಂಬುದರ ಅಧ್ಯಯನದಲ್ಲಿ ಕಳೆದರು. ಅವರು ವಿಶಾಲವಾದ ಮತ್ತು ಆರೋಗ್ಯಕರವಾದ ಕಲ್ಪನೆಗಳನ್ನು ಕಡೆಗಣಿಸಿ ಅತ್ಯಂತ ಊಹಾಪೋಹದ ಮತ್ತು ವಿಸ್ತಾರವಾದ ವಿವರಣೆ ನೀಡುವಿಕೆಯಲ್ಲಿಯೇ ತಮ್ಮ ಸಮಯವನ್ನು ವಿನಿಯೋಗಿಸಿದರು.

ಇಸ್ಲಾಮಿಗಾಗಿ, ಅದರ ಕಷ್ಟಕರವಾದ ಈ ಜೀವಿತ ಘಟ್ಟದಲ್ಲಿ ಒಬ್ಬ ಮೇಧಾವಿ ಹಾಗೂ ಮತ ಸುಧಾರಕರಾದ ಅಲ್ ಘಜ್ಜಾಲಿ ಈ ನಿರಾಸೆದುಂಬಿದ, ದುರುಪಯೋಗಿಸಲ್ಪಟ್ಟ ಧರ್ಮದ ರಕ್ಷೆಗೆ ಬಂದರು. ಅವರು ಅದಕ್ಕೆ ಹೊಸ, ಆರೋಗ್ಯಕರವಾದ, ನವ್ಯ ಮತ್ತು ಬಲಯುತ ಶಕ್ತಿಯನ್ನಿತ್ತರು. ಅವರು ಆಹ್ವಾನವಿತ್ತ ಭಕ್ತಿಪೂರ್ಣವಾದ ಜೀವಿತ ಇಸ್ಲಾಮಿನ ಮೂಲ ತತ್ವಗಳ ಸಂರಕ್ಷಣೆಯನ್ನೂ ಪೈಗಂಬರರ ಶಿಷ್ಯರ ಜೀವಿತ ವಿಧಾನಗಳನ್ನೂ ನೆನಪಿಸುವಂತೆಯೂ ಇದ್ದು ಅದು ಇಸ್ಲಾಮಿಗೆ ಹೊಸ ಸೌಂದರ್ಯವನ್ನು ನೀಡಿ ಅದರ ಪ್ರಾರಂಭ ಕಾಲದ ಶಕ್ತಿ ಸಾಮರ್ಥ್ಯಗಳನ್ನು ಪುನರುಜ್ಜೀವನಗೊಳಿಸಿತು. ಸೂಫಿಗಳ ಭಾವನೆಯಲ್ಲಿರುವ ಧಾರ್ಮಿಕ ಜೀವನದ ಅಭಿವೃದ್ಧಿ ಇಸ್ಲಾಮಿನ ಆಚಾರ ಸೂತ್ರಗಳಲ್ಲಿ ನೆಲೆಗೊಳಿಸಬೇಕಾಗಿದೆಯೆಂದೂ ನಿಯಮದ ಜ್ಞಾನವೇ ಇದಕ್ಕಿರುವ ಪ್ರವೇಶ "ದ್ವಾರ"ವೆಂದೂ ಇದು ಆಧ್ಯಾತ್ಮಿಕ ಶಿಖರವೇರಲಿಕ್ಕಾಗಿರುವ

ಪ್ರಾರಂಭಸ್ಥಾನವೆಂದೂ ದೇವರನ್ನು ಸ್ವಯಂಪ್ರೇರಣೆಯಿಂದ ಅರಿಯಲಿಕ್ಕಿರುವ ಮಾರ್ಗವೆಂದೂ ಅವರು ವಾದಿಸಿದರು. ಅಲ್‌ಘಝ್ಝಾಲಿಯವರ ಅಭಿಪ್ರಾಯಗಳು "ಇಜ್ಮಾ"(ಮತ ಪಂಡಿತರ ಏಕಾಭಿಪ್ರಾಯ)ದಿಂದ ಸ್ವೀಕರಿಸಲ್ಪಟ್ಟು ಇಸ್ಲಾಮಿನ ಧ್ಯೇಯಗಳು ಮತ್ತು ಧಾರ್ಮಿಕ ನೀತಿಗಳೆಂಬ ಕಟ್ಟಡದ ಮೂಲೆಗಲ್ಲಾಯಿತು. ಅದು ಅನಿಯಂತ್ರಿತವಾದ ಭಾವೋದ್ವೇಗಗಳಿಗೆ ವಶವಾದ ಆಧ್ಯಾತ್ಮಿಕವಾದಿಗಳಿಂದಾಗಿ ನಿಕೃಷ್ಟಾವಸ್ಥೆಗೆ ತಲುಪಿದ ಇಸ್ಲಾಂ ಧರ್ಮವನ್ನು ಪರಿಶುದ್ಧಗೊಳಿಸಿತು. ಧರ್ಮವು ತನ್ನ ದಿಗಂತ ವಿಸ್ತಾರಗೊಂಡುದಾಗಿ ಕಂಡಿತು. ಅದು ತನ್ನ ಪರಿಶುದ್ಧತೆ, ಚಿಂತನೆ ಮತ್ತು ಭಾವಗಳ ಮುಂದುವರಿಕೆಗೆ ಮರಳಿತು. ಅದು ಒಂದು ಗಾಢವಾದ ಅನುಭೂತಿಯನ್ನು ನೀಡುವ ಮತ್ತು ದೇವರ ಮೇಲಿನ ಪ್ರೇಮಕ್ಕೆ ಪ್ರಧಾನ ಸ್ಥಾನ ಕಲ್ಪಿಸುವಂತೆ ಆಯಿತು. ಈ ರೀತಿ ಅದು ಮುಸ್ಲಿಮರ ಜೀವನದಲ್ಲಿ ಬಹಳ ಶ್ರೇಷ್ಠವಾದ ಮತ್ತು ನಿಕಟವಾದ ರೂಪದಲ್ಲಿ ಪ್ರಭಾವ ಬೀರಿತು.

ಸೂಫೀ ಪಂಥವು ತನ್ನ ಪ್ರಭಾವವನ್ನು ಗಾಢವಾಗಿ ಬೀರಿದುದರ ಪರಿಣಾಮವಾಗಿ ವಿವಿಧ ಧಾರ್ಮಿಕ ಕೇಂದ್ರಗಳು ಸ್ಥಾಪನೆಗೊಂಡು ವಿವಿಧ ಸಂಘಗಳ ರಚನೆಯಾಯಿತು. ಝಾವೀಗಳು, ರಿಬಾತ್‌ಗಳು ಮತ್ತು ಖಾನ್‌ಖಾಹ್‌ಗಳು ಮುಸ್ಲಿಮ್ ಲೋಕದ ವಿವಿಧ ಸ್ಥಳಗಳಲ್ಲಿ ಸ್ಥಾಪಿತವಾದುವು. ಎಲ್ಲಿ ಒಬ್ಬ ಸಂತ, ಭಕ್ತ, ವಲಿ, ಪೀರ್, ಸೀದಿ ಅಥವಾ ಇನ್ನಾವುದೇ ರೀತಿಯಲ್ಲಿ ವಿವಿಧ ದೇಶಗಳಲ್ಲಿ ಹೆಸರಿಸಲ್ಪಟ್ಟ ವ್ಯಕ್ತಿ ಒಂದು ವಾಸಸ್ಥಾನವನ್ನು ಮಾಡಿ ತನ್ನ ಸ್ವರವನ್ನು ಏರಿಸಿ ತಾನು ಕಂಡ ದೈವಿಕ ದರ್ಶನಗಳ ಕುರಿತು ಹೇಳಿದಾಗ ಅಲ್ಲಿ ಶಿಷ್ಯರು ಆತನ ಸುತ್ತಲೂ ನೆರೆದರು. ಈ ರೀತಿ ಸೂಫೀ ಪಂಥದ ವಿವಿಧ ಶಾಖೆಗಳು ಸ್ಥಾಪಿತವಾದುವು; ಇಲ್ಲಿ ಆಧ್ಯಾತ್ಮಿಕ ಉಪದೇಶಗಳು ನೀಡಲ್ಪಟ್ಟುವು.

ಆದರೆ ಕೇವಲ ಕೆಲವು ಜನರು ಮಾತ್ರ ಸತ್ಯವಂತರಾದ ಸಂತರೆಂದು ಕರೆಯಲು ಯೋಗ್ಯತೆಯಿದ್ದವರಾದುದರಿಂದ ನಾವು ಯಾವಾಗಲೂ ನಿಷ್ಕಪಟಿಗಳಾದ ಪ್ರಾಮಾಣಿಕರಾದ ಸಂತರ ಜೊತೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ನಾಮಮಾತ್ರ ಸಂತರನ್ನೂ ಜನರ ಅಜ್ಞತೆಯ ಮೇಲೆ ಲಾಭ ಪಡೆಯುವ ಮೋಸಗಾರರನ್ನೂ ಮೂಢರನ್ನೂ ಸೂಫೀ ಸಂಪ್ರದಾಯದ ಅನುಸರಣೆಯಿಂದ ತಲೆಕೆಟ್ಟಿರುವ ಹಲವಾರು ಹುಚ್ಚರನ್ನೂ ಕಾಣಬಹುದು. ನಿಜವಾದ ಸಂತರ ಉಪದೇಶಗಳು ಗುಣಕರವಾಗಿದ್ದರೂ ನಾಮಮಾತ್ರ ಸಂತರ ಪ್ರಭಾವ ಬಹಳ ಹಾನಿಕರ. ಆದರೆ ನಾವು ಒಳ್ಳೆಯವರನ್ನು ಮತ್ತು ಸತ್ಯವಂತರನ್ನು ಗುರುತಿಸುವುದು ಹೇಗೆ? ಸೂಫಿಯ ನಿಷ್ಕ್ರಿಯತೆ ಸಹ ಸಾಮಾಜಿಕ ಜೀವನಕ್ಕೆ ಅಪಾಯಕರವಾಗಿತ್ತು. ಅದು ತನ್ನ ಪರಮಘಟ್ಟದಲ್ಲಿ ದೇವರಲ್ಲಿ ನಿಷ್ಕ್ರಿಯತೆಯ ಭರವಸೆಯನ್ನುಂಟು ಮಾಡಿಸಿ ಅವನು ಸರ್ವಸಂರಕ್ಷಕ ಎಂಬುದರ ಕುರಿತು ನಂಬಿ ಭಕ್ತನಾದ ಮನುಷ್ಯನು ತನ್ನ ದೈನಂದಿನ ಆವಶ್ಯಕತೆಗಳನ್ನು ಪೂರೈಸಲು ಪ್ರಯತ್ನ ಮಾಡದಿರಲು ಪ್ರೋತ್ಸಾಹಿಸಿತು. ಆದುದರಿಂದ ಈಗಿನ ಕಾಲದ ಮುಸ್ಲಿಮ್ ರಾಷ್ಟ್ರಗಳ ಅಧೋಗತಿಗೆ ನಿಸ್ಸಂಶಯವಾಗಿ ಸೂಫೀ ಸಂಪ್ರದಾಯವೂ ಭಾಗಶಃ ಕಾರಣವಾಗಿದೆ. ಆದರೆ ಸೂಫೀ ಪಂಥದ ವಿವಿಧ ಶಾಖೆಗಳಿಂದ ಇಸ್ಲಾಮಿಗೆ ದೊರೆತ ಲಾಭಗಳನ್ನು ನಾವು ಅಲ್ಲಗಳೆಯಲು ಸಾಧ್ಯವೇ? ಸೂಫೀ ಪಂಥದ ಈ ಶಾಖೆಗಳು ಧಾರ್ಮಿಕ ಜೀವನದ ಉದ್ಭವ ಸ್ಥಾನಗಳಾಗಿ ಪರಿಣಮಿಸಿ ಅದು ಮುಸ್ಲಿಮ್ ರಾಜ್ಯಗಳಲ್ಲಿ ಧಾರ್ಮಿಕತೆಯನ್ನು ಜೀವಂತವಾಗಿರಿಸಿ ದೂರ ದೂರ ಪ್ರದೇಶಗಳಲ್ಲಿಯೂ ತನ್ನ ಪ್ರಭಾವ ಬೀರಿ ವಿಶಾಲವಾದ ಮರುಭೂಮಿಯಲ್ಲಿ ಹರಡಿರುವ ಹಲವಾರು ಒಯಸಿಸ್‌ಗಳಂತಾದುವು.

ಆದರೆ ಅಮುಸ್ಲಿಮರು ಸೂಫೀ ಪಂಥದ ಬಾಹ್ಯಾಚಾರಣೆಗಳ ಆಧಾರದಿಂದ ಇಸ್ಲಾಮ್ ಧರ್ಮದ ಮೂಲತತ್ವಗಳ ಮೇಲೆ ತೀರ್ಮಾನ ಕೈಗೊಳ್ಳುವುದು ಅನ್ಯಾಯಕರವಾದೀತು. ಸೂಫೀ ಪಂಥಗಳ ಈ ಆಚಾರಗಳನ್ನು ಅತ್ಯಂತ ವಿದ್ವಾಂಸರಾದ ಮತ್ತು ಬುದ್ಧಿವಂತರಾದ ಮುಸ್ಲಿಮರೂ ವಿಮರ್ಶಿಸಿರುವರು.

ಮುಹಮ್ಮದ್ ಫರೀದ್ ವಾಗ್ದೀ* ಈ ರೀತಿ ಬರೆಯುತ್ತಾರೆ:

"ಇಸ್ಲಾಮ್ ಧರ್ಮ ಮತ್ತು ಮುಸ್ಲಿಮರ ವಿರುದ್ಧ ಮಾಡಲಾಗುವ ಸುಳ್ಳು ಆರೋಪಗಳನ್ನು ಯುರೋಪಿನ ಜನರು ನಂಬುವರಾದರೆ ನಾವು ಅವರಿಗೆ ಕ್ಷಮಾಪಣೆ ನೀಡಬೇಕಾಗಿದೆ. ಅವರ ಮುಂದೆ ನಮ್ಮ ಧರ್ಮದಲ್ಲಿ ಬುದ್ಧಿಯಿಲ್ಲದ ಜನರಿಂದ ಹೊಸದಾಗಿ ಉಂಟುಮಾಡಲಾಗಿರುವ ಮತ್ತು ವೃದ್ಧಿಹೊಂದುತ್ತಿರುವ ಜನಸಂಖ್ಯೆಯಿಂದ ಸ್ವೀಕೃತವಾಗಿ ಆಚರಿಸಲ್ಪಡುತ್ತಿರುವ ಮತ್ತು ಅವುಗಳ ಜೊತೆ ಧರ್ಮಭ್ರಷ್ಟರಿಂದ ಆಚರಿಸಲ್ಪಡುವ ವಿವಿಧ ನಡೆವಳಿಕೆ

* ಮುಹಮ್ಮದ್ ಫರೀದ್ ವಾಗ್ದೀ ಈಜಿಪ್ಟಿನ ಓರ್ವ ಪ್ರಸಿದ್ಧ ಪಂಡಿತರಾಗಿದ್ದರು. —ಸಂ.

ಗಳೂ ಮನುಷ್ಯ ಪ್ರಕೃತಿಗೂ ನಾಗರಿಕ ನಿಯಮಗಳಿಗೂ ವಿರುದ್ಧವಾಗಿರುವ ಕೆಲವು ಆಚಾರಗಳೂ (ಬಿದ್‌ಅತ್) ಹೊರತು ಇನ್ನೇನೂ ಇಲ್ಲದಿರುವಾಗ ಅವರು ನಮ್ಮ ಧರ್ಮಕ್ಕೆ ವಿರೋಧ ವ್ಯಕ್ತಗೊಳಿಸುವುದು ಸರಿಯಾಗಿದೆ. ಯುರೋಪಿಯನ್ ಜನರು ಎಲ್ಲಾ ವಿಧದ ಸುಖ ಸಂತೋಷಗಳಿಗೆ ಕಾರಣವಾಗಬಲ್ಲ ನಮ್ಮ ಧರ್ಮದ ಮೂಲ ತತ್ವಗಳನ್ನು ತಿಳಿಯುವರೆಂದು ನಾವು ಭಾವಿಸಲು ಹೇಗೆ ತಾನೆ ಸಾಧ್ಯ? ಅವರಾದರೋ ಇಸ್ಲಾಮಿನ ಕೆಲವು ಬಾಹ್ಯಾಚರಣೆಗಳನ್ನು ಮಾತ್ರ ಅರಿತಿದ್ದು ಅವುಗಳನ್ನು ಅವರು ಪ್ರತಿದಿನ ಕಾಣುತ್ತಿರುವರು. ಉದಾಹರಣೆಗೆ ಪತಾಕೆ ಮತ್ತು ಡೋಲುಗಳ ಜೊತೆ ಬೊಬ್ಬಿರಿದು ಹೋಗುತ್ತಿರುವ ಜನಸಮೂಹವನ್ನು ಅವರು ನೋಡುತ್ತಿರುವರು; ಅತ್ಯಂತ ಆಕ್ಷೇಪಾರ್ಹವಾದ ಸಮಾರಂಭಗಳನ್ನು, ಅವುಗಳು ಎಲ್ಲಾ ವಿಧದ ನೈತಿಕ ವಿಚಾರಗಳಿಗೆ ವ್ಯತಿರಿಕ್ತವಾಗಿದ್ದು ಈಜಿಪ್ಟಿನ ಎಲ್ಲಾ ನಗರಗಳಲ್ಲಿ ಪೈಗಂಬರರ ಹುಟ್ಟು ಹಬ್ಬದ ದಿನ ಏರ್ಪಡಿಸಲ್ಪಡುವುದನ್ನು ಅವರು ಕಾಣುತ್ತಿರುವರು; ಸಾವಿರಾರು ಜನರು ಮುಂದುಗಡೆ ದೊಡ್ಡ ಗುಂಪುಗಳಲ್ಲಿ ನಡೆಯುವ ಪುನರ್ಮಿಲನ ಸಮಾರಂಭಗಳು, ಸೂಫೀ ಪಂಥದ ಪ್ರಾರ್ಥನೆಗಳು ಕರ್ಕಶವಾದ ಶಬ್ದದೊಂದಿಗೆ ಬೊಬ್ಬಿಡಲ್ಪಟ್ಟು ಬಲ ಮತ್ತು ಎಡ ಪಾರ್ಶ್ವಕ್ಕೆ ಬಾಗುವುದರೊಂದಿಗೆ ಮಾಡಲ್ಪಡುತ್ತವೆ. ಮತ್ತು ಇದೇ ರೀತಿಯ ಇನ್ನಿತರ ಆಚಾರಗಳನ್ನೂ ಅವರು ಕಾಣುತ್ತಿರುವರು.

‘‘ವಿದ್ಯಾವಂತನಾದ ಮುಸ್ಲಿಮನಿಗೆ ಎರಡು ಕರ್ತವ್ಯಗಳಿವೆ; ಪ್ರಥಮವಾಗಿ ಇಸ್ಲಾಮ್ ಧರ್ಮ ವಿವಿಧ ಲೇಖಕರು ಸಾಧಾರಣವಾಗಿ ಆರೋಪಿಸುವ ತಪ್ಪುಗಳಿಂದ ಕೂಡಿಲ್ಲವೆಂದು ಜಗತ್ತಿಗೆಲ್ಲಾ ಮನವರಿಕೆ ಮಾಡಿಕೊಡುವುದು ಮತ್ತು ಜನಸಾಮಾನ್ಯರು ಅದಕ್ಕೆ ಪ್ರೇಕ್ಷಕರ ಎದುರು ಪ್ರದರ್ಶಿಸುವ ಆಚಾರಗಳಿಂದ ಅದು ಪರಿಶುದ್ಧವೆಂದು ಸಹ ವ್ಯಕ್ತಗೊಳಿಸುವುದು. ಅದು ನಿಜವಾಗಿ ಸಂತೋಷವನ್ನು ನೀಡುವ ಒಂದು ನಿಯಮ ಸಂಹಿತೆಯಾಗಿದೆಯೆಂದೂ ಅದು ನಿಜವಾದ ನಾಗರಿಕತೆಯ ದೇವತೆಯೆಂದೂ ಆದುದರಿಂದ ಅದು ಆದರಕ್ಕೂ ಪ್ರೀತಿಗೂ ಪಾತ್ರವಾಗಲು ಯೋಗ್ಯವೆಂದೂ ಅದನ್ನು ಸ್ಥಾಪಿಸಿದ ಮತ್ತು ನಂಬಿದ ಮಹಾ ಸಿದ್ಧಾಂತಿಗಳು ಇದೇ ರೀತಿ ಮಾಡಿರುವರೆಂದೂ ವ್ಯಕ್ತಗೊಳಿಸಬೇಕು. ವಿದ್ಯಾವಂತನಾದ ಮುಸ್ಲಿಮನ ಎರಡನೆಯ ಕರ್ತವ್ಯ ಇಸ್ಲಾಮಿಕ ಲೋಕವನ್ನು ಅಧೋಗತಿಗಿಳಿಸಿದ, ಪೌರ್ವಾತ್ಯ ರಾಷ್ಟ್ರಗಳ ಕಪ್ಪು ಕಲೆಯಂತಿರುವ, ಎಳ್ಳಷ್ಟಾದರೂ ಬುದ್ಧಿಯಿರುವವರಿಂದ ತುಚ್ಛೀಕರಿಸಲ್ಪಡಲು ಹೇತುವಾದ ಅನಾಚಾರಗಳನ್ನು ದೂರೀಕರಿಸುವುದಾಗಿದೆ.

(ಅನುವಾದಕ; **M. U.** ರಶೀದ್)

★


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

**ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

**ಪುಟ: 60** **ಬೆಲೆ: ಒಂದು ರೂಪಾಯಿ** **ಅಂಚೆ ವೆಚ್ಚ: ಉಚಿತ**

**ಬರೆಯಿರಿ:** The Editor, YUGARASHMI Kannada Quarterly,
10-23/1008 Ansari Road, Bunder, Mangalore-575 001.

# ★ ಖಾತಮುನ್ನಬಿಯ್ಯೀನ್ ★

—ಎಂ. ಪಿ. ಇಬ್ರಾಹಿಂ

ಹಝ್ರತ್ ಮುಹಮ್ಮದ್ ಪೈಗಂಬರ್ (ಸ.)ರವರ ಆವಿರ್ಭಾವದ ಬಳಿಕ ಈ ಪ್ರಪಂಚದ ಅವಸಾನ ಪರ್ಯಂತ ಪ್ರವಾದಿ ನಿಯೋಗವೇ ಉಂಟಾಗಲಾರದು ಎಂದೂ ಮುಹಮ್ಮದ್ ಪೈಗಂಬರರು 'ಅಂತ್ಯ ಪ್ರವಾದಿ' ಯಾಗಿರುವರೆಂದೂ ನಂಬುತ್ತಿರುವ ಇಂದಿನ ಬಹುಸಂಖ್ಯಾತ ಮುಸ್ಲಿಮರು ತಮ್ಮ ಈ ವಿಶ್ವಾಸವನ್ನು ಸಮರ್ಥಿಸಲು ಮುಂದಿಡುವ ಆಧಾರವ ಕುರಿತು ಈ ಲೇಖನದಲ್ಲಿ ವಿವೇಚಿಸಲಿಚ್ಛಿಸುತ್ತೇನೆ. ಆದರೆ, ಅದಕ್ಕೂ ಮೊದಲಾಗಿ ಸಾಮಾನ್ಯ ಜನರೆಡೆಯಲ್ಲಿ ಅಹ್ಮದೀಯರ ಬಗ್ಗೆ ಹರಡಿರುವ ಒಂದು ಪ್ರಧಾನವಾದ ತಪ್ಪಾಭಿಪ್ರಾಯವನ್ನು ನೀಗಿಸಬೇಕಾದುದು ಅತೀ ಅಗತ್ಯವಾಗಿರುತ್ತದೆ. ಅದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರರು "ಖಾತಮುನ್ನಬಿಯ್ಯೀನ್" ಆಗಿರುವರೆಂಬುದಾಗಿ ಪವಿತ್ರ ಖುರ್‌ಆನಿನಲ್ಲಿ ಹೇಳಲ್ಪಟ್ಟಿದೆ. ಆ ಮಹಾನ್ ಪ್ರವಾದಿಯವರ ಶ್ರೇಷ್ಠ ಪದವಿಯ ಕುರಿತು ಪ್ರಯುಕ್ತವಾದ ಖಾತಮುನ್ನಬಿಯ್ಯೀನ್ ಎಂಬ ಪದಕ್ಕೆ ಸಾಮಾನ್ಯವಾಗಿ ಇಂದಿನ ಮುಸ್ಲಿಂ ಮತಪಂಡಿತರು "ಅಂತ್ಯಪ್ರವಾದಿ" ಎಂದು ಅರ್ಥ ನೀಡುತ್ತಾರೆ. ಪೈಗಂಬರರ ನಂತರ ಆಗತರಾದ ಒಬ್ಬ ಪ್ರವಾದಿಯಲ್ಲಿ ವಿಶ್ವಾಸವಿಟ್ಟಿರುವ ಕಾರಣ ಅಹ್ಮದೀಯರು 'ಖಾತಮುನ್ನಬಿಯ್ಯೀನ್' ಎಂಬ ಪೈಗಂಬರರ ಪದವಿಯನ್ನು ನಿರಾಕರಿಸುವವರು ಎಂಬುದಾಗಿ ಸಹ ಇವರು ಹೇಳುತ್ತಾರೆ. ಇದು ಅಹ್ಮದೀಯರ ವಿರುದ್ಧವಾಗಿ ನಡೆಸುವ ಒಂದು ಘೋರ ಅಪಪ್ರಚಾರವಾಗಿದೆ.

ಮುಹಮ್ಮದ್ ಪೈಗಂಬರರು ನುಡಿದಿರುವ ಭವಿಷ್ಯವಾಣಿಗಳ ಪ್ರಕಾರ ಮಾನವ ಸಮುದಾಯವು ಭಯಾನಕವಾದ ಅಧಃಪತನದಲ್ಲಿ ಮುಳುಗಿದ್ದು ಮುಸಲ್ಮಾನರು ಸಹ ಧರ್ಮಭ್ರಷ್ಟರಾಗಿ ಮಾರ್ಪಟ್ಟಿರುವ ಈ ಕಾಲದಲ್ಲಿ ಪವಿತ್ರ ಇಸ್ಲಾಂ ಧರ್ಮವನ್ನೇ ಪ್ರಬೋಧಿಸಲಿಕ್ಕಾಗಿ ಮುಹಮ್ಮದ್ ಪೈಗಂಬರರ ಅನುಯಾಯಿಗಳಲ್ಲೊಬ್ಬರು ಅವರ ಶಿಷ್ಯಪ್ರವಾದಿಯಾಗಿ ನಿಯೋಗಿಸಲ್ಪಟ್ಟಿದ್ದಾರೆ ಎಂದು ನಾವು ನಂಬುತ್ತೇವೆ. ಆದರೆ, ಮುಹಮ್ಮದ್ ಪೈಗಂಬರರನ್ನು ಅಹ್ಮದೀಯರು ''ಖಾತಮುನ್ನಬಿಯ್ಯೀನ್'' ಆಗಿ ಸ್ವೀಕರಿಸುವುದಿಲ್ಲವೆಂದು ಇವರು ಆಕ್ಷೇಪಿಸುತ್ತಿರುವುದು ನ್ಯಾಯಬಾಹಿರವಾದ ದುರಾರೋಪವೂ ಒಂದು ಅಪಪ್ರಚಾರವೂ ಮಾತ್ರವಾಗಿದೆ. ಅಹ್ಮದೀಯರಾದ ನಾವು ಹಝ್ರತ್ ಮುಹಮ್ಮದ್ ಪೈಗಂಬರರನ್ನು "ಖಾತಮುನ್ನಬಿಯ್ಯೀನ್" ಎಂಬುದಾಗಿ ಪ್ರಾಮಾಣಿಕವಾಗಿಯೂ ಇತರರಿಗಿಂತಲೂ ದೃಢವಾಗಿಯೂ ನಂಬುತ್ತೇವೆ. ಮುಹಮ್ಮದ್ ಪೈಗಂಬರರು ಖಾತಮುನ್ನಬಿಯ್ಯೀನ್ ಆಗಿರುವರೆಂದು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಅಲ್ಲಾಹು ಈ ರೀತಿ ಹೇಳಿದ್ದಾನೆ:

> ಮಾಕಾನ ಮುಹಮ್ಮದುನ್ ಅಬಾ ಅಹದಿನ್ ಮಿರ್‍ರಿಜಾಲಿಕುಂ ವಲಾಕಿನ್ ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ ವ ಕಾನಲ್ಲಾಹು ಬಿಕುಲ್ಲಿ ಶೈಯಿನ್ ಅಲೀಮಾ.
>
> "ಮುಹಮ್ಮದ್ ನಿಮ್ಮಲ್ಲಿ ಯಾರೊಬ್ಬ ಪುರುಷನ ಪಿತನೂ ಅಲ್ಲ. ಆದರೆ, ಅಲ್ಲಾಹನ ಸಂದೇಶವಾಹಕನೂ ಖಾತಮನ್ನಬಿಯ್ಯೀನೂ ಆಗಿದ್ದಾರೆ; ಎಲ್ಲಾ ಕಾರ್ಯಗಳನ್ನೂ ಅಲ್ಲಾಹು ಚೆನ್ನಾಗಿ ಬಲ್ಲವನಾಗಿದ್ದಾನೆ." (33:41)

ಈ ರೀತಿಯಾಗಿ ಮುಹಮ್ಮದ್ ಪೈಗಂಬರರ ಕುರಿತು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಖಾತಮುನ್ನಬಿಯ್ಯೀನ್ ಎಂದು ಉಲ್ಲೇಖಿಸಿರುವಾಗ, ಆ ದಿವ್ಯಗ್ರಂಥವು ಅಲ್ಲಾಹನ ವಚನಗಳೆಂದು ನಂಬುವ ಯಾರಿಂದಾದರೂ ಅದನ್ನು ನಿರಾಕರಿಸಲು ಸಾಧ್ಯವೇ? ಪವಿತ್ರ ಖುರ್‌ಆನ್ ಎಂದೆಂದೂ ಕಾಲಹರಣಗೊಳ್ಳದ ಅಲ್ಲಾಹನ ವಚನಗಳೆಂದೂ ಪರಿಪೂರ್ಣ ಧರ್ಮಶಾಸ್ತ್ರ (ಶರೀಅತ್) ಗ್ರಂಥವೆಂದೂ ಅಹ್ಮದೀಯರು ದೃಢವಾಗಿ ನಂಬುತ್ತಾರೆ. ಪವಿತ್ರ ಖುರ್‌ಆನಿನಲ್ಲಿ ಕಾಲಹರಣವಾದ ವಚನಗಳು (ಮನ್‌ಸೂಖ್) ಇವೆಯೆಂದು ಇತರ ಮುಸ್ಲಿಮರು ನಂಬುತ್ತಿರುವಾಗ ಆ ದಿವ್ಯ ಗ್ರಂಥದ ಒಂದು ಅಕ್ಷರವೂ ಲಿಪಿಯೂ ಸಹ ಕಾಲಹರಣಗೊಂಡಿಲ್ಲವೆಂಬುದು ಅಹ್ಮದೀಯರ ವಿಶ್ವಾಸವಾಗಿದೆ.

ಮುಹಮ್ಮದ್ ಪೈಗಂಬರರು ಖಾತಮುನ್ನಬಿಯ್ಯೀನ್ ಆಗಿರುವರೆಂಬುದನ್ನು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರು ತನ್ನ ಗ್ರಂಥಗಳಲ್ಲಿ ಅತ್ಯಂತ ಸ್ಪಷ್ಟವಾಗಿಯೂ ಸಂಶಯಾತೀತವಾಗಿಯೂ ಪ್ರಸ್ತಾಪಿಸಿದ್ದಾರೆ. ಮಾತ್ರವಲ್ಲ, ತನಗೆ ಅಲ್ಲಾಹು ಪ್ರವಾದಿತ್ವವನ್ನು ಅನುಗ್ರಹಿಸಿದ್ದೇ ಪೈಗಂಬರರು ಖಾತಮುನ್ನಬಿಯ್ಯೀನ್ ಆಗಿರುವುದರಿಂದಲೂ ಅವರ ಆ ಪದವಿಯನ್ನು ದೃಢೀಕರಿಸಲಿಕ್ಕೂ ಆಗಿದೆಯೆಂದು ಸಹ ಆ ಮಹಾತ್ಮರು ಹೇಳಿದ್ದಾರೆ. ಹಝ್ರತ್ ಅಹ್ಮದ್ (ಅ) ಹೇಳುವುದನ್ನು ನೋಡಿರಿ:

"ನನ್ನ ವಿಶ್ವಾಸದ ಬುನಾದಿಯು 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹಿ' ಎಂಬುದಾಗಿದೆ. ಹಝ್ರತ್ ಸಯ್ಯದುನಾ ವ ಮೌಲಾನಾ ಮುಹಮ್ಮದ್ ಮುಸ್ತಫಾ(ಸ) ಖಾತಮುನ್ನಬಿಯ್ಯೀನ್ ಹಾಗೂ ಖೈರುಲ್ ಮುರ್‌ಸಲೀನ್ ಆಗಿರುವರೆಂಬುದೂ ಅವರ ಮುಖಾಂತರ ಧರ್ಮವು ಪೂರ್ಣವಾಯಿತೆಂಬುದೂ ಮನುಷ್ಯರು ಸನ್ಮಾರ್ಗದಲ್ಲಿ ಚಲಿಸಿ ದೈವಸಾಮಿಪ್ಯವನ್ನು ಗಳಿಸಿಕೊಳ್ಳುವ ಅನುಗ್ರಹವು ಅದರ ಪೂರ್ಣಾವಸ್ಥೆಗೆ ತಲಪಿರುವುದೆಂಬುದೂ ನನ್ನ ವಿಶ್ವಾಸವಾಗಿದೆ." (ಇಸಾಲಯೆ ಔಹಾಂ 1891 ಒಂದನೇ ಆವೃತ್ತಿ ಪುಟ–137).

"ಯಾವ ಮಹಾ ಪುರುಷನಿಗೆ ಪವಿತ್ರ ಖುರ್‌ಆನ್ ಅವತೀರ್ಣಗೊಂಡಿತೋ...... ಆ ಪುಣ್ಯಾತ್ಮರು ಖಾತಮುಲ್ ಅಂಬಿಯಾ ಆಗಿದ್ದಾರೆ. ಆದರೆ, ಆ ಪುಣ್ಯ ಪುರುಷ 'ಖಾತಂ' ಆಗಿರುವರೆಂಬುದು ಅವರ ಮುಖಾಂತರ ಇನ್ನು ಮುಂದೆ ಯಾವ ತರದ ಆಧ್ಯಾತ್ಮಿಕ ಅನುಗ್ರಹಗಳೂ ಲಭಿಸಲಾರವು ಎಂಬ ಅರ್ಥದಲ್ಲಲ್ಲ. ಪೈಗಂಬರರು ಮುದ್ರೆ (ಖಾತಂ) ಲಭಿಸಿದ ಪ್ರವಾದಿ ಎಂಬ ಅರ್ಥದಲ್ಲಾಗಿದೆ. ಆ ಮುದ್ರೆಯ ಸಹಾಯದಿಂದಲ್ಲದೆ ಎಂತಹ ಅನುಗ್ರಹವೂ ಯಾರಿಗೂ ಇನ್ನು ಮುಂದೆ ಲಭಿಸಲಾರದು ಎಂಬುದು ಅದರ ಅರ್ಥ. ದೈವವಾಣಿ ಲಭಿಸುವ ಬಾಗಿಲು ಆ ಮಹಾ ಪ್ರವಾದಿಯ ಅನುಯಾಯಿಗಳಿಗೆ ಮುಚ್ಚಲ್ಪಡಲು ಎಂದಿಗೂ ಸಾಧ್ಯವಿಲ್ಲ. ಮುದ್ರೆ ಲಭಿಸಿದ ಪ್ರವಾದಿ ಅವರಲ್ಲದೆ ಬೇರೆ ಯಾರೂ ಇಲ್ಲ. ಅನುಯಾಯಿಯಾಗಿದ್ದುಕೊಂಡೇ ಒಬ್ಬರಿಗೆ ಪ್ರವಾದಿತ್ವವೂ ಲಭಿಸಲು ಕಾರಣವಾದಂತಹ ಮುದ್ರೆಯೊಂದಿಗೆ ಅವತರಿಸಿದವರು ಅವರು ಮಾತ್ರವೇ ಆಗಿದ್ದಾರೆ.'' (ಹಕೀಕತುಲ್ ವಹ್ಯ 1907 ಪುಟ–27).

"ಸರ್ವಶಕ್ತನೂ ಮಹಾ ಮಹಿಮನೂ ಆದ ಅಲ್ಲಾಹನ ಹೆಸರಿನಲ್ಲಿ ನಾನಿದೋ ಸತ್ಯ ಪ್ರಮಾಣ ಮಾಡಿ ಹೇಳುತ್ತೇನೆ–ನಾನು ಕಾಫಿರನಲ್ಲ. 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹಿ' ಎಂಬುದೇ ನನ್ನ ವಿಶ್ವಾಸ. 'ಲಾಕಿನ್ ರಸೂಲಲ್ಲಾಹಿ ವ ಖಾತಮುನ್ನಬಿಯ್ಯೀನ್' ಎಂಬುದೇ ಆ ದಿವ್ಯಾತ್ಮನ ಕುರಿತಿರುವ ನನ್ನ ನಂಬಿಕೆ. ನನ್ನ ಈ ಪ್ರಮಾಣವು ಸತ್ಯವೆಂಬುದಕ್ಕೆ ಅಲ್ಲಾಹನಿಗೆ ಎಷ್ಟು ಹೆಸರುಗಳಿವೆಯೋ ಅಷ್ಟು ಸಾರಿ, ಪವಿತ್ರ ಖುರ್‌ಆನಿನಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟು ಸಲ, ನಬಿ ಶ್ರೇಷ್ಠರ ಉತ್ಕೃಷ್ಟತೆ ಎಷ್ಟಿದೆಯೋ ಅಷ್ಟು ಬಾರಿ ನಾನು ಅಲ್ಲಾಹುವಿನ ಹೆಸರಿನಲ್ಲಿ ಸತ್ಯಪ್ರಮಾಣ ಮಾಡುತ್ತೇನೆ. ಅಲ್ಲಾಹನ ಮತ್ತು ಅವನ ರಸೂಲ್ ಆದ ಮುಹಮ್ಮದ್ ಮುಸ್ತಫಾ (ಸ)ರವರ ನಿರ್ದೇಶಗಳಿಗೆ ವಿರುದ್ಧವಾಗಿ ನಾನು ಯಾವ ವಿಶ್ವಾಸವನ್ನೂ ಕೈಗೊಂಡಿಲ್ಲ. ಹಾಗೆ ಯಾರಾದರೂ ಹೇಳುವುದಿದ್ದರೆ ಅದು ಅವರ ತಪ್ಪು ಭಾವನೆ ಮಾತ್ರವಾಗಿದೆ. ಇಷ್ಟು ಹೇಳಿದ ಮೇಲೆಯೂ ಇನ್ನು ಯಾರಾದರೂ ನನ್ನನ್ನು ಕಾಫಿರ್ ಎಂದು ಹೇಳುವುದಾದರೆ ಅವರು ತಮ್ಮ ಈ ಕೃತ್ಯಕ್ಕಾಗಿ ದೈವಸನ್ನಿಧಿಯಲ್ಲಿ ಉತ್ತರ ಹೇಳಬೇಕಾದೀತೆಂಬ ಕಟು ಸತ್ಯವನ್ನು ನೆನಪಿನಲ್ಲಿಟ್ಟಿರಲಿ." (ಕರಾಮತುಸ್ಸಾದಿಖೀನ್. ಪುಟ–25).

ನಿಜ ಸಂಗತಿ ಹೀಗಿರುವಾಗ, ಪೈಗಂಬರ್ (ಸ) ಖಾತಮುನ್ನಬಿಯ್ಯೀನ್ ಆಗಿರುವರೆಂಬುದನ್ನು ಅಹ್ಮದೀಯರು ಸ್ವೀಕರಿಸುವುದಿಲ್ಲವೆಂದೂ ಅವರು ಖಾತಮುನ್ನುಬುವ್ವತ್ತನ್ನು ನಿರಾಕರಿಸುವವರೆಂದೂ ನಮ್ಮ ಕುರಿತು ಇತರ ಮುಸ್ಲಿಮರು ಆಕ್ಷೇಪಿಸುತ್ತಿರುವುದು ಸತ್ಯಕ್ಕೆ ದೂರವಾದ ಒಂದು ದುರಾರೋಪ ಮಾತ್ರವಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರು "ಖಾತಮುನ್ನಬಿಯ್ಯೀನ್" ಆಗಿದ್ದಾರೆಂದು ಅಹ್ಮದೀಯರಾದ ನಾವು ಪೂರ್ಣ ಹೃದಯದಿಂದಲೂ ದೃಢತೆಯಿಂದಲೂ ವಿಶ್ವಾಸಹೊಂದಿದ್ದೇವೆ. ಆದರೆ, ಖಾತಮುನ್ನಬಿಯ್ಯೀನ್ ಎಂಬ ಪದಕ್ಕೆ ಸಾಮಾನ್ಯವಾಗಿ ಇಂದಿನ ಇತರ ಮುಸ್ಲಿಮರು ನೀಡುತ್ತಿರುವ ತಾತ್ಪರ್ಯವನ್ನು ನಾವು ಅದಕ್ಕೆ ನೀಡುವುದಿಲ್ಲ. ಹಾಗೆ, ಇತರರು ಆ ಪದಕ್ಕೆ ನೀಡುವ ವ್ಯಾಖ್ಯಾನ ವಿವರಣೆಯನ್ನು ಸ್ವೀಕರಿಸದ ಕಾರಣಕ್ಕೆ

ನಾವು 'ಖಾತಮುನ್ನಬಿಯ್ಯೀನ್' ಎಂಬ ಪೈಗಂಬರರ ಪದವಿಯನ್ನೇ ನಿಷೇಧಿಸುತ್ತೇವೆ ಎಂದು ಹೇಳುವುದು ಸರಿಯಲ್ಲ. ಪವಿತ್ರ ಖುರ್‌ಆನಿನ ವಿವರಣೆ (ತಫ್‌ಸೀರ್)ಯನ್ನು ನೀಡುವುದರಲ್ಲಿ ಮೊದಲಿನಿಂದಲೂ ಮತ ಪಂಡಿತರು ಭಿನ್ನಾಭಿಪ್ರಾಯ ಹೊಂದಿದ್ದರು.

ಇನ್ನು, 'ಪ್ರವಾದಿತ್ವ ಪರಿಸಮಾಪ್ತಿ'ಯನ್ನು ವಾದಿಸುವವರು ಮುಂದಿಡುವ ಆಧಾರದ ಕುರಿತು ಪರಿಶೀಲಿಸುವ. ಪ್ರವಾದಿತ್ವವೆಂಬ ಮಹಾ ಅನುಗ್ರಹವು ಕೊನೆಗೊಂಡಿದೆಯೆಂದೂ ಇನ್ನು ಯಾವ ಪ್ರವಾದಿಯೂ ಈ ಲೋಕಕ್ಕೆ ಕಳುಹಿಸಲ್ಪಡಲಿಕ್ಕಿಲ್ಲವೆಂದೂ ವಾದಿಸುವ ಬಹುಸಂಖ್ಯಾತ ಮುಸ್ಲಿಮರಿಗೆ ತಮ್ಮ ವಾದವನ್ನು ಪವಿತ್ರ ಖುರ್‌ಆನಿನ ಆಧಾರಗಳ ಮೂಲಕ ನಿರೂಪಿಸಲು ಸಾಧ್ಯವಾಗುವುದಿಲ್ಲವೆಂಬುದು ಒಂದು ಪರಮ ಸತ್ಯ. ಮುಹಮ್ಮದ್ ಪೈಗಂಬರರ ನಂತರವೂ ಮಾನವರಾಶಿಯು ಧಾರ್ಮಿಕವಾಗಿ ಅಧಃಪತನಗೊಂಡಲ್ಲಿ ಪವಿತ್ರ ಇಸ್ಲಾಂ ಧರ್ಮದ ಪುನರುದ್ಧಾರಕ್ಕಾಗಿಯೂ ಮಾನವರನ್ನು ಆ ದಿವ್ಯ ಧರ್ಮದ ಯಥಾರ್ಥ ತತ್ವದೆಡೆ ಆಮಂತ್ರಿಸಲಿಕ್ಕಾಗಿಯೂ ಮುಹಮ್ಮದ್ ಪೈಗಂಬರರ ಸಾಕ್ಷ್ಯ ಮುದ್ರೆಯೊಂದಿಗೆ, ಅವರ ಅನುಯಾಯಿಯಾದ ಪ್ರವಾದಿ ಬರಬಹುದೆಂಬ ವಿಶ್ವಾಸಕ್ಕೆ ಅಹ್ಮದೀಯರು ಪವಿತ್ರ ಖುರ್‌ಆನಿನಿಂದ ತೆಗೆದು ತೋರಿಸುವ ಅನೇಕ ಸುಬೂತುಗಳ ಮುಂದೆ "ಪ್ರವಾದಿತ್ವದ ಸಮಾಪಕರಿ"ಗೆ ಆ ಪವಿತ್ರ ಗ್ರಂಥದಿಂದ ಒಂದೇ ಒಂದು ಆಧಾರವನ್ನು ಸಹ ತೆಗೆದು ತೋರಿಸಲು ಸಾಧ್ಯವಾಗುವುದಿಲ್ಲ. ಆದರೆ, ಪೈಗಂಬರರು 'ಖಾತಮುನ್ನಬಿಯ್ಯೀನ್' ಆಗಿರುವರೆಂದು ಉಲ್ಲೇಖಿಸುವ, ನಾನು ಮೊದಲು ಉದ್ಧರಿಸಿದ ಖುರ್‌ಆನ್ ವಚನವನ್ನು ಕೆಲವರು ತಮ್ಮ ವಾದಕ್ಕೆ ಆಧಾರವಾಗಿ ಮಂಡಿಸುವುದಿದೆ. "ಖಾತಂ" ಎಂಬ ಅರಬಿ ಪದಕ್ಕೆ ಮುದ್ರೆ ಅಥವಾ ಮೊಹರು ಎಂದು ಅರ್ಥ. ಮುದ್ರೆಯೊತ್ತಲು ಉಪಯೋಗಿಸುವ ಸಾಧನಕ್ಕೂ ಅದರಿಂದ ಉಂಟಾಗುವ ಮುದ್ರೆಗೂ ಮುದ್ರೆಯನ್ನೊತ್ತಲು ಉಪಯೋಗಿಸುವ ಮುದ್ರೆಯುಂಗುರಕ್ಕೂ ಸಹ "ಖಾತಂ" ಎಂದು ಹೇಳುವುದಿದೆ. ಈ ಶಬ್ದಾರ್ಥದ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಈಗ ನೋಡಬೇಕಾಗಿರುವುದು, "ಖಾತಂ" ಎಂಬ ಪದವು ಒಬ್ಬ ವ್ಯಕ್ತಿಯ ವೈಶಿಷ್ಟ್ಯವನ್ನು ಸೂಚಿಸುವ ಸಲುವಾಗಿ ಒಂದು ಸಮೂಹ ನಾಮಪದದೊಂದಿಗೆ ಸೇರಿಸಿ ಹೇಳಿದಾಗ ಅದಕ್ಕೆ ಏನರ್ಥವಿದೆ ಎಂದು. ಪವಿತ್ರ ಖುರ್‌ಆನಿನಲ್ಲಿ ಮುಹಮ್ಮದ್ ಪೈಗಂಬರರ ಶ್ರೇಷ್ಠತೆಯನ್ನು ಸೂಚಿಸಲು 'ಖಾತಂ' ಎಂಬ ಶಬ್ದವನ್ನು 'ನಬಿಯ್ಯೀನ್' ಎಂಬ ಸಮೂಹ ನಾಮ ಪದದೊಂದಿಗೆ ಸೇರಿಸಿ ಹೇಳಿದೆಯಷ್ಟೆ. ಈ ರೀತಿ ಪ್ರಯುಕ್ತವಾದಾಗ ಆ ಸಮೂಹದ ಕೊನೆಯ ವ್ಯಕ್ತಿ ಎಂಬುದು ಅರ್ಥವೆಂದೂ ಹಾಗೆ ಖಾತಮುನ್ನಬಿಯ್ಯೀನ್ ಎಂಬುದಕ್ಕೆ ನಬಿಗಳಲ್ಲಿ ಕೊನೆಯವ ಎಂಬ ಅರ್ಥವಿದೆಯೆಂದೂ ಅಹ್ಮದಿಯಾ ಸಂಘಟನೆಯ ಎದುರಾಳಿಗಳು ವಾದಿಸುತ್ತಾರೆ. ಆದರೆ, ಈ ಅರ್ಥವನ್ನು ಪವಿತ್ರ ಖುರ್‌ಆನ್ ಅನುಮೋದಿಸುವುದಿಲ್ಲ. ಮಾತ್ರವಲ್ಲ, ಅರಬಿ ಭಾಷಾ ಪ್ರಯೋಗದಲ್ಲೇ ಈ ಅರ್ಥಕ್ಕೆ ಬೆಂಬಲವಿಲ್ಲ. ಒಂದು ಸಮೂಹ ನಾಮಪದದೊಂದಿಗೆ 'ಖಾತಂ' ಎಂಬ ಶಬ್ದವನ್ನು ಸೇರಿಸಿ ಹೇಳುವಾಗ ಆ ಸಮೂಹದ ಕೊನೆಯ ವ್ಯಕ್ತಿ ಎಂಬುದಾಗಿ ಅರ್ಥ ಬರುವ ಒಂದೇ ಒಂದು ಉದಾಹರಣೆಯಾದರೂ ಪವಿತ್ರ ಖುರ್‌ಆನಿನ ಇತರ ಯಾವುದೇ ಭಾಗದಲ್ಲಾಗಲೀ ಇನ್ನಿತರ ಯಾವುದೇ ಅರಬಿ ಸಾಹಿತ್ಯ ಗ್ರಂಥಗಳಲ್ಲಾಗಲೀ ಇಲ್ಲ. ಖಾತಂ ಎಂಬ ಪದವು ಸಮೂಹ ನಾಮದೊಂದಿಗೆ ಸೇರಿಸಿ ಹೇಳಲ್ಪಟ್ಟಾಗ ಆ ಸಮೂಹದಲ್ಲಿ ಶ್ರೇಷ್ಠ ಎಂಬುದೇ ಅದರ ಅರ್ಥ. ಆದುದರಿಂದ "ಖಾತಮುನ್ನಬಿಯ್ಯೀನ್" ಎಂಬುದಕ್ಕೆ ನಬಿಗಳಲ್ಲಿ ಶ್ರೇಷ್ಠ ಎಂಬುದೇ ಅರ್ಥ. ನಾವು ನೀಡುತ್ತಿರುವ ಈ ಅರ್ಥದಿಂದ ಮುಹಮ್ಮದ್ ಪೈಗಂಬರರ ಉತ್ಕೃಷ್ಟತೆಯು ಶೋಭಾಯಮಾನವಾಗುವುದು. ಈ ಅರ್ಥವನ್ನು ಸಾಕ್ಷ್ಯಪಡಿಸುವಲ್ಲಿ ಅರಬಿ ಭಾಷಾ ಪ್ರಯೋಗ ಶೈಲಿಯಿಂದ ಅನೇಕಾನೇಕ ಉದಾಹರಣೆಗಳನ್ನು ತೆಗೆದು ತೋರಿಸಲು ಸಾಧ್ಯವಿದೆ. ಉದಾಹರಣೆಗೆ ಕೆಲವನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ:

(1) ಖಾತಮುಲ್ ಮುಹಾಜಿರೀನ್ (ಹಿಜ್ರತ್ ಮಾಡಿದವರಲ್ಲಿ ಶ್ರೇಷ್ಠ) ಎಂಬುದಾಗಿ ಹಝ್ರತ್ ಅಬ್ಬಾಸ್ (ರ)ರವರ ಕುರಿತು ಪವಿತ್ರ ನಬಿಯವರು ನುಡಿದಿರುವರು (ತಬ್ರಾನಿ).

ಇಲ್ಲಿ ಹಿಜ್ರತ್ ಮಾಡಿದವರಲ್ಲಿ ಕೊನೆಯವ ಎಂಬ ಅರ್ಥ ಕಲ್ಪಿಸಲು ಸಾಧ್ಯವೇ ಇಲ್ಲ. ಕಾರಣ, ಹಿಜ್ರತ್ ಎಂಬುದು ಅಂತ್ಯ ದಿವಸದ ವರೆಗೂ ಇರುವುದಷ್ಟೆ.

(2) "ಖಾತಮುಲ್ ಔಲಿಯಾ" (ವಲಿಗಳಲ್ಲಿ ಶ್ರೇಷ್ಠ) ಎಂದು ಹಝ್ರತ್ ಅಲಿಯವರ ಕುರಿತು ಮುಹಮ್ಮದ್ ಪೈಗಂಬರರು ಹೇಳಿರುವರು (ತಫ್‌ಸೀರ್ ಶಾಫೀ).

ಇಲ್ಲಿ ಸಹ ಹಝ್ರತ್ ಅಲಿಯವರ ಕುರಿತು "ವಲಿತ್ವದ ಪರಿಸಮಾಪ್ತಕ"ನೆಂದು ಅರ್ಥ ಹೇಳಲು ಸಾಧ್ಯವೇ ಇಲ್ಲ. ಕಾರಣ, ಅವರ ನಂತರ ಅಸಂಖ್ಯಾತ ಔಲಿಯಾಗಳು ಉಂಟಾಗಿದ್ದಾರೆ.

(3) "ಖಾತಮುಶ್ಶುಅರಾ" (ಕವಿಗಳಲ್ಲಿ ಶ್ರೇಷ್ಠ) ಎಂದು ಅಬೂತಮ್ಮಾಂ ತಾಯೀ ಎಂಬ ಕವಿಯ ಕುರಿತು ಇನ್ನೊಬ್ಬ ಕವಿ ಹೇಳಿದರು. ಇಲ್ಲಿ, ಅಬೂತಮಾಂ ತಾಯೀಯವರ ನಂತರ ಕವಿಯಿಲ್ಲ ಎಂಬುದಾಗಿ ಅರ್ಥ ಕಲ್ಪಿಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟ.

(4) "ಖಾತಮುಲ್ ಮುಫಸ್ಸಿರೀನ್" ಎಂದು ಇಮಾಂ ಸುಯೂತಿ (ರ)ರವರ ಕುರಿತು ಹೇಳಲ್ಪಟ್ಟಿದೆ (ತಫ್‌ಸೀರ್ ಇತ್‌ಖಾನ್). ಇಲ್ಲಿಯೂ ಇಮಾಂ ಸಾಹೇಬರು ಕೊನೆಯ ಖುರ್‌ಆನ್ ವ್ಯಾಖ್ಯಾನಕಾರನೆಂಬ ಅರ್ಥದಲ್ಲಲ್ಲ; ಬದಲಾಗಿ ಶ್ರೇಷ್ಠ ವ್ಯಾಖ್ಯಾನಕಾರ ಎಂಬ ಅರ್ಥದಲ್ಲೇ 'ಖಾತಂ' ಎಂಬ ಪದವನ್ನು ಪ್ರಯೋಗಿಸಲಾಗಿದೆ ಎಂದು ತಿಳಿದುಕೊಳ್ಳಲು ಪ್ರಯಾಸವಿಲ್ಲ.

ಅರಬಿ ಭಾಷೆಯ ಸಾಹಿತ್ಯಗಳಿಂದ ಇಂತಹ ಎಷ್ಟೋ ಪ್ರಯೋಗಗಳನ್ನು ಉದಾಹರಿಸಬಹುದಾದರೂ ಸದ್ಯ ಮೇಲೆ ವಿವರಿಸಿದ ಉದಾಹರಣೆಗಳೇ ಸಾಕೆಂದು ಭಾವಿಸುತ್ತೇನೆ. ಒಟ್ಟಿನಲ್ಲಿ, ಅರಬಿ ಪ್ರಯೋಗ ಶೈಲಿಯ ಪ್ರಕಾರ ಒಂದು ಸಮೂಹ ನಾಮಪದದೊಂದಿಗೆ "ಖಾತಂ" ಎಂಬ ಪದವನ್ನು ಸೇರಿಸಿಕೊಂಡು ಒಬ್ಬ ವ್ಯಕ್ತಿಯ ಶ್ರೇಷ್ಠತೆಯನ್ನು ತೋರಿಸಲು ಪ್ರಯೋಗಿಸಿದಾಗ ಅದರ ಅರ್ಥವು ಆ ಸಮೂಹದವರಲ್ಲಿ ಇರಬೇಕಾದ ಎಲ್ಲಾ ಉತ್ತಮ ಗುಣಗಳೂ ಏಕೀಕೃತವಾಗಿರುವ ಶ್ರೇಷ್ಠ ವ್ಯಕ್ತಿ ಎಂದು ಮಾತ್ರ. ಇದಕ್ಕೆ ವಿರುದ್ಧವಾದ ಒಂದೇ ಒಂದು ಉದಾಹರಣೆಯನ್ನು ತೋರಿಸಲು ಯಾರಿಂದಲೂ ಸಾಧ್ಯವಿಲ್ಲ. ಹೀಗಿರುವಾಗ 'ಖಾತಮುನ್ನಬಿಯ್ಯೀನ್' ಎಂಬುದರ ಅರ್ಥ ಕೊನೆಯ ಪ್ರವಾದಿ ಎಂದು ಹೇಳುವುದು ಯಾವ ರೀತಿಯಲ್ಲಿ ಸಿಂಧುವಾಗುವುದು? ಖಾತಂ ಎಂಬುದಕ್ಕೆ ಶಬ್ದಾರ್ಥವು ಮುದ್ರೆ ಎಂದಾದುದರಿಂದ ಮುಹಮ್ಮದ್ ಪೈಗಂಬರರ ಕುರಿತು "ಖಾತಮುನ್ನಬಿಯ್ಯೀನ್' ಎಂದು ಹೇಳಿದುದರ ಅರ್ಥವು ಆ ಪವಿತ್ರ ಪ್ರವಾದಿಯವರು ಸರ್ವಶ್ರೇಷ್ಠ ಪ್ರವಾದಿಯಾಗಿರುವುದರೊಂದಿಗೆ ಆ ದಿವ್ಯಾತ್ಮರ ಸಾಕ್ಷ್ಯಮುದ್ರೆಯ ಸಹಾಯವಿಲ್ಲದೆ ಮುಂದಕ್ಕೆ ಯಾರಿಗೂ ಪ್ರವಾದಿತ್ವ ಲಭಿಸಲಾರದು ಎಂದೂ ಆಗಿದೆ.

ಅದೂ ಅಲ್ಲದೆ, ಖಾತಮುನ್ನಬಿಯ್ಯೀನ್ ಎಂಬುದಕ್ಕೆ ಅತ್ಯಂತ ಶ್ರೇಷ್ಠ ಪ್ರವಾದಿಯೆಂಬುದೇ ಅರ್ಥವೆಂದೂ ಅದಕ್ಕೆ ಕೊನೆಯ ಪ್ರವಾದಿಯೆಂಬ ಅರ್ಥವಿರುವುದಿಲ್ಲವೆಂದೂ ಅಹ್ಮದಿಯಾ ಸಂಘಟನೆಯು ನೀಡುತ್ತಿರುವ ಅರ್ಥ ವಿವರಣೆಯನ್ನು ಪೂರ್ವೀಕರೂ ಆಧುನಿಕರೂ ಆದ ಅನೇಕ ಸುಪ್ರಸಿದ್ಧ ಮತಪಂಡಿತರ ಹೇಳಿಕೆಗಳು ಸಾಕ್ಷ್ಯಪಡಿಸುತ್ತವೆ. ಉದಾಹರಣೆಗಾಗಿ ಮುಹಮ್ಮದ್ ಪೈಗಂಬರರ ಧರ್ಮಪತ್ನಿ, ಹಝ್ರತ್ ಆಯಿಶಾ ಸಿದ್ದೀಖ(ರ) ಈ ರೀತಿ ಹೇಳಿದ್ದಾರೆ :

ಖೂಲೂ ಇನ್ನಹು ಖಾತಮುಲ್ ಅಂಬಿಯಾಇ ವಲಾ ತಖೂಲೂ ಲಾನಬಿಯ್ಯ ಬಅದಹು.

"ಪೈಗಂಬರರು ಖಾತಮುನ್ನಬಿಯ್ಯೀನ್ ಆಗಿರುವರೆಂದು ನೀವು ಹೇಳಿರಿ; ಆದರೆ, ಅವರ ನಂತರ ಪ್ರವಾದಿಯಿಲ್ಲವೆಂದು ಹೇಳಬೇಡಿರಿ." (ದುರ್‍ರುಲ್ ಮನ್‌ಸೂರ್, ತಕ್‌ಮಿಲ ಮಜ್‌ಮಅಲ್‌ಬಿಹಾರ್)

ಹನಫೀ ಮದ್‌ಹಬಿನ ಪ್ರಸಿದ್ಧ ಇಮಾಂ ಆಗಿದ್ದ ಮುಲ್ಲಾಅಲಿಯ್ಯುಲ್ ಖಾರೀ (ಹಿಜರಿ 1014) ಈ ರೀತಿ ಹೇಳಿದ್ದಾರೆ :

"ಪೈಗಂಬರರ ಪುತ್ರ ಇಬ್ರಾಹೀಂ ಬದುಕಿ ಪ್ರವಾದಿಯಾಗಿ ನಿಯೋಗಿಸಲ್ಪಟ್ಟಿದ್ದರೂ ಅಂತೆಯೇ ಉಮರ್‌ಬಿನ್ ಖತ್ತಾಬ್ ಪ್ರವಾದಿಯಾಗಿರುತ್ತಿದ್ದರೂ ಇವರಿಬ್ಬರೂ ಮುಹಮ್ಮದ್ ಪೈಗಂಬರರ ಅನುಯಾಯಿಗಳೇ ಸರಿ. ಆದುದರಿಂದ ಆ ರೀತಿ ಅವರು ಪ್ರವಾದಿಯಾಗಿ ನಿಯುಕ್ತರಾಗುವುದು 'ಖಾತಮುನ್ನಬಿಯ್ಯೀನ್' ಎಂದು ಅಲ್ಲಾಹು ಹೇಳಿರುವುದಕ್ಕೆ ವಿರುದ್ಧವಲ್ಲ. ಯಾಕೆಂದರೆ, ಅದರ ಅರ್ಥ ಆ ಪುಣ್ಯಪ್ರವಾದಿಯವರ ಧರ್ಮವನ್ನು ರದ್ದುಪಡಿಸಿಕೊಂಡು ಅವರ ಅನುಗಾಮಿಯಲ್ಲದ ಪ್ರವಾದಿಗಳು ಬರಲಾರರು ಎಂದಾಗಿರುತ್ತದೆ." (ಅಲ್ ಮೌಸೂಅತ್ : ಪುಟ-59)

ಇನ್ನು, ಖಾತಮುನ್ನಬಿಯ್ಯೀನ್ ಎಂಬುದಾಗಿ ಪವಿತ್ರ ನಬಿಯವರ ಬಗ್ಗೆ ಉಲ್ಲೇಖಿಸಿದ ಖುರ್‌ಆನ್ ವಚನದ ಕುರಿತು ನೋಡುವ. ಪವಿತ್ರ ಖುರ್‌ಆನಿನಲ್ಲಿ ಈ ಶಬ್ದವು ಪ್ರಯುಕ್ತವಾದ ಶೈಲಿಯಿಂದಲೇ ಈ ಶಬ್ದಕ್ಕೆ ಅಂತ್ಯ ಪ್ರವಾದಿಯೆಂಬ ಅರ್ಥವಿಲ್ಲವೆಂಬುದನ್ನು ಗ್ರಹಿಸಬಹುದು. ಪವಿತ್ರ ಖುರ್‌ಆನಿನ ಆ ಪೂರ್ಣ ವಚನವನ್ನು ಗಾಢವಾಗಿ ಅವಲೋಕಿಸಿದರೆ, ಮುಹಮ್ಮದ್ ಪೈಗಂಬರರು ಲೋಕದಲ್ಲಿ ಮೊದಲು ಆವಿರ್ಭವಿಸಿದ ಸಕಲ ಪ್ರವಾದಿಗಳಿಗಿಂತಲೂ

ಶ್ರೇಷ್ಠರಾಗಿರುವವರೆಂದೂ ಅವರ ಸಾಕ್ಷ್ಯಮುದ್ರೆಯೊಂದಿಗೆ ಅವರ ಅನುಯಾಯಿಗಳಲ್ಲಿ ಪ್ರವಾದಿಗಳುಂಟಾಗಬಹುದೆಂದೂ ಇದರ ಅರ್ಥವೆಂದು ತಿಳಿದುಕೊಳ್ಳಲು ಸಾಧ್ಯವಿದೆ. ಪವಿತ್ರ ಖುರ್‌ಆನಿನ 33ನೇ ಅಧ್ಯಾಯ 41ನೇ ವಚನ ಈ ರೀತಿಯಿದೆ :

> ಮಾ ಕಾನ ಮುಹಮ್ಮದುನ್ ಅಬಾ ಅಹದಿನ್ ಮಿರ್ರಿಜಾಲಿಕುಂ ವಲಾಕಿನ್ ರಸೂಲಲ್ಲಾಹಿ ವ ಖಾತ ಮನ್ನಬಿಯ್ಯೀನ ವ ಕಾನಲ್ಲಾಹು ಬಿಕುಲ್ಲಿ ಶೈಯಿನ್ ಅಲೀಮಾ
>
> "ಮುಹಮ್ಮದ್ ನಿಮ್ಮಲ್ಲಿ ಯಾರೊಬ್ಬ ಪುರುಷನ ಪಿತನೂ ಅಲ್ಲ; ಆದರೆ, ಅಲ್ಲಾಹನ ರಸೂಲರಾಗಿದ್ದಾರೆ, ಖಾತಮುನ್ನಬಿಯ್ಯೀನೂ ಆಗಿದ್ದಾರೆ. ಅಲ್ಲಾಹು ಎಲ್ಲವನ್ನೂ ಚೆನ್ನಾಗಿ ಬಲ್ಲವನಾಗಿದ್ದಾನೆ"

ಇಲ್ಲಿ, ಮುಹಮ್ಮದ್ ನಿಮ್ಮಲ್ಲಿ ಯಾರೊಬ್ಬ ಪುರುಷನ ಪಿತನೂ ಅಲ್ಲ ಎಂಬುದಾಗಿ ಹೇಳಿದ ನಂತರ "ಲಾಕಿನ್" (ಆದರೆ) ಎಂಬ ಪದವನ್ನುಪಯೋಗಿಸಿಕೊಂಡು ಮುಂದುವರಿಸಿ ಅವರು 'ರಸೂಲ್' ಮತ್ತು 'ಖಾತಮುನ್ನಬಿಯ್ಯೀನ್' ಆಗಿದ್ದಾರೆಂದು ಅಲ್ಲಾಹು ಹೇಳಿರುತ್ತಾನೆ. ಅರಬಿ ಭಾಷೆಯಲ್ಲಾಗಲೀ ಇತರ ಯಾವ ಭಾಷೆಯಲ್ಲಾಗಲೀ "ಲಾಕಿನ್" (ಆದರೆ) ಎಂಬ ಪದವು ಯಾವುದಾದರೂ ಸಂಶಯವನ್ನು ನಿವಾರಿಸಲಿಕ್ಕೋಸ್ಕರ ಉಪಯೋಗಿಸಲಾಗುತ್ತದೆಯಷ್ಟೆ. ಇಲ್ಲಿ ಸಹ ಅದೇ ರೀತಿ ಉಪಯೋಗಿಸಲಾಗಿದೆ. 'ಮುಹಮ್ಮದ್ ಪೈಗಂಬರರಿಗೆ ಪುರುಷಸಂತಾನವಿಲ್ಲ' ಎಂದು ಹೇಳಿದಾಗ ಉದ್ಭವಿಸುವ ಸಂದೇಹವೇನೆಂಬುದು ಪ್ರತಿಯೊಬ್ಬ ಮುಸ್ಲಿಮನಿಗೂ ಗೊತ್ತು. ಅದೇನೆಂದರೆ, ಪವಿತ್ರ ಖುರ್‌ಆನಿನ ಸೂರಃ ಕೌಸರ್‌ನಲ್ಲಿ "ಇನ್ನ ಶಾನಿಅಕ ಹುವಲ್ ಅಬ್ತರ್" (ನೀನಲ್ಲ, ನಿನ್ನ ಶತ್ರುಗಳೇ ಪುತ್ರ ಸಂತಾನ ಹೀನರು) ಎಂಬುದಾಗಿ ಹೇಳಲ್ಪಟ್ಟಿದೆ. ಹಾಗೆ, ಪೈಗಂಬರರಿಗೆ ಪುತ್ರ ಸಂತಾನವಿದೆ ಎಂದು 'ಕೌಸರ್' ಎಂಬ ಅಧ್ಯಾಯದಲ್ಲಿ ಹೇಳಿರುವಾಗ ಇಲ್ಲಿ ಅಲ್ಲಾಹನೇ ಸ್ವಯಂ "ಮುಹಮ್ಮದ್ ಪೈಗಂಬರರಿಗೆ ಪುತ್ರ ಸಂತಾನವಿಲ್ಲ" ಎಂದು ಅಂಗೀಕರಿಸುವಾಗ ಸ್ವಾಭಾವಿಕವಾಗಿಯೂ ಈ ಬಗ್ಗೆ ಸಂಶಯ ಉದಿಸುವುದು ಸಹಜ. ಆದುದರಿಂದಲೇ ಈ ಸಂಶಯದ ನಿವಾರಣೆಗಾಗಿ ಮುಹಮ್ಮನರಿಗೆ ಪುತ್ರ ಸಂತಾನವಿಲ್ಲವೆಂದು ಹೇಳಿದುದರ ಜೊತೆಗೇ "ಆದರೆ, ಅವರು ರಸೂಲ್ ಮತ್ತು ಖಾತಮುನ್ನಬಿಯ್ಯೀನ್" ಎಂದು ಹೇಳಲಾಗಿದೆ. ಈಗ, "ರಸೂಲ್" ಮತ್ತು "ಖಾತಮುನ್ನಬಿಯ್ಯೀನ್" ಎಂಬುದು ಪೈಗಂಬರರಿಗೆ ಪುತ್ರ ಸಂತಾನವಿಲ್ಲ ಎಂದು ಹೇಳಿದುದಕ್ಕೆ ವಿರುದ್ಧ ಅರ್ಥ ಬರುವ ಎರಡು ಶಬ್ದಗಳಾಗಿರಬೇಕು. ಅಲ್ಲಾಹು ಹೇಳುತ್ತಾನೆ, ಪೈಗಂಬರರಿಗೆ ಶಾರೀರಿಕವಾದ ಗಂಡು ಮಕ್ಕಳು ಇಲ್ಲವಾದರೂ ಅವರು ಒಬ್ಬ ರಸೂಲ್ (ಪ್ರವಾದಿ) ಆಗಿರುವ ಕಾರಣ ಅವರಿಗೆ ಅಸಂಖ್ಯಾತ ಅನುಯಾಯಿಗಳು ಉಂಟಾಗುವರು. ಅವರ ಅನುಯಾಯಿಗಳೆಲ್ಲರೂ ಅವರ ಸಂತಾನಗಳೇ ಆಗಿರುವುದರಿಂದ ಅವರಿಗೆ ಶಾರೀರಿಕ ಪುತ್ರರು ಇಲ್ಲವೆಂಬುದು ಒಂದು ಕೊರತೆಯಾಗಿರಲಾರದು. ಅದೂ ಅಲ್ಲದೆ, ಮೊದಲಿನ ಎಲ್ಲಾ ಪ್ರವಾದಿಗಳಿಗೂ ಈ ರೀತಿಯ ಆಧ್ಯಾತ್ಮಿಕ ಪುತ್ರರು ಇದ್ದಿದ್ದರೂ ಅವರಿಗಿಂತಲೂ ಮಿಗಿಲಾಗಿ ಮುಹಮ್ಮದ್ ಪೈಗಂಬರರು ಖಾತಮುನ್ನಬಿಯ್ಯೀನ್ ಆಗಿರುವರು; ಅಂದರೆ, ಪ್ರವಾದಿಗಳ ಮುದ್ರೆ ಅಥವಾ ಅವರ ಸಂತಾನಗಳಲ್ಲಿ ಪ್ರವಾದಿಗಳು ಸಹ ಉಂಟಾಗುವರು. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಮುಹಮ್ಮದ್ ಪೈಗಂಬರರನ್ನು ಪೂರ್ಣವಾಗಿ ಅನುಸರಿಸುವ ಅವರ ಅನುಯಾಯಿಗಳು "ಪ್ರವಾದಿತ್ವ" ಪದವಿಯನ್ನು ಸಹ ಪಡೆಯಲು ಯೋಗ್ಯರಾಗುವಂತಹ ಅಷ್ಟೊಂದು ಮಹತ್ವದ ಪಿತೃತ್ವ ಮುಹಮ್ಮದ್ ಪೈಗಂಬರರಿಗೆ ಇದೆ. ಆದುದರಿಂದ ಅವರಿಗೆ ಶಾರೀರಿಕವಾದ ಗಂಡು ಮಕ್ಕಳು ಇಲ್ಲವೆಂಬುದು ಅವರ ಆಧ್ಯಾತ್ಮಿಕ ಮಹೋನ್ನತಿಗೆ ಕುಂದು ತರುವುದಿಲ್ಲ. ಅವರಿಗಾದರೋ ಒಬ್ಬ ರಸೂಲ್ ಎಂಬ ನೆಲೆಯಲ್ಲಿ ಇತರ ಪ್ರವಾದಿಗಳಿಗೆ ಇದ್ದಂತೆ ವಿಶ್ವಾಸಿಗಳಾದ ಅಸಂಖ್ಯಾತ ಸಂತಾನಗಳು ಇವೆ. ಮಾತ್ರವಲ್ಲ, ಅವರು ಖಾತಮುನ್ನಬಿಯ್ಯೀನ್ ಆಗಿರುವುದರಿಂದ ಇತರ ಯಾವ ಪ್ರವಾದಿಗಳಿಗೂ ಇಲ್ಲದಂತಹ ಪ್ರವಾದಿಗಳ ಪಿತೃತ್ವ ಸಹ ಮುಹಮ್ಮದ್ ಪೈಗಂಬರರಿಗೆ ಇದೆ.

ಪವಿತ್ರ ಖುರ್‌ಆನಿನ ಪ್ರಸ್ತುತ ಸ್ಥಳದಲ್ಲಿ ಮುಹಮ್ಮದ್ ಪೈಗಂಬರರು ರಸೂಲ್ ಮತ್ತು ಖಾತಮುನ್ನಬಿಯ್ಯೀನ್ ಆಗಿರುವರೆಂದು ಅಲ್ಲಾಹು ಹೇಳಿರುವುದರ ಸರಿಯಾದ ಅರ್ಥ ಇದೇ ಆಗಿದೆ ಎಂದು ನಿಷ್ಪಕ್ಷವಾಗಿ ಅವಲೋಕಿಸುವವರಿಗೆ ತಿಳಿದುಕೊಳ್ಳಲು ಸಾಧ್ಯವಾಗಬಹುದು. ಪ್ರಿಯ ವಾಚಕರೇ, ಖಾತಮುನ್ನಬಿಯ್ಯೀನ್ ಎಂಬುದಕ್ಕೆ ನಾವು ನೀಡುತ್ತಿರುವ ವ್ಯಾಖ್ಯಾನ ಇದಾಗಿದೆ. ಇನ್ನು ನಮ್ಮ ಎದುರಾಳಿಗಳು ಈ ವಚನಕ್ಕೆ ನೀಡುತ್ತಿರುವ

ಅರ್ಥ ವಿವರಣೆಯನ್ನೊಮ್ಮೆ ನೋಡಿರಿ. ಇಂದಿನ ಇತರ ಮುಸ್ಲಿಮರು ಈ ವಚನಕ್ಕೆ ನೀಡುತ್ತಿರುವ ಅರ್ಥವು ಮುಹಮ್ಮದ್ ಪೈಗಂಬರರ ಶ್ರೇಷ್ಠತೆಯನ್ನು ನಿರೂಪಿಸಲು ಪರ್ಯಾಪ್ತವಲ್ಲ. ಮಾತ್ರವಲ್ಲ ಅದು ಖುರ್‌ಆನಿನಲ್ಲಿ ಆ ಶಬ್ದವು ಪ್ರಯುಕ್ತವಾದ ಸ್ಥಳಕ್ಕೆ ಅನುಯೋಜ್ಯವೇ ಅಲ್ಲವಾದ ಅರ್ಥವಾಗಿದೆ. ಖಾತಮುನ್ನಬಿಯ್ಯೀನ್ ಅಂದರೆ ಅಂತ್ಯ ಪ್ರವಾದಿಯೆಂಬುದು ಅವರು ಹೇಳುವ ಅರ್ಥ.* ಇನ್ನು ಮುಂದಕ್ಕೆ ಈ ಲೋಕದಲ್ಲಿ ಅಧರ್ಮವು ಎಂತಹ ತಾಂಡವ ನೃತ್ಯವಾಡಲು ತೊಡಗಿದರೂ ಸಹ ಅಲ್ಲಾಹನ ಕಡೆಯಿಂದ ಒಬ್ಬ ಸುಧಾರಕನೂ ನಿಯುಕ್ತನಾಗಲು ಸಾಧ್ಯವಿಲ್ಲದ ತರದಲ್ಲಿ ಪ್ರವಾದಿತ್ವವೆಂಬ ಅನುಗ್ರಹವನ್ನೇ ಪೈಗಂಬರರು ಕೊನೆಗೊಳಿಸಿದರು ಎಂದು ಹೇಳುವುದರಲ್ಲಿ ಆ ಪೈಗಂಬರರಿಗೆ ಏನು ಶ್ರೇಷ್ಠತೆಯಿರುವುದು ? ಅವರ ಅನುಯಾಯಿಗಳು ಆಧ್ಯಾತ್ಮಿಕವಾಗಿ ಎಷ್ಟು ಉನ್ನತ ಮಟ್ಟಕೇರಿದರೂ ಸಹ 'ಪ್ರವಾದಿತ್ವ'ವೆಂಬ ಅತ್ಯುನ್ನತ ಆಧ್ಯಾತ್ಮಿಕ ಪದವಿಯನ್ನು ಗಳಿಸಲು ಸಾಧ್ಯವಾಗಲಾರದು ಎಂದು ಹೇಳುವುದರಲ್ಲಿ ಆ ದಿವ್ಯಾತ್ಮರಿಗೆ ಏನು ಮಹತ್ವವಿದೆ! ನಮ್ಮ ಇಂದಿನ ಪ್ರಿಯ ಮುಸ್ಲಿಂ ಸಹೋದರರು ಮುಹಮ್ಮದ್ ಪೈಗಂಬರರ ಕುರಿತು 'ಅಂತ್ಯ ಪ್ರವಾದಿ' ಎಂದು ಘೋಷಣೆ ಕೂಗುತ್ತಾ ಬೇಕಾದಲ್ಲೂ ಬೇಡದಲ್ಲೂ ಅದನ್ನು ಕಾಗದಗಳಲ್ಲಿ ಮುದ್ರಿಸುತ್ತಾ ದೊಡ್ಡ ಪುಣ್ಯ ಕಾರ್ಯ ನೆರವೇರಿಸಿದವರಂತೆ ಸಮಾಧಾನ ಪಟ್ಟುಕೊಳ್ಳುವರಾದರೂ ಈ ರೀತಿ 'ಅಂತ್ಯ ಪ್ರವಾದಿ' ಎಂದು ಹೇಳುವುದರಿಂದ ಮುಹಮ್ಮದ್ ಪೈಗಂಬರರಿಗೆ ಏನು ಶ್ರೇಷ್ಠತೆಯಿದೆ; ಅಥವಾ ಇದು ಆ ಮಹಾನ್ ಪ್ರವಾದಿಯವರ ಶ್ರೇಯಸ್ಸಿಗೆ ಕಳಂಕಕರವಲ್ಲವೇ? ಎಂಬುದರ ಬಗ್ಗೆ ಆಲೋಚಿಸದೆ ಇರುವುದು ಅತ್ಯಂತ ದು:ಖದ ಸಂಗತಿಯಾಗಿದೆ. ಅನುಗ್ರಹಗಳನ್ನು ಅಂತ್ಯಗೊಳಿಸುವುದು ಶ್ರೇಷ್ಠತೆಯ ಮಾನದಂಡವೇ? ಎಂತಹ ವಿಪರ್ಯಾಸ!

'ಖಾತಮುನ್ನಬಿಯ್ಯೀನ್' ಎಂಬ ಪದಕ್ಕೆ ಅಂತ್ಯ ಪ್ರವಾದಿ ಎಂದು ಅರ್ಥ ಮಾಡಿದರೆ, ಪವಿತ್ರ ಖುರ್‌ಆನಿನಲ್ಲಿ ಆ ಶಬ್ದವು ಪ್ರಯುಕ್ತವಾದ ಪೂರ್ಣ ವಾಕ್ಯಕ್ಕೆ ಈ ರೀತಿ ಅರ್ಥ ಬರುವುದು: "ಮುಹಮ್ಮದ್ ಪೈಗಂಬರರು ನಿಮ್ಮಲ್ಲಿ ಒಬ್ಬ ಪುರುಷನ ಪಿತನೂ ಅಲ್ಲ, ಆದರೆ, ಅಲ್ಲಾಹನ ರಸೂಲರೂ ಅಂತ್ಯ ಪ್ರವಾದಿಯೂ ಆಗಿದ್ದಾರೆ." ಈ ಅರ್ಥವು ಎಷ್ಟೊಂದು ಅಸಮಂಜಸವೆಂದು ಆಲೋಚಿಸಿ ನೋಡಿರಿ. ಪೈಗಂಬರರ ಒಂದು ಕೊರತೆಯನ್ನು ಅಂಗೀಕರಿಸುತ್ತಾ ಅವರಿಗೆ ಪುತ್ರ ಸಂತಾನವಿಲ್ಲವೆಂದು ಹೇಳಿದ ನಂತರ, ಆದರೆ ಅವರ ನಂತರ ಇನ್ನು ಯಾರೂ ಪ್ರವಾದಿಯೂ ಸಹ ಇಲ್ಲ ಎಂದು ಹೇಳುವುದಕ್ಕೆ ಏನು ಅರ್ಥವಿದೆ? ಪುತ್ರ ಸಂತಾನವಿಲ್ಲ ಎಂದು ಹೇಳುವಾಗ ಉಂಟಾಗುವ ಸಂಶಯವು ಅವರ ಅನುಯಾಯಿಗಳಲ್ಲಿ ಪ್ರವಾದಿಗಳೂ ಇಲ್ಲ ಎಂದು ಹೇಳಿದಾಗ ಇನ್ನಷ್ಟು ಬಲಪಡುವುದೇ ಹೊರತು ಆ ಸಂಶಯವು ನಿವಾರಣೆಯಾದಂತಾಗುವುದೇ? ಹಾಗಿದ್ದಲ್ಲಿ ಸಂಶಯ ನಿವಾರಣೆಗಾಗಿ ಉಪಯೋಗಿಸುವ 'ಲಾಕಿನ್' (ಆದರೆ) ಎಂಬ ಪದವನ್ನು ಅದರ ಮಧ್ಯದಲ್ಲಿ ಅಲ್ಲಾಹು ಪ್ರಯೋಗಿಸಿದುದರ ಅರ್ಥವೇನು? ಈ ಅರ್ಥ ಪ್ರಕಾರ "ಖಾಲಿದನಿಗೆ ಶರೀರದಲ್ಲಿ ಏನೂ ಶಕ್ತಿಯಿಲ್ಲ, ಆದರೆ ಧೈರ್ಯವೂ ಇಲ್ಲ" ಎಂದು ಹೇಳಿದಂತೆ ಆಗುವುದು. ಈ ಪ್ರಯೋಗ ಶೈಲಿ ಎಷ್ಟೊಂದು ಹಾಸ್ಯಾಸ್ಪದವೆಂಬುದು ಎಲ್ಲರಿಗೂ ಗೊತ್ತು. "ಖಾಲಿದನಿಗೆ ಶಾರೀರಿಕ ಶಕ್ತಿ ಏನೂ ಇಲ್ಲ" ಎಂದು ಹೇಳಿ "ಆದರೆ" ಎಂದು ಸೇರಿಸಿದರೆ, "ಆದರೆ ಆತನಿಗೆ ತುಂಬಾ ಧೈರ್ಯವಿದೆ" ಎಂದು ಹೇಳಿದರೆ ಮಾತ್ರವೇ ಸರಿಯಾದ ಪ್ರಯೋಗಶೈಲಿಯಾಗುವುದು. ಆದುದರಿಂದ ಮುಹಮ್ಮದ್ ಪೈಗಂಬರರಿಗೆ ಪುತ್ರ ಸಂತಾನವಿಲ್ಲ ಎಂದು ಹೇಳಿದ ನಂತರ "ಆದರೆ ಅವರ ನಂತರ ಪ್ರವಾದಿಯೂ ಇಲ್ಲ"ವೆಂದು ಹೇಳುವ ಅರ್ಥಕ್ಕಿಂತಲೂ "ಆದರೆ, ಅವರಿಗೆ ವಿಶ್ವಾಸಿಗಳಾದ ಪುತ್ರರೂ ಪ್ರವಾದಿಗಳಾದ ಪುತ್ರರೂ ಕೂಡಾ ಇರುವರು" ಎಂದು ವ್ಯಾಖ್ಯಾನಿಸುವುದಲ್ಲವೇ ಸರಿ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಖಾತಂ ಎಂಬ ಪದವು ಒಂದು ಸಮೂಹ ನಾಮಪದದೊಂದಿಗೆ ಸೇರಿಸಿ ಹೇಳಲ್ಪಟ್ಟಾಗ ಆ ಸಮೂಹದ ಶ್ರೇಷ್ಠ ವ್ಯಕ್ತಿ ಎಂಬುದೇ

---

* 'ಖಾತಂ' ಎಂಬ ಪದಕ್ಕೆ ಮುದ್ರೆ ಎಂದು ಶಬ್ದಾರ್ಥ ಹೇಳುವಲ್ಲಿ ನಮಗೂ ಇತರರಿಗೂ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ ಪ್ರವಾದಿಗಳನ್ನೆಲ್ಲಾ ಮುದ್ರೆಯಿಟ್ಟು ಅಂತ್ಯಗೊಳಿಸಿದ ಅಂತ್ಯ ಪ್ರವಾದಿ ಎಂದು 'ಖಾತಮುನ್ನಬಿಯ್ಯೀನ್' ಎಂಬುದಕ್ಕೆ ಇತರರು ವ್ಯಾಖ್ಯಾನ ನೀಡುತ್ತಾರೆ. ಆದರೆ, ನಾವು ಅದಕ್ಕೆ ನೀಡುವ ಅರ್ಥ, ನಂತರ ಬರುವಂತಹ ಆಧ್ಯಾತ್ಮಿಕ ಸುಧಾರಕರೆಲ್ಲರೂ ಸಹ ಆ ಪ್ರವಾದಿವರ್ಯರ ಸಾಕ್ಷ್ಯ ಮುದ್ರೆಯಿಂದ ಸತ್ಯಪಡಿಸಲ್ಪಡುವಂತಹ ಪ್ರಮಾಣ ಮುದ್ರೆಯ ಮಾಲೀಕರು ಮುಹಮ್ಮದ್ ಪೈಗಂಬರರಾಗಿದ್ದಾರೆ ಎಂಬುದು. ಅಂತೂ ವ್ಯಾಖ್ಯಾನದಲ್ಲಿ ಮಾತ್ರ ನಮಗೂ ಇತರರಿಗೂ ಭಿನ್ನಾಭಿಪ್ರಾಯವೇ ಹೊರತು, ಶಬ್ದಾರ್ಥ ನೀಡುವುದರಲ್ಲಲ್ಲ.

ಅದರ ಅರ್ಥವೆಂಬುದಾಗಿ ಅರಬಿ ಸಾಹಿತ್ಯದಿಂದ ಸಾಬೀತಾಗುತ್ತದೆ. ಆ ರೀತಿ ಪ್ರಯುಕ್ತವಾದಾಗ ಆ ಸಮೂಹದಲ್ಲಿ ಕೊನೆಯವನೆಂಬ ಅರ್ಥ ಬರುವ ಒಂದೇ ಒಂದು ಉದಾಹರಣೆಯನ್ನು ಯಾರಾದರೂ ಅರಬಿ ಸಾಹಿತ್ಯಕಾರ ಯಾವುದಾದರೂ ಅರಬಿ ಕೃತಿಯಲ್ಲಿ ಉಪಯೋಗಿಸಿರುವುದನ್ನು ತೋರಿಸಿಕೊಡಲು ಯಾರಿಂದಲೂ ಸಾಧ್ಯವಿಲ್ಲ. ಅದೂ ಅಲ್ಲದೆ ಪವಿತ್ರ ಖುರ್‌ಆನಿನಲ್ಲಿ ಖಾತಮುನ್ನಬಿಯ್ಯೀನ್ ಎಂದು ಹೇಳಲಾದ ಸ್ಥಳದಲ್ಲಿ ಆ ಪದಕ್ಕೆ "ಪ್ರವಾದಿಗಳಲ್ಲಿ ಶ್ರೇಷ್ಠ" ಎಂದೂ ನಂತರ ಬರುವ ಪ್ರವಾದಿಗಳಿಗೂ ಪಿತಾಮಹನಾಗಿ ಶೋಭಿಸುವ ಮುದ್ರೆ ಲಭಿಸಿದ ಪ್ರವಾದಿಯೆಂದೂ ಅದರ ಅರ್ಥವಾಗಿದೆ ಎಂದು ಮೇಲಿನ ವಿವರಣೆಗಳಿಂದ ತಿಳಿದುಕೊಳ್ಳಬಹುದು. ಆದುದರಿಂದ ಖಾತಮುನ್ನಬಿಯ್ಯೀನ್ ಎಂಬ ದಾಗಿ ನಬಿವರ್ಯರ ಕುರಿತು ಖುರ್‌ಆನಿನಲ್ಲಿ ಹೇಳಿರುವ ಕಾರಣ ಇನ್ನು ಯಾರೂ ಪ್ರವಾದಿಯಾಗಿ ಬರಲಾರರು ಎಂದು ಸಾಬೀತಾಗುತ್ತದೆ ಎಂಬ "ಪರಿಸಮಾಪ್ತಕರ" ವಾದವು ಆಧಾರರಹಿತವಾಗಿದೆ. ಖಾತಮುನ್ನಬಿಯ್ಯೀನ್ ಎಂಬುದರಿಂದ ನಂತರದಲ್ಲೂ ಪ್ರವಾದಿ ನಿಯೋಗ ಉಂಟಾಗುವುದು ಎಂದೇ ಸಾಬೀತಾಗುತ್ತದೆ.

## ಹಝ್ರತ್ ಅಹ್ಮದ್ (ಅ) ಒಬ್ಬ ನವೀನ ಧರ್ಮಸ್ಥಾಪಕ ಪ್ರವಾದಿಯಲ್ಲ

ಪ್ರವಾದಿತ್ವದ ಬಗ್ಗೆ ಇಂದಿನ ಮುಸ್ಲಿಂ ಬಹುಸಂಖ್ಯಾಕರೆಡೆಯಲ್ಲಿ ಪ್ರಚಲಿತವಾಗಿರುವ ಇನ್ನೊಂದು ತಪ್ಪು ಭಾವನೆಯ ಕುರಿತು ಸಹ ಇಲ್ಲಿ ವಿವರಿಸಬೇಕಾದುದು ಅನಿವಾರ್ಯವಾಗಿರುತ್ತದೆ. ಅದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರರ ನಂತರ ಒಬ್ಬ ಪ್ರವಾದಿಯು ಅವತೀರ್ಣರಾಗಿರುವರೆಂದು ನಂಬುವುದಾದಲ್ಲಿ, ಮುಹಮ್ಮದ್ ಪೈಗಂಬರರಿಂದ ಸ್ಥಾಪಿಸಲ್ಪಟ್ಟ ಧರ್ಮವು ಕಾಲಹರಣಗೊಳ್ಳುವುದಿಲ್ಲವೇ? ಅಥವಾ ಒಬ್ಬ ಪ್ರವಾದಿಯ ಅವತಾರದ ಕಾರಣದಿಂದ ಮೊದಲಿನ ಪ್ರವಾದಿಯು ಪ್ರಬೋಧಿಸಿದ ಶರೀಅತ್ (ಧರ್ಮಶಾಸ್ತ್ರವು) ದುರ್ಬಲವಾಗಿ ಬೇರೆ ಹೊಸ ಶರೀಅತ್ ನಿಯಮಗಳನ್ನು ಅನುಸರಿಸಬೇಕಾಗುವುದಿಲ್ಲವೇ ? ಎಂದು ಅವರು ಅನುಮಾನಿಸುತ್ತಾರೆ. ಅಹ್ಮದೀಯರು ಪೈಗಂಬರರ ನಂತರ ಆಗತರಾದ ಒಬ್ಬ ಪ್ರವಾದಿಯಲ್ಲಿ ನಂಬಿಕೆಯಿಡುತ್ತಾ ಹೊಸ ಒಂದು ಧರ್ಮವನ್ನೇ ಅನುಸರಿಸುತ್ತಾರೆಂದೂ ಅವರಿಗೆ ಇತರ ಮುಸ್ಲಿಮರಿಂದ ಭಿನ್ನವಾದೊಂದು 'ಕಲಿಮ'ವೂ ಬೇರೆಯೇ "ಖಿಬ್ಲ"ವೂ ಇದೆಯೆಂದೂ ಕೆಲವರು ಹೇಳುತ್ತಾರೆ. ಮಾತ್ರವಲ್ಲ ಅಹ್ಮದೀಯರು ಮುಹಮ್ಮದ್ ಪೈಗಂಬರರಲ್ಲಿ ವಿಶ್ವಾಸವಿಲ್ಲದವರೆಂದು ಸಹ ಕೆಲವರು ಹೇಳುತ್ತಾರೆ. ಮೇಲಿನ ತಪ್ಪಭಿಪ್ರಾಯಗಳೆಲ್ಲವೂ ಒಂದೋ ತಿಳುವಳಿಕೆಯ ಅಭಾವದಿಂದ ಉದ್ಭವವಾದವುಗಳಾಗಿರಬೇಕು. ಇಲ್ಲವಾದರೆ, ಅಹ್ಮದಿಯಾ ಸಂಘಟನೆಯ ವಿರೋಧಿಗಳು ಉದ್ದೇಶಪೂರ್ವಕವಾಗಿ ಸ್ವಯಂ ನಿರ್ಮಿಸಿ ಹಬ್ಬಿಸುವ ಕುಪ್ರಚಾರದ ಫಲವಾಗಿರಬೇಕು. "ಅಹ್ಮದೀಯರು ಒಬ್ಬ 'ನವೀನ ಪ್ರವಾದಿ'ಯಲ್ಲಿ ವಿಶ್ವಾಸ ಹೊಂದಿರುವ ಕಾರಣ ಅವರಿಗೆ ಹೊಸತೊಂದು ಧರ್ಮಶಾಸ್ತ್ರವಿದೆ"ಯೆಂದು ಹೇಳುವುದು ಸತ್ಯಕ್ಕೆ ದೂರವಾದೊಂದು ಆಕ್ಷೇಪವಾಗಿದೆ. ಅಹ್ಮದೀಯರಿಗೆ ಇಸ್ಲಾಂ ಧರ್ಮವಲ್ಲದೆ ಬೇರೊಂದು ಧರ್ಮವಿಲ್ಲ. ಪವಿತ್ರ ಖುರ್‌ಆನ್ ಎಂಬುದು ಲೋಕಾವಸಾನದ ವರೆಗಿನ ಮಾನವ ಸಮುದಾಯದ ಮಾರ್ಗದರ್ಶನಕ್ಕೆ ಅಲ್ಲಾಹನಿಂದ ನೀಡಲ್ಪಟ್ಟ ಸಂಪೂರ್ಣವೂ ಸುರಕ್ಷಿತವೂ ಆದ ಶರೀಅತ್ (ಧರ್ಮಶಾಸ್ತ್ರ) ಗ್ರಂಥವಾಗಿದೆ ಎಂಬುದು ಅಹ್ಮದೀಯರ ದೃಢವಾದ ವಿಶ್ವಾಸ. ಪವಿತ್ರ ಖುರ್‌ಆನ್ ಸರ್ವಸಂಪೂರ್ಣವಾದ ದೈವಗ್ರಂಥವಾಗಿರುವ ಕಾರಣ ಇನ್ನು ಲೋಕಾಂತ್ಯದ ವರೆಗೆ ಬೇರೊಂದು ಧರ್ಮಶಾಸ್ತ್ರದ ಅವತರಣವುಂಟಾಗಲಾರದೆಂದೂ ಅಂತೆಯೇ ಆ ಪವಿತ್ರ ಗ್ರಂಥವು ಲೋಕಾವಸಾನದ ವರೆಗೂ ಮನುಷ್ಯರ ಹಸ್ತಕ್ಷೇಪದಿಂದ ಸುರಕ್ಷಿತವಾಗಿರುವುದೆಂದೂ ಅದರ ಸಂರಕ್ಷಣೆಯ ಜವಾಬ್ದಾರಿಕೆಯನ್ನು ಅಲ್ಲಾಹನೇ ವಹಿಸಿಕೊಂಡಿರುವುದರಿಂದ ಅದರಲ್ಲಿ ಯಾವ ವಿಧದ ತಿದ್ದುಪಡಿಯೂ ಹೆಚ್ಚು ಕಡಿಮೆಯೂ ಅಗತ್ಯವಿಲ್ಲವೆಂಬುದೂ ಅಹ್ಮದೀಯರಾದ ನಮ್ಮ ವಿಶ್ವಾಸವಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ನಂತರ ಹೊಸತಾದ ಒಂದು ಧರ್ಮವನ್ನು ಸ್ಥಾಪಿಸಿ ಒಂದು ಹೊಸ 'ಕಲಿಮ'ವನ್ನೂ ಹೊಸತಾದ ಒಂದು ಶರೀಅತ್ ಕ್ರಮವನ್ನೂ ಪ್ರಬೋಧಿಸುತ್ತಾ ಒಬ್ಬ ಪ್ರವಾದಿಯು ಆಗಮಿಸುವರೆಂಬ ವಿಚಾರವನ್ನು ನಾವು ನಿಮಿಷ ಮಾತ್ರಕ್ಕೂ ಸಮ್ಮತಿಸುವುದಿಲ್ಲ. ಹಾಗೆಯೇ ಆ ದಿವ್ಯಾತ್ಮರ ಅನುಯಾಯಿಯಾಗಿರದ, ಅವರ ಶಿಷ್ಯತ್ವವನ್ನು ಸ್ವೀಕರಿಸದ ಹಾಗೂ ಆ ಮಹಾ ಪ್ರವಾದಿಯವರ ಶರೀಅತ್ ನಿಯಮಗಳ ಅನುಗಾಮಿಯಲ್ಲದ ಒಬ್ಬ ವ್ಯಕ್ತಿಯು ಅವರ ನಂತರ ಪ್ರವಾದಿ

ಯಾಗಿ ನಿಯೋಗಿಸಲ್ಪಡುವುದನ್ನು ಸಹ ನಾವು ಅಂಗೀಕರಿಸುವುದಿಲ್ಲ. ಮುಹಮ್ಮದ್ ಪೈಗಂಬರರ ನಂತರ ಅವರು ಸ್ಥಾಪಿಸಿದ ಧರ್ಮವನ್ನು ಅನುಸರಿಸದೆಯೇ ಯಾರಿಗಾದರೂ ಪ್ರವಾದಿತ್ವ ಲಭಿಸುವುದೆಂದರೆ ಇಸ್ಲಾಂ ಧರ್ಮ ಕಾಲಹರಣವಾಯಿತೆಂದು ಅದಕ್ಕೆ ಅರ್ಥವಾಗುತ್ತದೆ. ಒಬ್ಬ ವ್ಯಕ್ತಿಗೆ ಪೈಗಂಬರರ ಶಿಷ್ಯತ್ವದ ಸಹಾಯವೂ ಇಸ್ಲಾಂ ಧರ್ಮದ ಅನುಸರಣೆಯೂ ಇಲ್ಲದೆ ನೇರವಾಗಿ ಪ್ರವಾದಿತ್ವ ಪದವಿ ಲಭಿಸಬಹುದೆಂದಾದರೆ, ಇಸ್ಲಾಂ ಧರ್ಮದ ಪರಿಪೂರ್ಣತೆಗೂ ಪೈಗಂಬರರ ಸಾರ್ವಭೌಮತೆಗೂ ಅದರಿಂದ ಕಳಂಕ ತಟ್ಟುವುದು. ಅಂತಹ ಒಬ್ಬ ಪ್ರವಾದಿಯ ಬರುವಿಕೆಯನ್ನು ಅಹ್ಮದೀಯರಾದ ನಾವು ಸರ್ವತಾ ಒಪ್ಪುವುದಿಲ್ಲ. ಆದರೆ, ಪ್ರವಾದಿಗಳ ಚಕ್ರವರ್ತಿಯಾಗಿ ಶೋಭಿಸುತ್ತಿರುವ, ಸಮಸ್ತ ಪ್ರವಾದಿಗಳಿಗೂ ಸಾರ್ವಭೌಮರಾಗಿರುವ ಆ ಮಹೋನ್ನತ ಪ್ರವಾದಿಯ ಶಿಷ್ಯತ್ವವನ್ನು ಸ್ವೀಕರಿಸಿಕೊಂಡು ಆ ಪ್ರವಾದಿವರ್ಯರು ಸ್ಥಾಪಿಸಿದ ಸರ್ವ ಸಂಪೂರ್ಣವಾದ ಇಸ್ಲಾಂ ಧರ್ಮಶಾಸ್ತ್ರವನ್ನು ಅನುಸರಿಸಿದರೂ ಸಹ ಇನ್ನು ಮುಂದಕ್ಕೆ ಯಾರಿಗೂ ನುಬುವ್ವತ್ ಪದವಿಯು ಲಭಿಸಲಾರದೆಂದು ಹೇಳುವುದನ್ನು ನಮಗೆ ಸ್ವೀಕರಿಸಲು ಸಾಧ್ಯವಿಲ್ಲ. ಈ ರೀತಿ ಆ ದಿವ್ಯಾತ್ಮರನ್ನು ಪೂರ್ಣವಾಗಿ ಅನುಸರಿಸುವುದರ ಫಲವಾಗಿ ಯಾರಿಗೂ ಸಹ ಪ್ರವಾದಿತ್ವವೆಂಬ ಅತ್ಯುನ್ನತ ಪದವಿಯು ಲಭಿಸಲಾರದೆಂದು ನಂಬುವುದಾದಲ್ಲಿ ಅವರ ಆಗಮನದಿಂದ ಮನುಷ್ಯರಿಗೆ ಅಲ್ಲಾಹನ ಕಡೆಯಿಂದ ಲಭಿಸುತ್ತಿದ್ದ ಅತಿ ಮಹತ್ತಾದ ಒಂದು ಅನುಗ್ರಹವು ನಷ್ಟವಾಯಿತೆಂದು ಹೇಳಬೇಕಾದೀತು. ಹಾಗೆ, ಅವರು ಮನುಷ್ಯ ವಂಶವನ್ನು ಆಧ್ಯಾತ್ಮಿಕವಾಗಿ ಉದ್ಧರಿಸಿ ದೈವಸನ್ನಿಧಿಯಲ್ಲಿ ಅವರನ್ನು ಸ್ವೀಕಾರ್ಯಯೋಗ್ಯರನ್ನಾಗಿ ಮಾಡುವುದರ ಬದಲು ಅಲ್ಲಾಹನಿಂದ ಲಭಿಸುವ ಅನುಗ್ರಹಗಳನ್ನು ಮುಹಮ್ಮದ್ ಪೈಗಂಬರರು ಬಂದು ತಡೆಹಿಡಿದರು ಎಂದು ಹೇಳಬೇಕಾದೀತು (ನವೂದು ಬಿಲ್ಲಾಃ). ಮೇಲಿನ ಎರಡು ವಿಶ್ವಾಸಗಳೂ ಇಸ್ಲಾಂ ಧರ್ಮಕ್ಕೂ ಹಝ್ರತ್ ಮುಹಮ್ಮದ್ ಪೈಗಂಬರರ ಮಹಿಮೆಗೂ ಕಂಟಕಕಾರಿಯಾಗಿವೆ. ಇಸ್ಲಾಂ ಧರ್ಮವನ್ನು ರದ್ದುಪಡಿಸಿಕೊಂಡು ಹೊಸ ಒಂದು ಧರ್ಮಶಾಸ್ತ್ರದ ಪ್ರಬೋಧಕರಾದ ಪ್ರವಾದಿಯು ಬರುವರೆಂಬ ವಿಶ್ವಾಸವು ಯಾವ ರೀತಿಯಲ್ಲಿ ಇಸ್ಲಾಂ ಧರ್ಮವನ್ನೇ ಬುಡಮೇಲಾಗಿಸುವ ಒಂದು ನಂಬಿಕೆಯೋ ಅದೇ ರೀತಿ ಮುಹಮ್ಮದ್ ಪೈಗಂಬರರನ್ನು ಪರಿಪೂರ್ಣವಾಗಿ ಅನುಸರಿಸಿದರೂ ಸಹ ಆಧ್ಯಾತ್ಮಿಕವಾಗಿ ಅತ್ಯುನ್ನತ ಸ್ಥಾನವಾದ ಪ್ರವಾದಿತ್ವವು ಲಭಿಸಲು ಸಾಧ್ಯವೇ ಇಲ್ಲವೆಂದು ನಂಬುವುದು ಸಹ ಒಂದು ಆಪತ್ಕರವಾದ ವಿಶ್ವಾಸವಾಗಿದೆ. ಈ ರೀತಿ ನಂಬುವುದು ನಿಜವಾಗಿಯೂ ಆ ಪ್ರವಾದಿವರ್ಯರ ಶ್ರೇಷ್ಠತೆಯ ಮೇಲೆ ನಡೆಸುವ ಒಂದು ಆಕ್ರಮಣವಾಗಿದೆ. ಅಹ್ಮದೀಯರಾದ ನಮಗೆ ಆ ರೀತಿ ವಿಶ್ವಾಸ ಹೊಂದಲು ಸಾಧ್ಯವಿಲ್ಲ. ಹಝ್ರತ್ ಖಾತಮುನ್ನಬಿಯ್ಯೀನ್ ಮುಹಮ್ಮದ್ ಮುಸ್ತಫಾ (ಸ)ರವರು ಸಮಸ್ತ ಜಗತ್ತಿಗೇ ಅನುಗ್ರಹವಾಗಿ ಆಗಮಿಸಿದ್ದಾರೆಂಬುದು ನಮ್ಮ ದೃಢ ನಂಬಿಕೆಯಾಗಿದೆ. ಅವರ ಆಗಮನದಿಂದಾಗಿ ಅಲ್ಲಾಹನ ಕಡೆಯಿಂದ ಮನುಷ್ಯ ವಂಶಕ್ಕೆ ಲಭಿಸುತ್ತಿದ್ದ ಅನುಗ್ರಹಗಳೆಲ್ಲವೂ ಮೊದಲಿಗಿಂತ ಊರ್ಜಿತಗೊಂಡಿವೆಯೇ ವಿನಃ ಆ ಅನುಗ್ರಹಗಳ ಬಾಗಿಲು ಮುಚ್ಚಲ್ಪಡಲು ಸಾಧ್ಯವೇ ಇಲ್ಲ. ಮುಹಮ್ಮದ್ ಪೈಗಂಬರ್ (ಸ)ರವರು ಒಬ್ಬ ಅತ್ಯಂತ ಶ್ರೇಷ್ಠ ಮಾದರಿಯ ಅನುಸರಣಾಯೋಗ್ಯ ಪ್ರವಾದಿಯಾಗಿರುವರು. ಅವರು ಸ್ಥಾಪಿಸಿದ ಧರ್ಮವು ಮನುಷ್ಯರನ್ನು ಆಧ್ಯಾತ್ಮಿಕವಾಗಿ ಅತ್ಯಂತ ಮಹೋನ್ನತ ಪದವಿಗೆ ತಲುಪಿಸಲು ಪರ್ಯಾಪ್ತವಾದ ಧರ್ಮವಾಗಿದೆ. ಆ ಪ್ರವಾದಿಯವರ ಯೋಗ್ಯ ಮಾದರಿಯನ್ನು ಅನುಕರಿಸುವುದರ ಫಲವಾಗಿಯೂ ಇಸ್ಲಾಂ ಧರ್ಮವನ್ನು ಪೂರ್ಣವಾಗಿ ಅನುಸರಿಸುವುದರ ಫಲವಾಗಿಯೂ ಒಬ್ಬ ವ್ಯಕ್ತಿಗೆ ಪ್ರವಾದಿತ್ವವೆಂಬ ಅತ್ಯುನ್ನತ ಪದವಿಯನ್ನು ಸಹ ಅಲ್ಲಾಹು ನೀಡುವನೆಂಬುದು ಇತರ ಎಲ್ಲಾ ಪ್ರವಾದಿಗಳಿಗಿಂತಲೂ ಮುಹಮ್ಮದ್ ಪೈಗಂಬರರಿಗೆ ಮಾತ್ರವಿರುವ ವಿಶೇಷತೆಯಾಗಿದೆ. ಆದರೆ, ಪೈಗಂಬರರ ಮೂಲಕವಲ್ಲದೆ ನೇರವಾಗಿ ಲಭಿಸುವ ಪ್ರವಾದಿತ್ವವನ್ನು ನಾವು ಅಂಗೀಕರಿಸುವುದಿಲ್ಲ.

ಆದುದರಿಂದ ಪ್ರಿಯ ವಾಚಕರೇ, ಸತ್ಯವನ್ನು ಗ್ರಹಿಸಿಕೊಳ್ಳುವಲ್ಲಿ ಸರ್ವಶಕ್ತನಾದ ಅಲ್ಲಾಹು ನಿಮ್ಮ ಹೃದಯಗಳನ್ನು ತೆರೆದುಕೊಡಲಿ. ನವೀನ ಧರ್ಮಶಾಸ್ತ್ರದೊಂದಿಗೆ (ಶರೀಅತ್) ಒಬ್ಬ ಪ್ರವಾದಿಯ ಅವತಾರವಾದರೆ ಮಾತ್ರವೇ ಮೊದಲು ಜಾರಿಯಲ್ಲಿದ್ದ ಧರ್ಮವು ಕಾಲಹರಣಗೊಳ್ಳಲು ಸಾಧ್ಯ. ಯಾರ ಅನುಸರಣೆಯೂ ಕೂಡದೇ ನೇರವಾಗಿ ಪ್ರವಾದಿತ್ವ ಲಭಿಸಿದ ಒಬ್ಬ ಪ್ರವಾದಿಯ ಆಗಮನದಿಂದ ಮಾತ್ರವೇ ಮೊದಲು ನೆಲೆಸಿರುವ ಧರ್ಮವು ರದ್ದುಗೊಂಡಂತಾಗುವುದು. ಆದರೆ, ಮೊದಲು ಆವಿರ್ಭವಿಸಿದ ಪ್ರವಾದಿವರ್ಯರನ್ನು ಪೂರ್ಣವಾಗಿ ಅನುಸರಿಸಿದ್ದರ ಫಲವಾಗಿ ಅವರ ಶಿಷ್ಯರಲ್ಲಿ ಒಬ್ಬರಿಗೆ ಪ್ರವಾದಿತ್ವ

ಲಭಿಸುವುದಾದರೆ, ಹಾಗೂ ಮೊದಲಿನ ಪ್ರವಾದಿಯ ಶ್ರೇಷ್ಠತೆಯನ್ನು ನಿರೂಪಿಸುವ ಕೆಲಸಕ್ಕಾಗಿಯೇ ಅವರು ಪ್ರವಾದಿಯಾಗಿ ನಿಯುಕ್ತರಾಗುವರೆಂದಾದರೆ, ಅಂತಹ ಪ್ರವಾದಿಯ ಆಗಮನವು ಮೊದಲಿನ ಪ್ರವಾದಿಯ ಶ್ರೇಯಸ್ಸಿಗೆ ಯಾವತ್ತೂ ಕಳಂಕಕರವಲ್ಲವೆಂಬುದನ್ನು ತಿಳಿದುಕೊಳ್ಳಿರಿ. ಆ ರೀತಿಯ ಶಿಷ್ಯ ಪ್ರವಾದಿಯ ಆಗಮನದಿಂದ ಮೊದಲು ಆವಿರ್ಭವಿಸಿದ ಪ್ರವಾದಿಯ ಮಹತ್ವವು ಇನ್ನಷ್ಟು ಶೋಭಾಯಮಾನವಾಗುವುದು. ಇಂತಹ ಪ್ರವಾದಿಯ ಬರುವಿಕೆಯ ಕುರಿತು ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಗಳಿವೆ.

ಇಂದಿನ ಮುಸಲ್ಮಾನರೆಡೆಯಲ್ಲಿ ಈ ರೀತಿಯ ಒಂದು ತಪ್ಪು ಭಾವನೆಯು ಪ್ರಚಾರದಲ್ಲಿರಲು ಕಾರಣ ಅವರು ನುಬುವ್ವತಿನ (ಪ್ರವಾದಿತ್ವದ) ಅರ್ಥವನ್ನು ಸರಿಯಾಗಿ ಗ್ರಹಿಸದುದರಿಂದಲೇ ಆಗಿದೆ. ಹೊಸತಾದ ಒಂದು ಶರೀಅತ್ ಕ್ರಮವನ್ನು ಪ್ರಬೋಧಿಸಿಕೊಂಡು ಒಂದು ನವೀನ ಧರ್ಮವನ್ನು ಸ್ಥಾಪಿಸಲು ಮಾತ್ರವೇ ಪ್ರವಾದಿಗಳು ಆಗಮಿಸುವರೆಂದೂ ಅಥವಾ ಜಾರಿಯಲ್ಲಿರುವ ಧರ್ಮದಲ್ಲಿ ಏನಾದರೂ ಬದಲಾವಣೆಯನ್ನುಂಟು ಮಾಡಲಿಕ್ಕಾಗಿಯೇ ಪ್ರವಾದಿಗಳು ನಿಯುಕ್ತರಾಗುವರೆಂದೂ ಇವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಆದರೆ, ಇವು ಮೂರು ಸಹ ಪ್ರವಾದಿತ್ವದ ಅನಿವಾರ್ಯ ಘಟಕಗಳಲ್ಲ. ಒಂದು ಶರೀಅತ್ ಕ್ರಮವನ್ನು ರದ್ದುಪಡಿಸಿ ಹೊಸತಾದ ಇನ್ನೊಂದು ಧರ್ಮವನ್ನು ಸ್ಥಾಪಿಸಲಿಕ್ಕಾಗಿ ಪ್ರವಾದಿ ನಿಯೋಗವುಂಟಾಗುವುದಿದೆ. ಹಾಗೆಯೇ, ಹೊಸತಾದ ಯಾವುದೇ ಧರ್ಮವನ್ನು ಸ್ಥಾಪಿಸದ, ನವೀನವಾದ ಯಾವುದೇ ಶರೀಅತ್ ಗ್ರಂಥವನ್ನು ತರದ, ಜಾರಿಯಲ್ಲಿರುವ ಶರೀಅತ್ ಕ್ರಮದಲ್ಲಿ ಏನೂ ಮಾರ್ಪಾಟನ್ನು ಸಹ ಮಾಡದೆ ಇರುವಂತಹ ಪ್ರವಾದಿಗಳೂ ನಿಯೋಗಿಸಲ್ಪಡಬಹುದು. ನುಬುವ್ವತ್ ಎಂಬುದು ಮನುಷ್ಯರಿಗೆ ಅಲ್ಲಾಹು ನೀಡುವ ಪರಮೋಚ್ಚ ಆಧ್ಯಾತ್ಮಿಕ ದರ್ಜೆಯ ಹೆಸರಾಗಿದೆ. ಅದರ ಮುಖಾಂತರ ಅಂಧಕಾರವು ತೊಲಗಿ ಮನುಷ್ಯ ವಂಶವು "ನಿಜವಾದ ಸನ್ಮಾರ್ಗ"ದಲ್ಲಿ ಚಲಿಸುವಂತಾಗುತ್ತದೆ. ಪ್ರವಾದಿಗಳ ಮೂಲಕವಾಗಿ ಹೊರಚಿಮ್ಮುವ ಆಧ್ಯಾತ್ಮಿಕ ಪ್ರಭೆಯು ಆ ಪ್ರವಾದಿಗಳಿಗೆ ಹೊಸತಾಗಿ ಲಭಿಸಿದ ಧರ್ಮಶಾಸ್ತ್ರವಾಗಿರಬಹುದು; ಅದೇ ರೀತಿ ಮೊದಲೇ ಸ್ಥಾಪಿಸಲ್ಪಟ್ಟಿದ್ದು ಜನರಿಂದ ತಿರಸ್ಕರಿಸಲ್ಪಟ್ಟ ಧರ್ಮಶಾಸ್ತ್ರವಾಗಿರಲೂ ಬಹುದು. ಪವಿತ್ರ ಖುರ್‌ಆನಿನಲ್ಲಿ ವಿವರಿಸಲ್ಪಟ್ಟ ಪ್ರವಾದಿಗಳ ವೃತ್ತಾಂತವನ್ನು ಚೆನ್ನಾಗಿ ಅವಲೋಕಿಸುವ ಯಾರಿಗೂ ಈ ವಿಚಾರವನ್ನು ಸುಲಭದಲ್ಲೇ ಗ್ರಹಿಸಿಕೊಳ್ಳಲು ಸಾಧ್ಯವಿದೆ. ಈ ಲೋಕದಲ್ಲಿ ಅವತರಿಸಿದ ಪ್ರತಿಯೊಬ್ಬ ಪ್ರವಾದಿಯೂ ತನ್ನೊಂದಿಗೆ ಹೊಸತಾದ ಶರೀಅತ್ ನಿಯಮಗಳನ್ನು ತಂದಿದ್ದೇ ಇಲ್ಲ. ಪ್ರತಿಯೋರ್ವ ಪ್ರವಾದಿಯೂ ಒಂದೊಂದು ನವೀನ ಧರ್ಮವನ್ನು ಸ್ಥಾಪಿಸಲು ಆಗತರಾದವರಲ್ಲ. ಪ್ರವಾದಿಗಳ ಪೈಕಿ ಕೇವಲ ಕೆಲವರು ಮಾತ್ರವೇ ನವೀನ ಧರ್ಮಶಾಸ್ತ್ರವನ್ನು ತಂದವರೋ ಮೊದಲಿನ ಧರ್ಮಶಾಸ್ತ್ರದಲ್ಲಿ ಏನಾದರೂ ತಿದ್ದುಪಡಿಯನ್ನು ಮಾಡಲು ಅವತರಿಸಿದವರೋ ಆಗಿದ್ದಾರೆ. ಹೆಚ್ಚಿನಂಶ ಪ್ರವಾದಿಗಳೂ ಅವರಿಗೆ ಮೊದಲು ಜಾರಿಯಲ್ಲಿದ್ದ ಧರ್ಮಶಾಸ್ತ್ರವನ್ನೇ ಜನರಿಗೆ ಮತ್ತೂ ಪ್ರಬೋಧಿಸಲಿಕ್ಕಾಗಿ ಆಗಮಿಸಿದವರಾಗಿದ್ದಾರೆ. ಉದಾಹರಣೆಗೆ, ಬನೀ ಇಸ್ರಾಯೀಲ್‌ಗಳೆಡೆಯಲ್ಲಿ ಶರೀಅತ್ (ಧರ್ಮಶಾಸ್ತ್ರ)ದೊಂದಿಗೆ ಅವತರಿಸಿದ ಪ್ರವಾದಿ ಹಝ್ರತ್ ಮೂಸಾ (ಅ)ಆಗಿದ್ದರು. ಅವರಿಗೆ ನಂತರ ಅದೆಷ್ಟೋ ಪ್ರವಾದಿಗಳು ಇಸ್ರಾಯೀಲ್ ಗೋತ್ರದವರೆಡೆಯಲ್ಲಿ ನಿಯುಕ್ತರಾದರೂ ಅವರೆಲ್ಲರೂ ಸಹ ಹಝ್ರತ್ ಮೂಸಾ (ಅ) ರವರು ಸ್ಥಾಪಿಸಿದ "ತೌರಾತ್" ಎಂಬ ಶರೀಅತ್ ಗ್ರಂಥವನ್ನೇ ಪ್ರಬೋಧಿಸಲು ನಿಯುಕ್ತರಾದವರೇ ವಿನಃ ಅವರಲ್ಲಿ ಪ್ರತಿಯೋರ್ವರಿಗೂ ಒಂದೊಂದು ನವೀನ ಶರೀಅತ್ ಇರಲಿಲ್ಲ. ಅವರಲ್ಲಿ ಪ್ರತಿಯೊಬ್ಬರೂ ಒಂದೊಂದು ಹೊಸ ಧರ್ಮವನ್ನು ಸ್ಥಾಪಿಸಲು ಆಗತರಾದವರೂ ಆಗಿರಲಿಲ್ಲ. ಈ ವಿಚಾರವು ಪವಿತ್ರ ಖುರ್‌ಆನಿನಿಂದ ಸ್ಪಷ್ಟವಾಗಿ ಮನದಟ್ಟಾಗುವಂಥದ್ದಾಗಿದೆ.

ಅದೇ ರೀತಿಯಲ್ಲಿ ಲೋಕಾಂತ್ಯದ ವರೆಗೂ ಯಾವ ಮಾರ್ಪಾಟಿಗೂ ತಿದ್ದುಪಡಿಗೂ ಗುರಿಯಾಗಬೇಕಾದ ಆವಶ್ಯಕತೆಯಿಲ್ಲದಂತಹ ಸರ್ವ ಸಂಪೂರ್ಣವೂ ಸುರಕ್ಷಿತವೂ ಆದ ಫುರ್‌ಖಾನ್ ಎಂಬ ಶರೀಅತ್ ಗ್ರಂಥವು ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ (ಸ)ರವರಿಂದ ಸ್ಥಾಪಿತವಾಗಿರುವ ಕಾರಣ ಇನ್ನು ಲೋಕವಸಾನದ ವರೆಗೂ ಹೊಸ ಒಂದು ಧರ್ಮವನ್ನು ಸ್ಥಾಪಿಸಿಕೊಂಡು, ನವೀನ ಧರ್ಮಶಾಸ್ತ್ರವನ್ನು ನೀಡುತ್ತಾ ಒಬ್ಬ ಪ್ರವಾದಿಯ ಅವತಾರವುಂಟಾಗಲಾರದು. ಆದರೆ, ಪವಿತ್ರ ಇಸ್ಲಾಂ ಧರ್ಮದಿಂದಲೇ ಜನರು ವಿಮುಖರಾಗುವಾಗ ಅದೇ ಧರ್ಮಶಾಸ್ತ್ರದೆಡೆ ಜನರನ್ನು ಆಹ್ವಾನಿಸಲಿಕ್ಕೂ ಅದರ ಸಂಸ್ಥಾಪ

# ಜಿಹಾದ್ ಎಂದರೆ.....

'ಜಿಹಾದ್' ಎಂದರೆ ಮುಸ್ಲಿಮೇತರರನ್ನು ಮುಸ್ಲಿಮರನ್ನಾಗಿ ಮಾಡಲಿಕ್ಕಿರುವ ಧರ್ಮಯುದ್ಧ ಎಂದು ಜನಸಾಮಾನ್ಯರು ತಿಳಿದು ಕೊಂಡಿದ್ದಾರೆ. ಆದರೆ ಈ ಪದಕ್ಕೆ ಅಂತಹ ಅರ್ಥವಿಲ್ಲ. ಅದಕ್ಕೆ ಪರಿಶ್ರಮ, ಪ್ರಯತ್ನ ಎಂದು ಅರ್ಥವಿದೆ. ಸಾಂಕೇತಿಕವಾಗಿ ಹೇಳುವಾಗ ಧರ್ಮಕಾರ್ಯದಲ್ಲೂ ದೈವಮಾರ್ಗದಲ್ಲೂ ಗೈಯುವ ಪರಿಶ್ರಮ ಎಂದಾಗಿದೆ ಅರ್ಥ. ಪವಿತ್ರ ಖುರ್‌ಆನಿನಲ್ಲಿ ಈ ಶಬ್ದ 'ಪರಿಶ್ರಮ' ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಆದರೂ ಮುಸ್ಲಿಮರೇ ಕಾಲಾಂತರದಲ್ಲಿ ಈ ಪದವನ್ನು ತಪ್ಪಾದ ಅರ್ಥದಲ್ಲಿ ಪ್ರಯೋಗಿಸುತ್ತಾ ಮುಸ್ಲಿಮೇತರರ ವಿರುದ್ಧವಾಗಿ ನಡೆಸಿದ ಹೋರಾಟಕ್ಕೆಲ್ಲಾ ಜಿಹಾದ್ ಎಂದು ಹೇಳಿದರೆಂಬ ಕಾರಣದಿಂದ ಅದರ ಪ್ರಯೋಗಕ್ಕೆ 'ಧರ್ಮಯುದ್ಧ' ಎಂದು ಅರ್ಥ ಕೊಡಲ್ಪಟ್ಟಿತು. ಮುಸ್ಲಿಮೇತರರು ಸಹ ಜಿಹಾದ್ ಎಂದರೆ ಮುಸ್ಲಿಮರ ಧರ್ಮಯುದ್ಧ ಎಂದು ಭಾವಿಸಿದರು. ತತ್ಫಲವಾಗಿ ಜಿಹಾದ್ ಎಂದರೆ "ಇಸ್ಲಾಮಿನಲ್ಲಿ ನಂಬಿಕೆಯಿಲ್ಲದವರ ಮೇಲೆ ಮುಸ್ಲಿಮರು ಮಾಡುವ ಧಾರ್ಮಿಕ ಯುದ್ಧ", "ಮತ ಪ್ರಚಾರಕ್ಕಾಗಿ ಇತರ ಮತದವರೊಡನೆ ಮುಸ್ಲಿಮರು ಮಾಡುವ ಯುದ್ಧ" ಎಂಬಿತ್ಯಾದಿಯಾಗಿ ಇತ್ತೀಚೆಗೆ ಪ್ರಕಾಶನಗೊಂಡ ಕೆಲವು ನಿಘಂಟುಗಳಲ್ಲಿ ಸಹ ಅರ್ಥಕೊಡಲಾಯಿತು.

ಈ ರೀತಿಯ ಜಿಹಾದ್ ಇಸ್ಲಾಮಿನ ಅಧ್ಯಾಪನೆಗಳಿಗೆ ಸರಿಹೊಂದುವುದಿಲ್ಲವಾದುದರಿಂದ ಸುಮಾರು ತೊಂಭತ್ತು ವರ್ಷಗಳ ಮೊದಲು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್ ಅವರು ಈ ತಪ್ಪು ಕಲ್ಪನೆಯನ್ನು ನಿವಾರಿಸಲೆತ್ನಿಸಿದರು. ಧರ್ಮವಿಶ್ವಾಸ ಕಾರ್ಯದಲ್ಲಿ ಬಲಪ್ರಯೋಗವು ಪ್ರೇರಕವಾಗಬಾರದೆಂದೂ ಸನ್ಮಾರ್ಗ ದುರ್ಮಾರ್ಗದಿಂದ ವ್ಯತ್ಯಸ್ತವೆಂಬಂತೆ ಸ್ಪಷ್ಟಪಡಿಸಲಾಗಿದೆಯೆಂದೂ ಪ್ರತಿಪಾದಿಸುತ್ತಾ ಪವಿತ್ರ ಖುರ್‌ಆನ್ ವಿಶ್ವಾಸ ಕಾರ್ಯದಲ್ಲಿ ಬಲಪ್ರಯೋಗದ ಆವಶ್ಯಕತೆಯನ್ನು ನಿರಾಕರಿಸುತ್ತದೆ. ಆದರೆ ಇಸ್ಲಾಮಿನ ಶತ್ರುಗಳು ಇಸ್ಲಾಂ ಧರ್ಮವನ್ನು ಸಾಯುಧ ಬಲದಿಂದ ನಾಶಪಡಿಸಲು ಹೊರಟಾಗ ಅವರಿಗೆದುರಾಗಿ ಆಯುಧ ಪ್ರಯೋಗಿಸಲು ಮುಸ್ಲಿಮರಿಗೆ ಅನುಮತಿ ನೀಡಲಾಯಿತು. ಅದೇ ಸಾಯುಧ ಜಿಹಾದ್. ಇಂದು ಇಸ್ಲಾಮಿಗೆದುರಾಗಿ ಆಯುಧದಿಂದಲ್ಲ, ವಿಚಾರವಾದ ಮತ್ತು ಎದುರ್ವಾದಗಳ ಹೋರಾಟ ನಡೆಯುತ್ತಿದೆ. ಆದ್ದರಿಂದ ಅದೇ ರೀತಿಯಲ್ಲಿ ವಿಚಾರಪ್ರದ ಪ್ರತಿಪಾದನೆಗಳ ಮೂಲಕ ಇಸ್ಲಾಂ ಧರ್ಮದ ಮಹತ್ವ ಮತ್ತು ಉನ್ನತಿಯನ್ನು ಬಹಿರಂಗ ಪಡಿಸುವುದಾಗಿದೆ ಈ ಕಾಲದ ಯಥಾರ್ಥ ಜಿಹಾದ್. ಇದನ್ನೇ ಹಝ್ರತ್ ಅಹ್ಮದ್ ಬೋಧಿಸಿದರು.

ಮುಸ್ಲಿಮೇತರರನ್ನು ಖಡ್ಗಬಲ ಪ್ರಯೋಗಿಸಿ ಇಸ್ಲಾಂ ಧರ್ಮಕ್ಕೆ ಪರಿವರ್ತಿಸುವುದು ಮತ್ತು ಮುಸ್ಲಿಮೇತರ ರಾಷ್ಟ್ರಗಳೊಡನೆ ಯುದ್ಧಮಾಡಿ ಅವುಗಳನ್ನೆಲ್ಲ ಸದೆಬಡಿಯುವುದೇ ಜಿಹಾದ್ ಹಾಗೂ ಇದು ಮುಸ್ಲಿಮರಿಗೆ ಕಡ್ಡಾಯಗೊಳಿಸಲಾಗಿದೆಯೆಂದು ನಂಬಿದ ಮುಸ್ಲಿಂ ಮತ

---

( 21ನೇ ಪುಟದಿಂದ )

ಕರ ಕೀರ್ತಿಯನ್ನು ಲೋಕದಲ್ಲೆಲ್ಲಾ ಹಬ್ಬಿಸಲಿಕ್ಕೂ ಒಬ್ಬ ಶಿಷ್ಯ ಪ್ರವಾದಿಯು ನಿಯುಕ್ತರಾಗುವರೆಂದಾದರೆ ಅದರಿಂದ ಪವಿತ್ರ ಇಸ್ಲಾಂ ಧರ್ಮಕ್ಕೆ ಏನೂ ಹಾನಿಯುಂಟಾಗುವುದಿಲ್ಲ. ಬದಲಾಗಿ ಒಳಿತೇ ಉಂಟಾಗುವುದು. ಮುಹಮ್ಮದ್ ಪೈಗಂಬರರ ನಂತರ ಪ್ರವಾದಿಯಾಗಿ ನಿಯೋಗಿಸಲ್ಪಟ್ಟಿರುವೆನೆಂದು ವಾದಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರು ಒಬ್ಬ ಧರ್ಮಶಾಸ್ತ್ರ ಪ್ರಬೋಧಕರಾದ ಪ್ರವಾದಿಯಲ್ಲ. ಅವರು ಇಸ್ಲಾಂ ಧರ್ಮವನ್ನು ರದ್ದುಪಡಿಸಿಕೊಂಡು ತನ್ನೊಂದಿಗೆ ನವೀನವಾದೊಂದು ಶರೀಅತ್ ಗ್ರಂಥವನ್ನು ತಂದಿಲ್ಲ. ಪವಿತ್ರ ಇಸ್ಲಾಂ ಧರ್ಮವನ್ನೇ ಜನರಿಗೆ ಪ್ರಬೋಧಿಸಲು ನಿಯೋಗಿಸಲ್ಪಟ್ಟಿದ್ದೇನೆಂಬುದು ಅವರ ವಾದವಾಗಿತ್ತು. ಆನುದರಿಂದ ಆರೀತಿಯ ಒಬ್ಬ ಪ್ರವಾದಿಯಲ್ಲಿ ವಿಶ್ವಾಸ ಹೊಂದಿರುವ ಕಾರಣ ಅಹ್ಮದೀಯರ ಬಳಿ ಇಸ್ಲಾಂ ಧರ್ಮವು ಕಾಲಹರಣವಾಯಿತೆಂದೂ ಅವರು ನವೀನವಾದೊಂದು ಧರ್ಮಶಾಸ್ತ್ರವನ್ನು ಅನುಸರಿಸುವವರೆಂದೂ ಹೇಳುವುದು ಅರ್ಥಶೂನ್ಯವಾಗಿದೆ.

["ಅನ ಆಖಿರುಲ್ ಅಂಬಿಯಾ" ಮತ್ತು "ಲಾ ನಬಿಯ್ಯುಬಅದೀ" ಎಂಬ ಹದೀಸ್‌ಗಳ ಕುರಿತು ಮುಂದಿನ ಸಂಚಿಕೆಯಲ್ಲಿ].

ಪಂಡಿತರು, ಹಝ್ರತ್ ಅಹ್ಮದ್‌ರವರು ಮುಸ್ಲಿಮರ ಸಮರಶೌರ್ಯವನ್ನು ಶಿಥಿಲಗೊಳಿಸದರೆಂದು ಆಪಾದಿಸಿದರು. ಹಝ್ರತ್ ಅಹ್ಮದ್‌ರವರ ವಿರುದ್ಧ ಅವರು "ಕುಫ್ರ್ ಫತ್ವಾ" (ಮತಭ್ರಷ್ಟ ವಿಧಿ) ಹೊರಡಿಸಿ ಅವರಿಗೆ ದುರಾಗಿ ಅವಿಶ್ರಾಂತ ಶ್ರಮಿಸಿದರು.

ಆದರೆ ಇಂದು ದೇವಕೃಪೆಯಿಂದ ಕಾಲ ಬದಲಾಗಿದೆ. ದೇವನಿಯುಕ್ತರಾದ ಅಹ್ಮದಿಯಾ ಜಮಾಅತಿನ ಸ್ಥಾಪಕರ ಅಭಿಪ್ರಾಯಗಳನ್ನು ಇಂದಿನ ಕೆಲವು ಮುಸ್ಲಿಂ ಮತಪಂಡಿತರೂ ಧುರೀಣರೂ ಅನುಮೋದಿಸುತ್ತಿದ್ದಾರೆ. ಇದು ಅಹ್ಮದಿಯಾ ಜಮಾಅತಿನ ಸ್ಥಾಪಕರ ಸತ್ಯತೆಯನ್ನೂ ವಿಜಯವನ್ನೂ ಸಾಕ್ಷ್ಯಪಡಿಸುತ್ತದೆ. ಕೆಲವು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ:

1. ಇತ್ತೀಚೆಗೆ ಸೌದಿ ಅರೇಬಿಯಾದ ತಾಯಿಫ್‌ನಲ್ಲಿ ನಡೆದ ಇಸ್ಲಾಮಿ ರಾಷ್ಟ್ರಗಳ ಶೃಂಗ ಸಮ್ಮೇಳನದಲ್ಲಿ ಮುಸ್ಲಿಂ ನಾಯಕರು ಐಕ್ಯಮತದಿಂದ ಸ್ವೀಕರಿಸಿದ ಠರಾವಿನ ಒಂದು ಭಾಗ ಈ ರೀತಿಯಾಗಿದೆ: "ತಾಯಿಫ್, ಜನವರಿ 29-ಪ್ರಪಂಚದ 80ಕೋಟಿ ಮುಸ್ಲಿಮರ ನಾಯಕರು ಜೆರುಸಲೇಮನ್ನು ಇಸ್ರಾಯೇಲದ ಹಿಡಿತದಿಂದ ಮುಕ್ತಿಗೊಳಿಸಲು ಮತ್ತು ಪೆಲೆಸ್ತೀನದ ಮೇಲೆ ನಡೆದ ಅನ್ಯಾಯಗಳನ್ನು ನಿವಾರಿಸಲು ಜಿಹಾದಿಗೆ ಕರೆಕೊಟ್ಟರು...... ಸಮ್ಮೇಳನದ ನಾಯಕರು ವಿವರಣೆ ನೀಡುತ್ತಾ 'ಜಿಹಾದ್' ಕರೆಯ ಉದ್ದೇಶ ಸೈನಿಕ ಕಾರ್ಯಾಚರಣೆಗಳ ಬದಲು ಆರ್ಥಿಕ ಮತ್ತು ರಾಜಕೀಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದೆಂದು ಹೇಳಿದರು." ("ಸಿಯಾಸತ್" ದೈನಿಕ, ಹೈದರಾಬಾದ್, ದಿನಾಂಕ 30-1-1981)

2. "ರಾಜಕುಮಾರ ಫಹದ್ ಅವರು, ಲೋಕವು ತನ್ನ 'ಜಿಹಾದ್ ಕರೆ'ಯನ್ನು ತಪ್ಪಾಗಿ ಗ್ರಹಿಸಿ ಅದನ್ನು ಯುದ್ಧ ಘೋಷಣೆಯೆಂದು ತಿಳಿದಿರುವುದಾಗಿ ಭಾವಿಸುತ್ತಾರೆ. ಜಿಹಾದ್ ಎಂಬುದಕ್ಕೆ ಫಹದ್ ಅವರ ಯಥಾರ್ಥ ಉದ್ದೇಶ, ಮುಸ್ಲಿಂ ರಾಷ್ಟ್ರಗಳು ಒಟ್ಟಿಗೆ ಸೇರಿ ರಾಜಕೀಯ, ಆರ್ಥಿಕ ಮತ್ತು ಪ್ರಚಾರ ಯುದ್ಧದಲ್ಲಿ ತತ್ಪರರಾಗುವುದಾಗಿದೆ." ("ದಿ ಟೈಮ್ಸ್ ಓಫ್ ಇಂಡಿಯಾ". ಬೊಂಬಾಯಿ, 21-1-'81).

3. "ತಾಯಿಫ್, ಜನವರಿ 27–ಮೊರೊಕ್ಕೋದ ರಾಜ ಹಸನ್ ದ್ವಿತೀಯ ಮತ್ತು ಪೆಲೆಸ್ತೀನದ ನಾಯಕ ಯಾಸಿರ್ ಅರಫಾತ್ ಇಸ್ಲಾಂ ಶೃಂಗ ಸಮ್ಮೇಳನದಲ್ಲಿ ಇಸ್ರಾಯೇಲ್ ಮತ್ತು ಅದರ ಸಹಾಯಕರ ವಿರುದ್ಧ ಜಿಹಾದ್ ಮಾಡಿ ಜೆರುಸಲೇಮಿನಲ್ಲಿ ಅರಬ್ ಪ್ರಭುತ್ವವನ್ನು ಮರಳಿ ಪಡೆಯಲು ಕರೆಯಿತ್ತರು.

ಆದರೆ ಸಂಪ್ರದಾಯ ನಿಷ್ಠನಾದ ಉತ್ತರ ಆಫ್ರಿಕದ ರಾಜ ಪವಿತ್ರ ಯುದ್ಧವಾದ ಜಿಹಾದನ್ನು 'ನೈತಿಕ ಮತ್ತು ಆರ್ಥಿಕ ಹೋರಾಟ' ಎಂದು ವಿವರಿಸುತ್ತಾ ಅದು ಜೆರುಸಲೇಮನ್ನು ತನ್ನ ಶಾಶ್ವತ ರಾಜಧಾನಿಯೆಂದು ಕರೆಯುತ್ತಿರುವ ಯಹೂದಿ ರಾಷ್ಟ್ರವಾದ ಇಸ್ರಾಯೇಲಿನ ವಿರುದ್ಧ ಸೈನಿಕ ಕಾರ್ಯಾಚರಣೆಯಲ್ಲವೆಂದು ಬಹಳ ಜಾಗರೂಕತೆಯಿಂದ ವಿವರಿಸಿದರು." (ದಿ ಟೈಮ್ಸ್ ಓಫ್ ಇಂಡಿಯಾ", 28-1-'81).

4. "ಜಕರ್ತಾ, ಜನವರಿ 31—ಮುಸ್ಲಿಂ ಶೃಂಗ ಸಮ್ಮೇಳನದ ಮಕ್ಕಾ ಘೋಷಣೆಯಲ್ಲಿ 'ಜಿಹಾದ್' ಎಂಬ ಪ್ರಯೋಗದ ಉದ್ದೇಶ ಯುದ್ಧಕ್ಕೆ ಹೋಗುವುದೆಂದು ತಿಳಿಯಬಾರದಾಗಿ ಇಂಡೋನೇಶ್ಯಾದ ವಿದೇಶ ಕಾರ್ಯ ಸಚಿವ ಮುಖ್ತಾರ್ ಕುಸುಮತ್ಮಡ್ಜಾ ಕಳೆದ ರಾತ್ರಿ ಹೇಳಿದರು.

ಸಮ್ಮೇಳನದಿಂದ ಹಿಂತಿರುಗಿದ ನಂತರ ಪತ್ರಿಕಾ ಹೇಳಿಕೆಯಲ್ಲಿ ಅವರು ಜೆರುಸಲೇಮನ್ನೂ ಪೆಲೆಸ್ತೀನನ್ನೂ ಸ್ವತಂತ್ರಗೊಳಿಸಲು ಇತ್ತ 'ಜಿಹಾದ್' ಕರೆಯನ್ನು ಎಲ್ಲಾ ಸದಸ್ಯ ರಾಷ್ಟ್ರಗಳು ತಮ್ಮ ಧನಸಂಪತ್ತನ್ನೂ ಶಕ್ತಿ ಸಂಪನ್ಮೂಲಗಳನ್ನೂ ಒಂದುಗೂಡಿಸಿ ನಡೆಸುವ ಹೋರಾಟವೆಂದು ತಿಳಿದುಕೊಳ್ಳುವರೆಂದು ಹೇಳಿದರು" ("ದಿ ಟೈಮ್ಸ್ ಓಫ್ ಇಂಡಿಯಾ", 1-2-'81).

—ಅ. ರಷೀ. ಅ.

# ಅಹ್ಮದಿಯಾ ವಾರ್ತೆಗಳು

## ಖಾದಿಯಾನದಲ್ಲಿ 90ನೇ ವಾರ್ಷಿಕ ಮಹಾ ಸಮ್ಮೇಳನ

ಭಾರತದ ಅಹ್ಮದಿಯಾ ಕೇಂದ್ರವಾದ ಖಾದಿಯಾನ್ (ಪಂಜಾಬ್)ನಲ್ಲಿ ಡಿಸೆಂಬರ್ 18, 19 ಮತ್ತು 20ರಂದು 90ನೇ ಅಹ್ಮದಿಯಾ ವಾರ್ಷಿಕ ಮಹಾ ಸಮ್ಮೇಳನ ಸಮಾವೇಶಗೊಂಡಿತು.

ದೇಶದ ವಿವಿದೆಡೆಗಳಿಂದ ಸಾವಿರ ಗಟ್ಟಲೆಯಲ್ಲಿ ಹಾಗೂ ಅಮೇರಿಕಾ, ಇಂಗ್ಲೆಂಡ್, ನೈಜೀರಿಯಾ, ಘಾನಾ, ಜಪಾನ್, ಇಂಡೋನೇಶ್ಯಾ ಎಂಬೀ ಹೊರ ದೇಶಗಳಿಂದಲೂ ಅನೇಕ ಪ್ರತಿನಿಧಿಗಳು ಭಾಗವಹಿಸಿದರು.

ಧರ್ಮ ಸಾಮರಸ್ಯ, ರಾಷ್ಟ್ರೀಯ ಭಾವೈಕ್ಯತೆ, ಲೋಕ ಶಾಂತಿ, ಇಸ್ಲಾಮೀಕ ಅಧ್ಯಾಪನಗಳು, ಅಹ್ಮದಿಯಾ ಸಿದ್ಧಾಂತಗಳು ಎಂಬೀ ವಿಷಯಗಳಲ್ಲಿ ಅಹ್ಮದಿಯಾ ವಿದ್ವಾಂಸರಿಂದ ಭಾಷಣಗಳು ನಡೆದುವು.

ಪ್ರತಿ ವರ್ಷ ಅವ್ಯಾಹತವಾಗಿ ಜರಗುತ್ತಿರುವ ಈ ವಾರ್ಷಿಕ ಸಮ್ಮೇಳನವನ್ನು ಪ್ರಥಮತಃ 90 ವರ್ಷಗಳ ಮೊದಲು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಮಿರ್ಝಾ ಗುಲಾಂ ಅಹ್ಮದ್‌ರವರು ಆರಂಭಿಸಿದ್ದರು.

## ಕೇರಳ ರಾಜ್ಯ ವಾರ್ಷಿಕ ಸಮ್ಮೇಳನ

'82 ಜನವರಿ 9 ಮತ್ತು 10ರಂದು ಕೇರಳ ರಾಜ್ಯ ಅಹ್ಮದಿಯಾ ಮುಸ್ಲಿಂ ವಾರ್ಷಿಕ ಸಮ್ಮೇಳನವು ಕಲ್ಲಿಕೋಟೆಯ ಇಮಾಂ ಮಹ್‌ದೀ ನಗರದಲ್ಲಿ (ಮಾನಾಂಜಿರ ಮೈದಾನ) ಜರಗಲಿದೆ.

ಭಾರತದ ಅಹ್ಮದಿಯಾ ಪ್ರಚರಣಾ ವಿಭಾಗದ ಮುಖ್ಯಸ್ಥ ಅಲ್‌ಹಾಜ್ ಮೌಲಾನಾ ಬಶೀರ್ ಅಹ್ಮದ್ ದೆಹಲವಿ ಸಮ್ಮೇಳನವನ್ನು ಉದ್ಘಾಟಿಸುವರು. ನವ ಮುಸ್ಲಿಮರುಗಳಾದ ಜರ್ಮನಿಯ ಹಿದಾಯತುಲ್ಲಾ ಹಬ್ಶ್ ಮತ್ತು ಡೆನ್ಮಾರ್ಕಿನ ನೂಹ್ ಹಾನ್‌ಸನ್ ಎಂಬೀರ್ವರು ಸಹ ಸಮ್ಮೇಳನದಲ್ಲಿ ಭಾಷಣ ಮಾಡಲಿರುವರು.

## ಲಂಡನಿನಲ್ಲಿ ವಾರ್ಷಿಕ ಸಮ್ಮೇಳನ

ಯು. ಕೆ. ಅಹ್ಮದಿಯಾ ಜಮಾಅತ್ ವಾರ್ಷಿಕ ಸಮ್ಮೇಳನ ಸಪ್ಟೆಂಬರ್ ತಾ. 12 ಮತ್ತು 13ರಂದು ಲಂಡನಿನ ಮಹ್‌ಮೂದ್ ಹಾಲ್‌ನಲ್ಲಿ ಸಮಾವೇಶಗೊಂಡಿತು. ಇಂಗ್ಲೆಂಡಿನ ನಾನಾ ಕಡೆಗಳಿಂದ ಅಹ್ಮದಿಯರು ಬಂದು ಭಾಗವಹಿಸಿದರು. ಅನೇಕ ಅಹ್ಮದಿಯೇತರರೂ ಆಂಗ್ಲರೂ ಸಮ್ಮೇಳನದಲ್ಲಿ ಪಾಲುಗೊಂಡರು.

## ಇಂಗ್ಲೆಂಡ್ ಅಹ್ಮದಿ ಯುವಜನ ಸಭೆ

ಇಂಗ್ಲೆಂಡಿನ ಅಹ್ಮದಿ ಯುವಜನರ 8ನೇ ವಾರ್ಷಿಕ ಸಭೆ ಆಗಸ್ಟ್ 15 ಮತ್ತು 16ರಂದು ಹೌನ್‌ಸ್ಲೋದಲ್ಲಿ ನಡೆಯಿತು. ಅಹ್ಮದಿ ಗಣ್ಯ ವ್ಯಕ್ತಿಗಳಾದ ಸರ್ ಮುಹಮ್ಮದ್ ಝಫರುಲ್ಲಾ ಖಾನ್, ಮಿರ್ಝಾ ಫರೀದ್ ಅಹ್ಮದ್ (ಜಾಗತಿಕ ಖುದ್ದಾಮುಲ್ ಅಹ್ಮದಿಯಾದ ಉಪಾಧ್ಯಕ್ಷ) ಮಾತ್ರವಲ್ಲ, ಹೌನ್‌ಸ್ಲೋ ಮೇಯರ್ ಮತ್ತು ಶ್ರೀಮತಿ ಮೇಯರ್ ಸಹ ಅತಿಥಿಗಳಾಗಿ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ನೈಜೀರಿಯಾದಲ್ಲಿ 90 ಕುಟುಂಬಗಳು ಅಹ್ಮದಿಯತಿಗೆ

ನೈಜೀರಿಯಾದ ಅಜಿಲೇಟ್ ಎಂಬ ಪಟ್ಟಣದಲ್ಲಿ ಅಲ್ಲಿನ ಓರ್ವ ಚೀಫ್ (ಮುಖಂಡ) ಸಹಿತ 90 ಕುಟುಂಬಗಳು ಅಹ್ಮದಿಯಾ ಜಮಾಅತಿಗೆ ಸೇರಿರುವರು. ಚೀಫ್ ಕಟ್ಟಿಸುತ್ತಿದ್ದ, ಹೆಚ್ಚಿನಂಶ ನಿರ್ಮಾಣ ಪೂರ್ಣಗೊಳಿಸಲ್ಪಟ್ಟ ಒಂದು ಮಸೀದಿಯನ್ನು ಅವರು ಜಮಾಅತಿನ ಸ್ವಾಧೀನಕ್ಕೆ ನೀಡಿರುವರು.

## ವಾಷಿಂಗ್ಟನಿನಲ್ಲಿ ವಾರ್ಷಿಕ ಸಮ್ಮೇಳನ

ಕಳೆದ ಸೆಪ್ಟೆಂಬರ್ ತಾ. 4, 5, ಮತ್ತು 6ರಂದು ಅಮೇರಿಕದ ಅಹ್ಮದಿಯಾ ಘಟಕಗಳ 33ನೇ ವಾರ್ಷಿಕ ಸಮ್ಮೇಳನ ವಾಷಿಂಗ್ಟನಿನಲ್ಲಿ ಜರಗಿತು. ಜಾಗತಿಕ ಬೇಂಕಿನ ಡೈರೆಕ್ಟರ್ ಮಿರ್ಝಾ ಮುಝಫರ್ ಅಹ್ಮದ್ ಸಾಹೇಬರು ಸಮ್ಮೇಳನವನ್ನು ಉದ್ಘಾಟನೆ ಮಾಡಿದರು.

## ಖಾದಿಯಾನಿನಲ್ಲಿ ಈದ್ ಪ್ರಾರ್ಥನೆಗೆ 900 ಅಹ್ಮದಿಯೇತರ ಮುಸ್ಲಿಮರು

ಕಳೆದ ಅಕ್ಟೋಬರ್ 9ರಂದು ಸುಮಾರು 900 ಅಹ್ಮದಿಯೇತರ ಮುಸ್ಲಿಮರು ಭಾರತದ ಅಹ್ಮದಿಯಾ ಕೇಂದ್ರವಾದ ಖಾದಿಯಾನಕ್ಕೆ ಬಂದು ಈದುಲ್ ಅಝ್‌ಹಾ ಪ್ರಾರ್ಥನೆಯಲ್ಲಿ ಭಾಗವಹಿಸಿದರು. ಇವರೆಲ್ಲಾ ಉತ್ತರ ಪ್ರದೇಶ, ಬಿಹಾರ ಮೊದಲಾದ ಸ್ಥಳಗಳಿಂದ ನಾನಾ ರೀತಿಯ ಉದ್ಯೋಗಾರ್ಥ ಪಂಜಾಬಿನಲ್ಲಿ ಬಂದು ವಾಸಿಸುವವರಾಗಿದ್ದಾರೆ. ಈದ್ ಪ್ರಾರ್ಥನೆಯ ಬಳಿಕ ಅವರಿಗೆ ಜಮಾಅತಿನ ವತಿಯಿಂದ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಪ್ರಾರ್ಥನೆಯಲ್ಲಿ ಪಾಲುಗೊಂಡವರಲ್ಲಿ ಪೋಲಿಸ್ ಸುಪರಿಂಟೆಂಡೆಂಟ್ ಜನಾಬ್ ಮುಹಮ್ಮದ್ ಇಸ್‌ಹಾಕ್ ಆಲಂ ಮತ್ತು ಅವರ ಕುಟುಂಬ ಸದಸ್ಯರೂ ಇದ್ದರು.

## ಮಿಲಿಟರಿ ಅಧಿಕಾರಿಗಳ ಖಾದಿಯಾನ್ ಸಂದರ್ಶನ

ಕಳೆದ ಅಕ್ಟೋಬರ್ 15ರಂದು ಚಂಡೀಗಡದಿಂದ ಬ್ರಿಗೇಡಿಯರ್ ಎಂ. ಆರ್. ಸಿಕ್ಕ ಅವರು ಕರ್ನಲ್ ನಾಸ, ಇಬ್ಬರು ಮೇಜರುಗಳು ಹಾಗೂ ಕೆಲವು ಮಿಲಿಟರಿ ಅಧಿಕಾರಿಗಳೊಂದಿಗೆ ಖಾದಿಯಾನ್ ಸಂದರ್ಶಿಸಿದರು. ಬ್ರಿಗೇಡಿಯರ್‌ರವರಿಗೆ ಪವಿತ್ರ ಖುರ್‌ಆನ್ ಮತ್ತು ಇತರ ಕೆಲವು ಇಸ್ಲಾಮಿಕ ಸಾಹಿತ್ಯಗಳನ್ನು ಪಾರಿತೋಷಕವಾಗಿ ನೀಡಲಾಯಿತು. ಅವರು ಅದನ್ನು ಗೌರವದಿಂದ ಸ್ವೀಕರಿಸಿದರು. ಅಧಿಕಾರಿಗಳಲ್ಲಿ ಕೆಲವರು ಅಹ್ಮದಿಯಾ ಪ್ರಚಾರ ಕೇಂದ್ರದ ಪ್ರಕಾಶನಾಲಯಕ್ಕೆ ಭೇಟಿಯಿತ್ತು ಪವಿತ್ರ ಖುರ್‌ಆನಿನ ಭಾಷಾಂತರಗಳನ್ನೂ ಇತರ ಇಸ್ಲಾಮಿಕ ಸಾಹಿತ್ಯಗಳನ್ನೂ ಖರೀದಿಸಿದರು.

## ಅಹ್ಮದಿಯಾ ವಿದ್ಯಾರ್ಥಿನಿಗೆ ಸ್ವರ್ಣ ಪದಕ

ಪಾಕಿಸ್ತಾನದ ಪಂಜಾಬ್ ವಿಶ್ವ ವಿದ್ಯಾಲಯದ ಎಂ. ಬಿ. ಬಿ. ಎಸ್. ಕೊನೆಯ ಪರೀಕ್ಷೆಯಲ್ಲಿ ಹಮಾಮತುಲ್ ಬುಶ್ರಾ ಎಂಬ ಅಹ್ಮದಿಯಾ ವಿದ್ಯಾರ್ಥಿನಿ ಮಹಿಳೆಯರ ಪೈಕಿ ಯುನಿವರ್ಸಿಟಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದರು. ಈ ವಿದ್ಯಾರ್ಥಿನಿಗೆ ಸ್ವರ್ಣ ಪದಕವನ್ನು ನೀಡಲಾಗುವುದೆಂದು ಪಾಕಿಸ್ತಾನದ ಅಧ್ಯಕ್ಷ ಜನರಲ್ ಝಿಯಾವುಲ್ ಹಕ್ ಅವರ ವಿಶೇಷ ಪ್ರಕಟನೆಯೊಂದು ತಿಳಿಸಿದೆ.

## ಅಲೆಪ್ಪಿಯಲ್ಲಿ ಮಸೀದಿ

ಅಲೆಪ್ಪಿಯಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಹೊಸತಾಗಿ ನಿರ್ಮಿಸಿದ ಮನೋಹರವಾದ ಮಸೀದಿಯನ್ನು ನವೆಂಬರ್ 6ರಂದು ಶುಕ್ರವಾರ, ವಾಗ್ದತ್ತ ಮಹ್‌ದಿ ಮಸೀಹರ ಪೌತ್ರ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟಿಸಿದರು. ಖುತ್ಬಾ ಭಾಷಣದ ಮೂಲಕ ಅವರು ಉದ್ಘಾಟನೆಯನ್ನು ಮಾಡಿದರು.

ಈ ಸಮಾರಂಭದಲ್ಲಿ ಭಾಗವಹಿಸುವರೆ ಕೇರಳದ ವಿವಿಧ ಕಡೆಗಳಿಂದ ಧಾರಾಳ ಅಹ್ಮದಿಯರು ಆಗಮಿಸಿದ್ದರು. ಸಮಾರಂಭವನ್ನು ಭಂಗಗೊಳಿಸಲು ಅಹ್ಮದಿಯಾ ವಿರೋಧಿಗಳು ಪ್ರಯತ್ನಿಸಿದರೂ ಅಲ್ಲಾಹುವಿನ ಅನುಗ್ರಹದಿಂದ ಅವರು ವಿಫಲರಾದರು.

## ಕಲ್ಲಿಕೋಟೆಯಲ್ಲಿ ಮಸೀದಿಗೆ ಶಿಲಾನ್ಯಾಸ

ಕಲ್ಲಿಕೋಟೆ ನಗರದ ಹೃದಯಭಾಗವಾದ ಮುದಲಕುಳದ ಸಮೀಪ ಅರ್ಧ ಎಕ್ರೆಗಿಂತ ಮಿಕ್ಕಿದ ಸ್ಥಳದಲ್ಲಿ ಅಹ್ಮದಿಯಾ ಮಸೀದಿಗೂ ಪ್ರಚಾರ ಕೇಂದ್ರಕ್ಕೂ ನವೆಂಬರ್ 8 ರಂದು ಸಾಯಂಕಾಲ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಶಂಕುಸ್ಥಾಪನೆ ಮಾಡಿದರು. ಆ ಬಳಿಕ ಅವರು ಸಾರವತ್ತಾದ ಒಂದು ಭಾಷಣ ಮಾಡಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಕೇರಳ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬರು ವಹಿಸಿದರು.

## ಶ್ರೀನಗರದಲ್ಲಿ 8ನೇ ವಾರ್ಷಿಕ ಸಮ್ಮೇಳನ

ಕಾಶ್ಮೀರದಲ್ಲಿರುವ ಅಹ್ಮದಿಯಾ ಜಮಾಅತ್ ಘಟಕಗಳ 8ನೇ ವಾರ್ಷಿಕ ಸಮ್ಮೇಳನ ಸಪ್ಟೆಂಬರ್ 4, 5 ಮತ್ತು 6ರಂದು ಶ್ರೀನಗರದಲ್ಲಿ ಸಮಾವೇಶಗೊಂಡಿತು.

ಸಮ್ಮೇಳನದ ಅಂಗವಾಗಿ "ಧರ್ಮ ಮತ್ತು ಮಾನವತ್ವ" ಎಂಬ ವಿಚಾರಗೋಷ್ಠಿಯನ್ನು ಏರ್ಪಡಿಸಲಾಯಿತು. ಹಿಂದೂ ಮತ್ತು ಕ್ರೈಸ್ತ ಧರ್ಮಗಳ ಪ್ರತಿನಿಧಿಗಳು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದರು. ಸಿಖ್ ಧರ್ಮದ ಕುರಿತು ಮೌಲವಿ ಹಮೀದುದ್ದೀನ್ ಶಮ್ಸ್ ಅವರು ಸಿಖ್ ಧರ್ಮಗ್ರಂಥದಿಂದ ಕೆಲವು ಶ್ಲೋಕಗಳನ್ನು ಹೇಳಿದರು.

## ಯುಗಾಂಡದಿಂದ 'ವಾಯ್ಸ್ ಓಫ್ ಇಸ್ಲಾಂ' ಪತ್ರಿಕೆ

ಜಮಾಅತ್ ಅಹ್ಮದಿಯಾ ಯುಗಾಂಡದ ವತಿಯಿಂದ "ವಾಯ್ಸ್ ಓಫ್ ಇಸ್ಲಾಂ" ಎಂಬ ಇಂಗ್ಲಿಷ್ ಪತ್ರಿಕೆ ಜುಲಾಯಿ ತಿಂಗಳಿನಿಂದ ಪ್ರಕಟಗೊಳ್ಳಲು ಪ್ರಾರಂಭಿಸಿದೆ. ಇಸ್ಲಾಂ ಧರ್ಮದ ವಿರುದ್ಧವಾಗಿ ಹೇಳಲ್ಪಡುವ ಆಕ್ಷೇಪಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡುವ ಉದ್ದೇಶವನ್ನು ಈ ಪತ್ರಿಕೆ ಇಟ್ಟುಕೊಂಡಿದೆ.

## ಬೆಲ್ಜಿಯಂನಲ್ಲಿ ಪ್ರಚಾರ ಕೇಂದ್ರ

ಕಳೆದ ಆಗಸ್ಟ್ ತಿಂಗಳಲ್ಲಿ ಬೆಲ್ಜಿಯಮಿನಲ್ಲಿ ಒಂದು ಅಹ್ಮದಿಯಾ ಪ್ರಚಾರ ಕೇಂದ್ರವನ್ನು ಸ್ಥಾಪಿಸಲಾಗಿದೆ. ಜನಾಬ್ ಸಾಲಿಹ್ ಮುಹಮ್ಮದ್ ಖಾನ್ ಸಾಹೇಬರನ್ನು ಅಲ್ಲಿನ ಮಿಶನರಿಯಾಗಿ ನೇಮಕ ಮಾಡಲಾಗಿದೆ.

## ನೈಜೀರಿಯಾದಲ್ಲಿ ವಿದ್ಯಾಲಯಕ್ಕಾಗಿ 140 ಎಕ್ರೆ ಭೂಮಿ ಕೊಡುಗೆ

ನೈಜೀರಿಯಾದ ಪ್ಲೇಟೋಸ್ಟೇಟ್ ಪ್ರಾಂತ್ಯದ ಊಂಡಾ ಎಂಬ ಗ್ರಾಮದಲ್ಲಿ ಅಹ್ಮದಿಯಾ ವಿದ್ಯಾಲಯಕ್ಕಾಗಿ ನೈಜೀರಿಯಾ ಸರಕಾರ 140 ಎಕ್ರೆ ಭೂಮಿಯನ್ನು ನೀಡಿರುತ್ತದೆಂದು ತಿಳಿದುಬಂದಿದೆ.

## ಕಟಕ್‌ನಿಂದ "ಇಸ್ಲಾಂ" ತ್ರೈಮಾಸಿಕ

ಕಟಕ್ ಅಹ್ಮದಿಯಾ ಯುವಜನ ಸಂಘಟನೆಯ (ಖುದ್ದಾಮುಲ್ ಅಹ್ಮದಿಯಾ) ವತಿಯಿಂದ ಒರಿಯಾ ಭಾಷೆಯಲ್ಲಿ "ಇಸ್ಲಾಂ" ಎಂಬ ತ್ರೈಮಾಸಿಕ ಪತ್ರಿಕೆ ಒಕ್ಟೋಬರ್ ತಿಂಗಳಿನಿಂದ ಪ್ರಕಟಣೆ ಆರಂಭಿಸಿದೆ.

## ಉತ್ತರ ಪ್ರದೇಶದಲ್ಲಿ 15ನೇ ವಾರ್ಷಿಕ ಸಮ್ಮೇಳನ

ಉತ್ತರ ಪ್ರದೇಶ ಅಹ್ಮದಿಯಾ 15ನೇ ವಾರ್ಷಿಕ ಸಮ್ಮೇಳನವು ಅಕ್ಟೋಬರ್ 17 ಮತ್ತು 18ರಂದು ವಾರಣಾಸಿಯಲ್ಲಿ ಜರಗಿತು.

ಪ್ರಥಮ ದಿನ ಸರ್ವ ಮತಾಚಾರ್ಯರ ದಿನವನ್ನಾಚರಿಸಲಾಯಿತು. ಈ ಸಭೆಯನ್ನು ಬಂಗಾಳದ ಮಾಜಿ ಗವರ್ನರ್ ಟಿ. ಎನ್. ಸಿಂಗ್ ಉದ್ಘಾಟನೆ ಮಾಡಿದರು.

ದ್ವಿತೀಯ ದಿನದ ಸಭೆಯ ಅಧ್ಯಕ್ಷತೆಯನ್ನು ಮೌಲಾನ ಬಶೀರ್ ಅಹ್ಮದ್ ಸಾಹೇಬರು ವಹಿಸಿದರು.

## ಘಾನದಲ್ಲಿ ಹೊಸ ಪ್ರಚಾರ ಕೇಂದ್ರ

ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ವೆಚ್ಚದಲ್ಲಿ ನಿರ್ಮಿಸಲ್ಪಟ್ಟ ಘಾನದ ಹೊಸ ಅಹ್ಮದಿಯಾ ಪ್ರಚಾರ ಕೇಂದ್ರವೊಂದು ಉದ್ಘಾಟಿಸಲ್ಪಟ್ಟಿದೆಯೆಂದು ಅಕ್ಟೋಬರ್ 15ರ "ಅಲ್ ಫಝಲ್" ಪತ್ರಿಕೆ ವರದಿ ಮಾಡಿದೆ. 1980ರಲ್ಲಿ ಅಹ್ಮದಿಯಾ ಖಲೀಫರು ಪಶ್ಚಿಮ ಆಫ್ರಿಕದ ಸಂಚಾರದಲ್ಲಿದ್ದಾಗ ಈ ಕಟ್ಟಡಕ್ಕೆ ಅಡಿಗಲ್ಲು ಹಾಸಿದ್ದರು.

## ಅಖಿಲ ಭಾರತ ಯುವಜನ ಸಮ್ಮೇಳನ

ಅಖಿಲ ಭಾರತ ಅಹ್ಮದಿಯಾ ಯುವಜನರ (ಖುದ್ದಾಮುಲ್ ಅಹ್ಮದಿಯಾ) 4ನೇ ಹಾಗೂ ಅಹ್ಮದಿಯಾ ಬಾಲಕರ (ಅತ್‌ಫಾಲುಲ್ ಅಹ್ಮದಿಯಾ) 3ನೇ ವಾರ್ಷಿಕ ಸಮ್ಮೇಳನಗಳು ಅಕ್ಟೋಬರ್ 23, 24 ಮತ್ತು 25ರಂದು ಖಾದಿಯಾನದಲ್ಲಿ ಜರಗಿದುವು. ಭಾರತದಾದ್ಯಂತದಿಂದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡರು. ಹೊರದೇಶದಿಂದಲೂ ಅನೇಕ ಯುವಜನರೂ ಬಾಲಕರೂ ಸಮ್ಮೇಳನಕ್ಕೆ ಆಗಮಿಸಿದ್ದರು.

## ಮೊಗ್ರಾಲ್ ಯುವಜನ ಕಾರ್ಯಕ್ರಮ

ಮೊಗ್ರಾಲ್ ಜಮಾಅತಿನ ಯುವಜನ ಸಂಘಟನೆಯ (ಖುದ್ದಾಮುಲ್ ಅಹ್ಮದಿಯಾ) ವತಿಯಿಂದ ವಿವಿಧ ಕಾರ್ಯಕ್ರಮಗಳು ಜರಗಿದುವು.

ಖುರ್‌ಆನ್ ಪಠನ, ಈಜುವಿಕೆ, ಸೈಕಲ್ ಓಟ (ವೇಗ ಮತ್ತು ನಿಧಾನ) ಇತ್ಯಾದಿ ಸ್ಪರ್ಧೆಗಳಲ್ಲಿ ಎಂ. ಪಿ. ಇಬ್ರಾಹಿಂ, ಬಶೀರ್ ಅಹ್ಮದ್ ಸಿದ್ದೀಖ್, ನಾಸೀರ್ ಅಹಮ್ಮದ್ ಸಿದ್ದೀಖ್, ಮುಹಮ್ಮದ್ ಯೂಸುಫ್, ಬಶೀರ್ ಅಹ್ಮದ್ ಎಂ., ಮುಹಮ್ಮದ್ ರಫೀಕ್, ಸೈಯ್ಯದ್ ಅಶ್ರಫ್, ಅಬ್ದುಲ್ ಘನಿ, ರಶೀದ್ ಅಹ್ಮದ್ ಸಿದ್ದೀಖ್, ಮೊದಲಾದವರು ವಿಜಯಿಗಳಾದರು. ಖಾಯಿದ್ (ಎಂ.ಪಿ. ಇಬ್ರಾಹಿಂ) ಮತ್ತು ನಾಇಬ್ ಖಾಯಿದ್ (ಕೆ. ಕೆ. ಬದ್ರುದ್ದೀನ್) ಅವರ ಟೀಮುಗಳೊಳಗೆ ನಡೆದ ಕಬಡ್ಡಿ ಪಂದ್ಯಾಟದಲ್ಲಿ ನಾಇಬ್ ಖಾಯಿದ್‌ರವರ ಟೀಮು ಜಯಗಳಿಸಿತು.

ವಿಜೇತರಿಗೆ ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾ ವತಿಯಿಂದಲ್ಲದೆ ಜ। ಅಮೀರಲಿ ಸಾಹೇಬ್, ಜ। ಅಬ್ದುಲ್ ರಶೀದ್ ಸಾಹೇಬ್, ಜ। ಯು. ಇಬ್ರಾಹಿಂ ಕುಞ್ಞಿ ಸಾಹೇಬ್, ಜ। ಅಶ್ರಫಲಿ ಸಾಹೇಬ್ ಮತ್ತು ಸಯಿದಾ ಅಶ್ರಫ್ ಎಂಬವರ ವತಿಯಿಂದಲೂ ಬಹುಮಾನ ನೀಡಲಾಯಿತು.

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ತ್ವಜ್ಞಾನ

## ( 14 )

ಗ್ರಂಥಕರ್ತ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

### ದೈವವಾಣಿ ಎಂದರೇನು ?

ಇಲ್ಲಿ ದೈವವಾಣಿ (ಇಲ್‌ಹಾಂ) ಎಂಬುದರ ತಾತ್ಪರ್ಯವೇನೆಂದು ವಿಶದೀಕರಿಸಬೇಕಾಗಿದೆ. "ಇಲ್‌ಹಾಂ" ಎಂದರೆ ಚಿಂತಿಸುತ್ತಿರುವವನೊಬ್ಬನ ಹೃದಯದಲ್ಲಿ ನವ್ಯವಾಗಿ ಮೂಡಿಬರುವ ವಿಚಾರವಲ್ಲ. ಒಬ್ಬ ಕವಿ ಕಾವ್ಯ ರಚನೆಯಲ್ಲಿ ತೊಡಗಿ ಆಲೋಚನಾಮಗ್ನನಾಗಿರುವಾಗ ಹೊಸತಾದೊಂದು ವಿಚಾರ ಅವನ ಹೃದಯದಲ್ಲಿ ಮೂಡುವುದಾದರೆ ಅದನ್ನು ದೈವವಾಣಿ ಅಥವಾ ದಿವ್ಯಪ್ರಬೋಧನೆ ಎಂದು ಹೇಳಲಾಗದು. ಅದು ದೈವಿಕ ಪ್ರಕೃತಿ ನಿಯಮಾನುಸಾರ ಮನುಷ್ಯನ ಆಲೋಚನೆಯ ಫಲದಿಂದುಂಟಾಗುವುದಾಗಿದೆ. ಒಬ್ಬನು ಸದ್ವಿಚಾರ ಅಥವಾ ದುರ್ವಿಚಾರದಲ್ಲಿ ಮನಸ್ಸಿಟ್ಟು ಚಿಂತಿಸುವುದಾದರೆ ಅವನ ಆಲೋಚನೆಗೆ ಅನುಸಾರವಾದ ವಿಚಾರ ಮನಸ್ಸಿನಲ್ಲಿ ಉದ್ಭವಿಸುತ್ತದೆ. ಉದಾಹರಣೆಗೆ, ಸತ್ಯಸಂಧನೂ ಸಾತ್ವಿಕನೂ ಆದವನು ಸತ್ಯವನ್ನೂ ಧರ್ಮವನ್ನೂ ಸಹಾಯಿಸುವುದಕ್ಕಾಗಿಯೂ ದುಷ್ಟನಾದ ಇನ್ನೊಬ್ಬನು ಅಧರ್ಮವನ್ನು ಅನುಕೂಲಿಸುವುದಕ್ಕಾಗಿಯೂ ಸಜ್ಜನರನ್ನು ನಿಂದಿಸುವುದಕ್ಕಾಗಿಯೂ ಕಾವ್ಯ ರಚಿಸಲು ತೊಡಗುವುದಾದರೆ, ಇಬ್ಬರು ಸಹ ಅವರವರ ಸಾಮರ್ಥ್ಯಕ್ಕನುಗುಣವಾಗಿ ಒಂದೊಂದು ಕಾವ್ಯವನ್ನು ರಚಿಸಬಹುದು. ಅಸತ್ಯವನ್ನು ಅನುಕೂಲಿಸಿ ಸಜ್ಜನರನ್ನು ದ್ವೇಷಿಸುವ ಕವಿ ಕವನ ರಚನೆಯಲ್ಲಿ ನಿಪುಣನಾಗಿದ್ದರೆ ಅವನ ಕವಿತೆ ಆ ಇನ್ನೊಬ್ಬ ಕವಿಯ ರಚನೆಗಿಂತ ಮಿಗಿಲೆನಿಸಿವರೆ ಅದರಲ್ಲಿ ಆಶ್ಚರ್ಯಪಡಲಿಕ್ಕಿಲ್ಲ. ಒಟ್ಟಾರೆ, ಹೊಸತಾದೊಂದು ವಿಚಾರ ಹೃದಯದಲ್ಲಿ ಮೂಡಿಬರುವುದನ್ನು "ಇಲ್‌ಹಾಂ" (ದಿವ್ಯ ಪ್ರೇರಣೆ) ಎಂದು ಹೇಳುವುದಾದರೆ, ಸತ್ಯಕ್ಕೆ ವಿರುದ್ಧವಾಗಿ ಸದಾ ಬರೆಯುತ್ತಾ, ಕಟ್ಟುಕತೆ ರಚನೆ ಮತ್ತು ಮಿಥ್ಯಾರೋಪಗಳನ್ನು ಹೊರಿಸುವುದು ಕಸಬನ್ನಾಗಿ ಮಾಡಿರುವ ಸತ್ಯ ಮತ್ತು ಸಜ್ಜನರ ಶತ್ರುವಾಗಿರುವ ಒಬ್ಬ ದುಷ್ಟ ಕವಿಯನ್ನು "ಮುಲ್‌ಹಂ" ಅಥವಾ ದೇವನಿಂದ ಪ್ರೇರೇಪಿಸಲ್ಪಟ್ಟವನು ಎಂದು ಹೇಳಬೇಕಾದೀತು. ಕತೆ, ಕಾದಂಬರಿಗಳಲ್ಲಿ ಅದ್ಭುತಕರವಾದ, ಚಮತ್ಕಾರಮಯವಾದ ವರ್ಣನೆಗಳು ಇರುತ್ತವೆ. ಹೀಗೆ ವಿಷಯಗಳು ಮಿಥ್ಯವೆಂದಾದರೂ ತದ್ವಿಷಯದಲ್ಲಿ ಚಿಂತಿಸುತ್ತಿರುವವರ ಹೃದಯಗಳಲ್ಲಿ ನವ್ಯ ವಿಚಾರ ತರಂಗಗಳು ಏಳುವುದನ್ನು ಕಾಣಬಹುದು. ಈ ಬಗೆಯಲ್ಲಿ ಹೊಳೆಯುವ ವಿಚಾರವನ್ನು "ಇಲ್‌ಹಾಂ" (ದಿವ್ಯ ಬೋಧನೆ) ಎಂದು ಹೇಳಬಹುದೇ ? ಇಲ್‌ಹಾಂ ಎಂದರೆ ನವ್ಯವಾದೊಂದು ವಿಚಾರ ಹೃದಯದಲ್ಲಿ ಮೂಡುವುದರ ಹೆಸರೆಂದಾದರೆ ಒಬ್ಬ ಕಳ್ಳನನ್ನು ಸಹ "ಮುಲ್‌ಹಂ" (ದೇವನಿಂದ ಪ್ರೇರೇಪಿಸಲ್ಪಟ್ಟವನು) ಎಂದು ಹೇಳಬಹುದಲ್ಲವೇ? ಏಕೆಂದರೆ, ಚಿಂತಿಸುತ್ತಿರುವುದರ ಫಲವಾಗಿ ಕನ್ನ ಹಾಕುವ ಹೊಸ ಉಪಾಯಗಳೂ ಕೊಳ್ಳೆ ಹೊಡೆಯುವ ಮತ್ತು ಕೊಲೆ ಮಾಡುವ ಹೊಸ ದಾರಿಗಳೂ ಅವನ ಮನಸ್ಸಿಗೆ ಹೊಳೆಯುತ್ತವೆ. ಈ ರೀತಿಯ ಅಶುದ್ಧಕರವೂ ಅನೈತಿಕವೂ ಆದ ವಿಚಾರೋದಯಕ್ಕೆ "ಇಲ್‌ಹಾಂ" ಎಂದು ಎಂದಿಗೂ ಹೆಸರಿಸಲಾಗದು. ಸ್ವವಚನ ಮೂಲಕ ಹೃದಯಗಳಿಗೆ ಸಮಾಧಾನವನ್ನೂ ಶಾಂತಿಯನ್ನೂ ನೀಡಿ, ಅಪರಿಚಿತರಿಗೆ ಅಧ್ಯಾತ್ಮ ತಥ್ಯಗಳ ಕುರಿತು ಅರಿವು ನೀಡುವ ಸತ್ಯದೇವನನ್ನು ತಿಳಿಯದವರು ದಿವ್ಯಬೋಧನೆ (ಇಲ್‌ಹಾಂ) ಯ ಕುರಿತು ಇಂತಹ ತಪ್ಪು ಕಲ್ಪನೆಗೆ ಗುರಿಯಾಗಿದ್ದಾರೆ.

ಹಾಗಾದರೆ, ಇಲ್‌ಹಾಂ (ದೈವವಾಣಿ) ಎಂದರೇನು? ಅದು ಸಜೀವನೂ, ಸರ್ವಶಕ್ತನೂ ಆದ ದೇವನು ತನ್ನ ಆಯ್ದ ಭಕ್ತನೊಡನಾಗಲಿ, ತಾನು ಆರಿಸಲು ಇಚ್ಛಿಸುವ ಭಕ್ತನೊಡನಾಗಲಿ ತನ್ನ ಚೈತನ್ಯಮಯ ಹಾಗೂ ಸತ್ವಯುತ ವಚನಾಮೃತ ಮುಖಾಂತರ ಮಾತನಾಡುವುದಾಗಿದೆ. ಈ ದಿವ್ಯವಾಣಿ ತೃಪ್ತಿಕರವಾಗಿಯೂ ಕ್ರಮಾನುಗತವಾಗಿಯೂ ಮುಂದುವರಿಯುತ್ತಾ, ಹೀನವಿಚಾರ ಮಿಶ್ರಿತವಾಗಲಿ, ಅಪೂರ್ಣವಾಗಲಿ, ಅವ್ಯಕ್ತವಾಗಲಿ ಆಗಿರದೆ ಮಾಧುರ್ಯಸಹಿತವೂ ಚಮತ್ಕಾರಪೂರ್ಣವೂ ಜ್ಞಾನಗರ್ಭಿತವೂ ಆಗಿದ್ದರೆ, ಅದೇ, ದೇವನು ತನ್ನ ಭಕ್ತದಾಸನನ್ನು ಸಾಂತ್ವನಪಡಿಸುವ ಹಾಗೂ ತನ್ನ ದಿವ್ಯಸ್ವರೂಪವನ್ನು ಅವನಿಗೆ ಬಹಿರಂಗಪಡಿಸುವ ಪವಿತ್ರ ವಚನವಾಗಿದೆ. ಆದರೆ ಕೆಲವು ಬಾರಿ ಯಥಾರ್ಥ ದೈವವಚನಕ್ಕಿರುವ ಪೂರ್ಣವಾದ ಅನುಗ್ರಹಚಿಹ್ನೆರಚಿತವಾದ ಕೆಲವು ವಚನಗಳು ಒಬ್ಬ ಭಕ್ತನಿಗೆ ಲಭಿಸಬಹುದು. ಈ ಆರಂಭ ಘಟ್ಟದಲ್ಲಿ ಅವನು ದೇವನಿಂದ ಪರೀಕ್ಷಿಸಲ್ಪಡುತ್ತಾನೆ. ಅದರ ಫಲವಾಗಿ, ದೈವವಚನದ ತುಸು ರುಚಿ ಅನುಭವಿಸಿದ ನಂತರ ಅವನು ತನ್ನ ಮಾತು ಮತ್ತು ಕೃತಿಯನ್ನು ಯಥಾರ್ಥ ದೈವವಚನವನ್ನು ಪಡೆದ ಭಕ್ತದಾಸರಂತೆ ಪಾವನವಾಗಿರಿಸುತ್ತಾನೆ ಅಥವಾ ಸತ್ಪಥದಿಂದ ವ್ಯತಿಕ್ರಮಿಸುತ್ತಾನೆ. ಅವನು ಸತ್ಯಭಕ್ತರಂತೆ ಧರ್ಮಪಥದಲ್ಲಿ ಚಲಿಸುವುದಿಲ್ಲವಾದರೆ ಈ ದಿವ್ಯಾನುಭೂತಿ ಅವನಿಗೆ ಲಭಿಸದೆ ಅವನ ಹೃದಯದಲ್ಲಿ ಒಂದು ವ್ಯಾಮೋಹ ಮಾತ್ರ ಬಾಕಿಯುಳಿಯುತ್ತದೆ. ಕೋಟಾನುಕೋಟಿ ಭಕ್ತಜನರಿಗೆ ದೈವವಾಣಿ ಲಭಿಸುತ್ತದೆ. ಆದರೆ ದೈವದೃಷ್ಟಿಯಲ್ಲಿ ಅವರೆಲ್ಲರಿಗೂ ಒಂದೇ ಸ್ಥಾನವಿರುವುದಿಲ್ಲವೆಂಬುದು ನೆನಪಿಡತಕ್ಕದ್ದು. ಸ್ಪಷ್ಟವಾದ ರೀತಿಯಲ್ಲಿ ದೈವವಚನ ಗಳಿಸಿದ ಪ್ರವಾದಿಗಳೇ ಆಗಲಿ, ಎಲ್ಲರಿಗೂ ಸಮಾನ ಸ್ಥಾನವಿರುವುದಿಲ್ಲ. ದೇವನು ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ :

ತಿಲ್ಕ ರುಸುಲು ಫಲ್ಲಲ್ನಾ ಬಅ್‌ಲಹುಂ ಅಲಾ
ಬಅ್‌ಲಿನ್ (2 : 254)

ನಾವು ಪ್ರವಾದಿಗಳ ಪೈಕಿ ಕೆಲವರನ್ನು ಬೇರೆ ಕೆಲವರಿಗಿಂತ ಶ್ರೇಷ್ಠರನ್ನಾಗಿ ಮಾಡಿದ್ದೇವೆ.

ಈ ವಾಕ್ಯದಿಂದ, ದೈವವಾಣಿ ಕರುಣಾನಿಧಿಯಾದ ದೇವನ ಕಡೆಯಿಂದಿರುವ ಒಂದು ಅನುಗ್ರಹವೆಂದೂ ಅದಕ್ಕೆ ದಿವ್ಯವಾಣಿ ಸಿದ್ಧಿಸಿದವರ ಸ್ಥಾನವ್ಯತ್ಯಾಸದೊಂದಿಗೆ ಸಂಬಂಧವಿಲ್ಲವೆಂದೂ ತಿಳಿದುಬರುತ್ತದೆ. ಏಕೆಂದರೆ ಅವರಿಗೆ ದೇವನೊಡನಿರುವ ಭಕ್ತಿ, ಶ್ರದ್ಧೆ, ವಿಶ್ವಾಸ ಎಂಬ ಗುಣಮಹಿಮೆಗಳನ್ನು ಸ್ಥಾನವ್ಯತ್ಯಾಸ ಆಶ್ರಯಿಸಿಕೊಂಡಿದೆ. ಮನೋಗುಣಗಳ ಹೆಚ್ಚುಕಡಿಮೆಯನ್ನು ದೇವನು ಮಾತ್ರ ತಿಳಿದಿರುತ್ತಾನೆ. ಅನುಗ್ರಹದಾಯಕ ಶರ್ತಗಳಿಂದ ಕೂಡಿದ ದೇವವಾಣಿ ಸಿದ್ಧಿಸುವುದು ಸಹ ಪ್ರಸ್ತುತ ಗುಣಗಳ ಒಂದು ಫಲವೇ ಆಗಿದೆ. ಭಕ್ತನು ದೇವನೊಡನೆ ಮಾಡುವ ಪ್ರಾರ್ಥನೆಗೆ ಉತ್ತರ ಲಭಿಸುವುದಾದರೆ, ಹಾಗೆ ಈ ಕ್ರಮ ಮುಂದುವರಿದುಕೊಂಡು ಹೋಗುವುದಾದರೆ, ಹಾಗೂ ಈ ವಾಣಿಯಲ್ಲಿ ದಿವ್ಯಪ್ರಭಾವವೂ ತೇಜಸ್ಸೂ ಅಂತರ್ಲೀನವಾಗಿದ್ದು ಭವಿಷ್ಯ ಕಾಲಕ್ಕೆ ಸಂಬಂಧಿಸಿದ ವಿಚಾರಗಳೂ ಪರಮಾರ್ಥ ಜ್ಞಾನವೂ ಒಳಗೊಂಡಿರುವುದಾದರೆ ಅದು ಖಂಡಿತವಾಗಿಯೂ ದೈವವಾಣಿಯೇ ಆಗಿರುತ್ತದೆ. ಇಬ್ಬರು ಮಿತ್ರರು ಪರಸ್ಪರ ಸಂಭಾಷಣೆ ಮಾಡುವ ರೀತಿಯಲ್ಲಿ ಸೃಷ್ಟಿಕರ್ತನಾದ ದೇವ ಮತ್ತು ದಾಸನ ಮಧ್ಯೆ ನಿಕಟ ಸಂಪರ್ಕವಿರಬೇಕಾದುದು ದೈವವಾಣಿಯ ಒಂದು ಅವಶ್ಯ ಲಕ್ಷಣವಾಗಿದೆ. ಸತ್ಯಭಕ್ತನು ಸರ್ವಶಕ್ತನಾದ ದೇವನೊಡನೆ ಮಾಡುವ ಪ್ರಾರ್ಥನೆಗೆ ಉತ್ತರವಾಗಿ ದೇವಸನ್ನಿಧಿಯಿಂದ ಮಾಧುರ್ಯಭರಿತ, ಆನಂದದಾಯಕ ವಚನವನ್ನು ಶ್ರವಿಸುವುದಾದರೆ ಹಾಗೂ ಅದು ಆತನ ಇಚ್ಛೆ, ಆಲೋಚನೆಗಳ ಫಲವಾಗಿರದೆ ಇದ್ದರೆ, ಅದು ಖಂಡಿತವಾಗಿಯೂ ದೇವನ ಕಡೆಯಿಂದಿರುವ ವಚನವೇ ಆಗಿರುತ್ತದೆ. ಇಂತಹ ಅನುಗ್ರಹ ಸಿದ್ಧಿಸಿದ ಭಕ್ತನು ನಿಶ್ಚಯವಾಗಿಯೂ ದೇವಸನ್ನಿಧಿಯಲ್ಲಿ ಗೌರವ ಪಡೆಯುತ್ತಾನೆ. ಆದರೆ ಸಜೀವ ಹಾಗೂ ಪರಿಶುದ್ಧವಾದ ದೈವವಚನ ಪಾರಿತೋಷಕವೆಂಬ ರೀತಿಯಲ್ಲಿ ಸ್ಪಷ್ಟರೂಪದಲ್ಲಿ ಲಭ್ಯವಾಗುವುದು ಸತ್ಯವಿಶ್ವಾಸದಲ್ಲೂ ಭಕ್ತಿಯಲ್ಲೂ ಪರಿತ್ಯಾಗದಲ್ಲೂ ಅವರ್ಣನೀಯವಾದ ಪರಿಶುದ್ಧ ಬಂಧದಲ್ಲೂ ಅಭಿವೃದ್ಧಿ ಪಡೆಯುತ್ತಿರುವ ವ್ಯಕ್ತಿಗೆ ಮಾತ್ರವಾಗಿರುತ್ತದೆ; ಬೇರಾರಿಗೂ ಅಲ್ಲ. ಯಥಾರ್ಥ ಹಾಗೂ ಪವಿತ್ರವಾದ ದೈವವಾಣಿ ಸೃಷ್ಟಿಕರ್ತನ ಮಹತ್ತರವಾದ ಅದ್ಭುತಗಳನ್ನು ಬಹಿರಂಗಪಡಿಸುತ್ತದೆ. ಅನೇಕ ಸಲ ಉಜ್ವಲವಾದೊಂದು ತೇಜಸ್ಸು ಹುಟ್ಟುತ್ತದೆ. ಅದರ ಜೊತೆಗೆ ಸ್ಪಷ್ಟವೂ, ಪ್ರಭಾಪೂರ್ಣವೂ ಆದ ದೈವವಚನ ಅವತರಿಸುತ್ತದೆ. ಭೂಮ್ಯಾಕಾಶಗಳ ಸೃಷ್ಟಿಕರ್ತನಾದ ದೇವನೊಡನೆ ಮಾತನಾಡುವುದು ಹಾಗೂ ಅವನಿಂದ ಸಂಬೋಧಿಸಲ್ಪಡುವುದಕ್ಕಿಂತ ಮಿಗಿಲಾದ ಒಂದು ಅನುಗ್ರಹ ಮನುಷ್ಯನಿಗೆ ಲಭಿಸಲಿಕ್ಕೆ ಬೇರೇನಿದೆ? ದೈವವಾಣಿ

ಮೂಲಕ ಭಕ್ತನು ಈ ಲೋಕದಲ್ಲಿ ದೈವದರ್ಶನವನ್ನು ಪಡೆಯುತ್ತಾನೆ.

ಆದರೆ ದೇವನ ಕಡೆಯಿಂದ ಉಂಟಾದುದು ಎಂಬುದಕ್ಕೆ ಪರ್ಯಾಪ್ತವಾದ ಚಿಹ್ನೆಗಳೇನೂ ಇಲ್ಲದೆ ಉದ್ದೇಶರಹಿತವಾದ ಕೆಲವು ಮಾತುಗಳಾಗಲಿ, ವಚನಗಳಾಗಲಿ, ಕವನವಾಗಲಿ ಒಬ್ಬನ ಅಧರಗಳಿಂದ ತನ್ನಷ್ಟಕ್ಕೆ ಉಚ್ಚರಿಸಲ್ಪಡುವುದಾದರೆ, ಅವನ ಈ ಸ್ಥಿತಿ ದೈವವಚನಕ್ಕೆ ಸಂಬಂಧಿಸಿದ ಪ್ರಸ್ತುತ ವಿವರಣೆಯಲ್ಲಿ ಒಳಗೊಳ್ಳುವುದಿಲ್ಲ. ಅದು ದೈವಿಕ ಸಂಬೋಧನೆ ಆಗುವುದಿಲ್ಲ. ಇಂತಹ ಒಂದು ಅನುಭವವನ್ನು ಪಡೆಯುವವನು ದೇವನ ಪರೀಕ್ಷೆಗೆ ಒಳಗಾಗುತ್ತಾನೆ. ಏಕೆಂದರೆ ದೇವನು ಕೆಲವೊಮ್ಮೆ ಕರ್ತವ್ಯಪ್ರಜ್ಞೆ ರಹಿತರೂ ಉದಾಸೀನರೂ ಆದ ಜನರನ್ನು ಈ ರೀತಿಯಲ್ಲಿ ಪರೀಕ್ಷಿಸುತ್ತಾನೆ. ದೇವನಿಂದ ಬಂದದ್ದೋ ಶೈತಾನನಿಂದ ಬಂದದ್ದೋ ಎಂದು ಗುರುತಿಸಲಿಕ್ಕಾಗದಂತಹ ಅಸ್ಪಷ್ಟ ಮಾತುಗಳಾಗಲಿ ವಚನಗಳಾಗಲಿ ಅವರ ಮನಸ್ಸಿನಲ್ಲಿ ಮೂಡುತ್ತವೆ. ಅಥವಾ ಅವರ ಅಧರಗಳಿಂದ ಉಚ್ಚರಿಸಲ್ಪಡುತ್ತವೆ. ಹೀಗೆ ಪರೀಕ್ಷೆಗೊಳಪಡುವವನು ಪಶ್ಚಾತ್ತಪಿಸಿ ದೇವನ ಕಡೆಗೆ ತಿರುಗಿ ಸ್ವಯಂ ಸುಧಾರಣೆಗೊಳ್ಳಲು ಪ್ರಯತ್ನಿಸಬೇಕಾಗಿದೆ. ಆದರೆ ಸತ್ಕರ್ಮಿ ಹಾಗೂ ಧರ್ಮನಿಷ್ಠ ಭಕ್ತನಿಗೆ ನಿರಾತಂಕವಾಗಿ ಸ್ವಚ್ಛ ನಿರ್ಮಲವಾದ ದಿವ್ಯ ಬೋಧನೆ ಉಂಟಾಗುತ್ತದೆ; ತೇಜೋಮಯ, ಮಾಧುರ್ಯಭರಿತ, ಅರ್ಥಗರ್ಭಿತ, ಜ್ಞಾನಭಂಡಾರ, ಪ್ರಭಾವಪೂರ್ಣ ದೇವವಚನ ಕೇಳಿಸುತ್ತದೆ. ಜಾಗೃತಾವಸ್ಥೆಯಲ್ಲಿ ಒಂದೇ ಸಂದರ್ಭದಲ್ಲೇ ಹತ್ತೋ ಅದಕ್ಕಿಂತ ಹೆಚ್ಚೋ ಪ್ರಾರ್ಥನೆಗಳಿಗೆ ದೇವನಿಂದ ಉತ್ತರ ಲಭಿಸುವ ಸೌಭಾಗ್ಯ ಹಲವು ಬಾರಿ ದೊರಕಿ, ಒಂದು ಪ್ರಾರ್ಥನೆಗೆ ಉತ್ತರ ಲಭಿಸಿದ ಕೂಡಲೇ ಇನ್ನೊಂದನ್ನು ಅಪೇಕ್ಷಿಸಿದಾಗ ಅದಕ್ಕೆ ಉತ್ತರ ಸಿಗುವ ರೀತಿಯಲ್ಲಿ ಮುಂದುವರಿದು ಹತ್ತೋ ಅದಕ್ಕಿಂತ ಹೆಚ್ಚೋ ಸಲ ಒಂದೇ ಸಂದರ್ಭದಲ್ಲಿ ದೇವನಿಂದ ಸೌಭಾಗ್ಯ ಲಭಿಸುತ್ತಲೂ, ಹೀಗೆ ಹಲವಾರು ಪ್ರಾರ್ಥನೆಗಳಿಗೆ ಉತ್ತರ ಹಾಗೂ ಮಹತ್ತರವಾದ ಸತ್ಯತತ್ವಗಳ ಕುರಿತು ಜ್ಞಾನವೂ ಭವಿಷ್ಯ ಕಾರ್ಯಗಳ ಕುರಿತು ಸಮಾಚಾರಗಳೂ ಲಭ್ಯವಾಗುವುದಾದರೆ ಆತನು ಇತರರಿಗಿಂತ ದೇವನಿಗೆ ಕೃತಜ್ಞತೆ ಸಲ್ಲಿಸುತ್ತಲೂ ತನ್ನ ಜೀವಿತವನ್ನು ದೈವಪಥದಲ್ಲಿ ಅರ್ಪಿಸುತ್ತಲೂ ಇರಬೇಕಾಗಿದೆ. ಏಕೆಂದರೆ, ದೇವನು ಆತನನ್ನು ತನ್ನ ಅತ್ಯಂತ ದಯೆಯಿಂದ ತನ್ನ ಭಕ್ತದಾಸರಲ್ಲಿ ವರಿಷ್ಠನನ್ನಾಗಿ ಆರಿಸಿ ಪೂರ್ವಿಕ ಮಹಾನುಭಾವರಾದ ಸತ್ಯಭಕ್ತರಿಗೆ ನೀಡಲಾದ ಅನುಗ್ರಹಗಳಿಗೆ ಹಕ್ಕುದಾರನನ್ನಾಗಿ ಮಾಡಿರುವನು. ಒಟ್ಟಾರೆ, ಈ ಅನುಗ್ರಹ ಸಿದ್ಧಿಯ ಭಾಗ್ಯ ಪಡೆದವರು ಅದರ ಹೊರತಾದ ಬಾಕಿಯೆಲ್ಲವನ್ನೂ ನಿಸ್ಸಾರ ಹಾಗೂ ತುಚ್ಛವೆಂದು ಗಣಿಸಬೇಕಾಗಿದೆ.

ಆಧ್ಯಾತ್ಮಿಕವಾದ ಈ ಉತ್ಕೃಷ್ಟ ಸ್ಥಾನ ಪಡೆದ ಮಹಾ ಪುರುಷರು ಎಲ್ಲಾ ಕಾಲದಲ್ಲೂ ಇಸ್ಲಾಮಿನಲ್ಲಿ ಇರುತ್ತಾರೆ. ದೇವನು ತನ್ನ ಸತ್ಯದಾಸನನ್ನು ಸಮೀಪಿಸಿ ಆತನೊಡನೆ ಮಾತನಾಡುತ್ತಾನೆ; ಆತನ ಅಂತರಂಗದಲ್ಲಿ ಶಬ್ದವನ್ನುಂಟುಮಾಡುತ್ತಾನೆ. ಆತನ ಹೃದಯವನ್ನು ತನ್ನ ಭದ್ರಾಸನವನ್ನಾಗಿ ಮಾಡಿ ಆತನನ್ನು ಸ್ವರ್ಗದೆಡೆಗೆ ಆಕರ್ಷಿಸುತ್ತಾನೆ. ಪೂರ್ವಿಕ ಸಜ್ಜನರಿಗೆ ಪ್ರದಾನ ಮಾಡಿದ ಸಕಲ ಅನುಗ್ರಹಗಳನ್ನೂ ಆತನಿಗೆ ನೀಡುತ್ತಾನೆ. ಇದು ಇಸ್ಲಾಮಿನಲ್ಲಿ ಮಾತ್ರವಿರುವ ಒಂದು ಅನುಗ್ರಹವಾಗಿದೆ. ಹೆಚ್ಚು ಹೆಚ್ಚಾಗಿ ದೈವಸಾಮೀಪ್ಯವನ್ನು ಅನುಭವಿಸುವ ಮನುಷ್ಯನು ಯಾವ ಹಂತಕ್ಕೆ ತಲಪುವನೆಂದು ಹಾ! ಅಂಧ ಲೋಕ ತಿಳಿಯುವುದಿಲ್ಲ. ದೇವನ ಸಾಮೀಪ್ಯವನ್ನು ಪಡೆಯಲಿಕ್ಕೆ ಜನರು ಆಧ್ಯಾತ್ಮಿಕ ಪಥದಲ್ಲಿ ನಡೆಯುವುದಿಲ್ಲ. ಈ ಮಾರ್ಗದಲ್ಲಿ ಚಲಿಸುವ ಅಧ್ಯಾತ್ಮ ಪುರುಷನನ್ನು ಅವರು ಅವಿಶ್ವಾಸಿಯೆಂದೂ ಮತಭ್ರಷ್ಟನೆಂದೂ ವಿಧಿಸಿ ತಿರಸ್ಕರಿಸುತ್ತಾರೆ ಅಥವಾ ದೇವನ ಸ್ಥಾನವನ್ನು ನೀಡಿ ಪೂಜಿಸುತ್ತಾರೆ. ಈ ಎರಡು ರೀತಿಗಳೂ ಧರ್ಮ ವಿರುದ್ಧವಾಗಿವೆ. ಒಂದು ತೀವ್ರ ವಿದ್ವೇಷದ ಫಲವಾಗಿದ್ದರೆ ಇನ್ನೊಂದು ಅತಿರೇಕ ಪ್ರೀತಿಯ ಫಲವಾಗಿದೆ. ಆದರೆ ವಿವೇಕಿ ಮನುಷ್ಯನು ಈ ಎರಡು ವಿಧ ದೋಷಗಳು ಬಾಧಿಸದ ಮಧ್ಯಮಾರ್ಗವನ್ನು ಕೈಗೊಳ್ಳಬೇಕು. ಎಂದರೆ, ಉತ್ಕೃಷ್ಟವಾದ ಆಧ್ಯಾತ್ಮಿಕ ಸ್ಥಾನವನ್ನು ಹೊಂದಿರುವ ಮಹಾ ಪುರುಷನನ್ನು ನಿರಾಕರಿಸದೆಯೂ ಆತನ ಸ್ಥಾನ ಮಾಹಾತ್ಮ್ಯಕ್ಕೆ ಕುಂದುಂಟಾಗುವಂತೆ ಮಾಡದೆಯೂ ಆತನನ್ನು ದೇವನಂತೆ ಆರಾಧಿಸದೆಯೂ ಇರಬೇಕಾಗಿದೆ. ದೇವನು ತನ್ನ ದಿವ್ಯ ಹೊದಿಕೆಯನ್ನು ಭಕ್ತದಾಸನ ಮೇಲೆ ಹರಡಿ ನಿಕಟ ಬಂಧವನ್ನು ಪ್ರಕಟಿಸುತ್ತಾನೆ. ಆಗ ಆತನು ದೇವನನ್ನು ಕಾಣುವ ದರ್ಪಣವಾಗಿ ಮಾರ್ಪಡುತ್ತಾನೆ. "ನನ್ನನ್ನು ಕಂಡವನು ದೇವನನ್ನು ಕಂಡವನಂತೆ" ಎಂದು ಮುಹಮ್ಮದ್ ಪೈಗಂಬರರು ಹೇಳಿದುದರ ತಾತ್ಪರ್ಯ

ಇದೇ ಆಗಿದೆ. ಸಂಕ್ಷಿಪ್ತವಾಗಿ, ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಯ ಕೊನೆಯ ಹಂತ ಇದಾಗಿದೆ. ಇಲ್ಲಿ ಅವನ ಎಲ್ಲಾ ಪ್ರಯತ್ನಗಳು ಕೊನೆಗೊಂಡು ಅವನು ಪೂರ್ಣವಾಗಿ ಸಂತೃಪ್ತಿಯನ್ನೂ ಶಾಂತಿಯನ್ನೂ ಪಡೆಯುತ್ತಾನೆ.

ಕುರುಡರಿಗೆ ದೃಷ್ಟಿ ಕೊಡಲಿಕ್ಕೂ ಅನ್ವೇಷಕರಿಗೆ ಸ್ವಯಂ ಗುಪ್ತನಾಗಿರುವ ದೇವನೆಡೆಗೆ ದಾರಿ ತೋರಿಸಲಿಕ್ಕೂ ಸತ್ಯವನ್ನು ಸ್ವೀಕರಿಸಲು ಬಯಸುವವರಿಗೆ ಪವಿತ್ರವಾದ ಜಲಬುಗ್ಗೆಯ ಕುರಿತು—ಅಧಿಕಾಂಶ ಜನರು ಆ ಬಗ್ಗೆ ಮಾತನಾಡುವವರಾದರೂ ಕೆಲವೇ ಜನರಿಗೆ ಮಾತ್ರ ಲಭಿಸಿದ ಆ ಮಹತ್ತಾದ ಒಸರಿನ ಕುರಿತು—ಶುಭವಾರ್ತೆ ನೀಡಲಿಕ್ಕೂ ಪರಮ ದಯಾಮಯನಾದ ದೇವನು ನನ್ನನ್ನು ಪ್ರಸ್ತುತ ಉನ್ನತ ಪದವಿ ಮೂಲಕವೂ ಮೇಲೆ ವಿವರಿಸಿದ ರೀತಿಯ ಮಧುರ ವಚನಗಳಿಂದಲೂ ಅನುಗ್ರಹಿಸಿರುವನೆಂಬ ವಿಚಾರವನ್ನು ಇಲ್ಲಿ ಬಹಿರಂಗ ಪಡಿಸದಿದ್ದ ಪಕ್ಷದಲ್ಲಿ ನಾನು ಮನುಷ್ಯವರ್ಗದೊಡನೆ ಒಂದು ಮಹಾ ಅನ್ಯಾಯ ಮಾಡಿದಂತಾಗುವುದು. ಮನುಷ್ಯನ ಮುಕ್ತಿಗೂ ಶಾಶ್ವತ ಸುಖಕ್ಕೂ ಮೂಲ ಕಾರಣವಾದ ದೈವಪ್ರಾಪ್ತಿ ಪವಿತ್ರ ಖುರ್‌ಆನಿಗನುಸಾರವಾಗಿ ಜೀವಿಸುವ ಮೂಲಕವಲ್ಲದೆ ಅಸಾಧ್ಯವೆಂದು ನಾನಿದೋ ಉಚ್ಚ ಸ್ವರದಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಜನರು ನಾನು ಕಂಡದ್ದನ್ನು ಕಾಣುವುದಾದರೆ, ನಾನು ಕೇಳಿದ್ದನ್ನು ಕೇಳುವುದಾದರೆ, ಕಟ್ಟುಕತೆಗಳನ್ನು ತ್ಯಜಿಸಿ ಯಥಾರ್ಥ ತತ್ತ್ವದೆಡೆಗೆ ಓಡಿ ಬರುವುದಾದರೆ, ಹಾ! ಎಷ್ಟು ಚೆನ್ನು. ಯಾವುದರ ಮೂಲಕ ದೇವನನ್ನು ಕಾಣಲು ಸಾಧ್ಯವೋ ಆ ಪರಿಪೂರ್ಣ ಜ್ಞಾನದ ಮಾರ್ಗವೂ ಸಕಲ ಸಂದೇಹ ಮಾಲಿನ್ಯಗಳನ್ನು ಹೋಗಲಾಡಿಸುವ ಸ್ವರ್ಗೀಯ ಜಲವೂ ದೇವನ ಪವಿತ್ರ ಮುಖವನ್ನು ಪ್ರತಿಬಿಂಬಿಸಿ ತೋರಿಸುವ ಶುಭ್ರ ದರ್ಪಣವೂ ಮೇಲೆ ವಿವರಿಸಿದಂತಹ ದೇವನಿಂದ ಲಭಿಸುವ ಅಮೃತ ವಾಣಿಯೇ ಆಗಿದೆ. ಯಾವೊಬ್ಬನ ಆತ್ಮದಲ್ಲಿ ಪರಮಾರ್ಥ ತತ್ತ್ವವನ್ನು ತಿಳಿಯುವ ಜಿಜ್ಞಾಸೆಯುಂಟೋ ಅವನು ಎಚ್ಚೆತ್ತು ಅನ್ವೇಷಣೆ ಮಾಡಲಿ. ನಾನು ಸತ್ಯವಾಗಿ ಹೇಳುತ್ತೇನೆ : ಆತ್ಮದಲ್ಲಿ ಯಥಾರ್ಥ ಜಿಜ್ಞಾಸೆ ಹಾಗೂ ಹೃದಯದಲ್ಲಿ ನಿಜವಾದ ತೃಷ್ಣೆಯೂ ಇದ್ದರೆ ಜನರು ಪ್ರಸ್ತುತ ಮಾರ್ಗಾನ್ವೇಷಣೆಯಲ್ಲಿ ತೊಡಗುವರು. ಆದರೆ ಈ ಮಾರ್ಗ ಹೇಗೆ ತೆರೆಯಲ್ಪಡುವುದು? ಅವರ ಪರದೆ ಸರಿಯುವುದೆಂತು? ಇಸ್ಲಾಂ ಮಾತ್ರ ಮುಮುಕ್ಷುಗಳಿಗೆ ಈ ಪದವಿಯನ್ನು ವಾಗ್ದಾನ ಮಾಡುತ್ತದೆ ಹಾಗೂ ಅದರ ಕುರಿತು ಶುಭಸಮಾಚಾರ ನೀಡುತ್ತದೆಂದು ಸತ್ಯಾನ್ವೇಷಿಗಳಿಗೆ ನಾನು ಭರವಸೆ ಹೇಳುತ್ತೇನೆ. ಇತರ ಮತಾವಲಂಬಿಗಳು ದೈವವಚನವೆಂಬ ಅನುಗ್ರಹದ ಕವಾಟ ಬಹಳ ಕಾಲದಿಂದ ಮುಚ್ಚಲ್ಪಟ್ಟಿದೆಯೆಂದು ಒಪ್ಪುತ್ತಾರೆ. ಆದರೆ ಅವರು ಹೇಳುವ ಹಾಗೆ ದೇವನು ಈ ಮಾರ್ಗವನ್ನು ತಡೆಯಲಿಲ್ಲ. ಪ್ರವೇಶ ಪಡೆಯಲಾಗದ ಶೂನ್ಯಹೃದಯರ ನಿರಾಶಜನಕ ಕಲ್ಪನೆ ಮಾತ್ರವಾಗಿದೆ ಅದು. ನಮಗೆ ಕಣ್ಣುಗಳಿಲ್ಲದೆ ಕಾಣಲಿಕ್ಕೂ ಕಿವಿಗಳಿಲ್ಲದೆ ಕೇಳಲಿಕ್ಕೂ ನಾಲಿಗೆಯಿಲ್ಲದೆ ಮಾತನಾಡಲಿಕ್ಕೂ ಸಾಧ್ಯವಾಗದಂತೆಯೇ ಪವಿತ್ರ ಖುರ್‌ಆನಿನ ಸಹಾಯವಿಲ್ಲದೆ ಆ ಯಥಾರ್ಥ ಪ್ರೇಮಸ್ವರೂಪನಾದ ದೇವನ ಮುಖವನ್ನು ಕಾಣಲಿಕ್ಕೆ ಸಾಧ್ಯವಿಲ್ಲ. ನಾನು ಯೌವನಾವಸ್ಥೆಯನ್ನು ದಾಟಿ ವೃದ್ಧಾಪ್ಯವನ್ನು ಪಡೆದಿರುವೆನು. ಈ ದೀರ್ಘಕಾಲದ ಜೀವಿತದಲ್ಲಿ ಪಾವನ ಜ್ಞಾನದ ಮೂಲವಾದ ಈ ಮಾರ್ಗದ ಮೂಲಕವಲ್ಲದೆ ಪರಮಾರ್ಥಜ್ಞಾನವೆಂಬ ಅಮೃತವನ್ನು ಕುಡಿದು ತೃಪ್ತಿಪಡೆದ ಯಾರನ್ನೂ ನಾನು ಕಂಡಿಲ್ಲ.

ಪ್ರಿಯ ಜನರೆ, ದೇವನೊಡನೆ ಹೋರಾಡಲಿಕ್ಕಾಗಲಿ ಅವನ ಉದ್ದೇಶಗಳನ್ನು ತಡೆಯಲಿಕ್ಕಾಗಲಿ ಯಾರಿಂದಲೂ ಸಾಧ್ಯವಿಲ್ಲ. ತಿಳಿಯಿರಿ—ಪೂರ್ಣವಾದ ದಿವ್ಯ ಜ್ಞಾನದ ಮಾರ್ಗ ದೇವನ ಪ್ರವಾದಿಗಳಿಗೆ ಲಭಿಸಿದ ದೈವ ವಾಣಿಯಾಗಿದೆ. ಆದರೆ ನಂತರ ದಯಾಸಾಗರನಾದ ದೇವನು ತನ್ನ ಅಮೃತ ವಚನದ ಕವಾಟವನ್ನು ಮುಚ್ಚಿ ಲೋಕವನ್ನು ವಿನಾಶದೆಡೆಗೆ ದೂಡಿಬಿಡಲು ಎಂದೂ ಉದ್ದೇಶಿಸಲಿಲ್ಲ. ಬದಲಾಗಿ, ಅವನು ತನ್ನ ದಿವ್ಯವಾಣಿ ಮತ್ತು ಮಧುರ ವಚನಗಳ ಅನುಗ್ರಹೀತ ಕವಾಟಗಳನ್ನು ಸದಾ ತೆರೆದಿಟ್ಟಿರುವನು. ಸರಿಯಾದ ಮಾರ್ಗದಲ್ಲಿ ಅನ್ವೇಷಿಸುವುದಾದರೆ ನಿಮಗದು ಪ್ರಾಪ್ತವಾಗುವುದು. ಆ ಜೀವಜಲ ಆಕಾಶದಿಂದ ವರ್ಷಿಸಿ ಸಮುಚಿತ ಸ್ಥಳದಲ್ಲಿ ಸಂಗ್ರಹವಾಗಿರುತ್ತದೆ. ನಿಮಗದನ್ನು ಪಾನಮಾಡಬೇಕೆಂದಿದ್ದರೆ ಎಡವಿ ತಡವಿ, ಎದ್ದು ಬಿದ್ದು ಆ ಜಲಾಶಯವನ್ನು ಸಮೀಪಿಸಿ ಅದಕ್ಕೆ ನಿಮ್ಮ ಅಧರಗಳನ್ನು ತಾಗಿಸಬೇಕಾಗಿದೆ. ಹಾಗೆ ನೀವು ಆ ಝರಿಯಿಂದ ಕುಡಿದು ಸಂತೃಪ್ತರಾಗಬಹುದು. ದೈವಿಕ ಪ್ರಕಾಶ ಪ್ರಕಟಗೊಂಡು ಕಾಣುವ ಸ್ಥಳದೆಡೆಗೆ ಓಡಿ ಹೋಗಿ ತಾನು ಹುಡುಕುವ ಆ ಪ್ರೇಮಪಾತ್ರದ ಚಿಹ್ನೆ ಗೋಚರವಾಗುವ ಮಾರ್ಗವನ್ನನುಸರಿಸುವುದರಲ್ಲಿ ಮನುಷ್ಯನಿಗೆ ಸೌಭಾಗ್ಯವಿದೆ. ಪ್ರಕಾಶ ಆಕಾಶದಿಂದ ಭೂಮಿಯೆಡೆಗೆ ವ್ಯಾಪಿಸಿ ಬರುವಂತೆ ಸನ್ಮಾರ್ಗ

ದರ್ಶನವೆಂಬ ಜ್ಯೋತಿ ಸಹ ಆಕಾಶದಿಂದ ಅಥವಾ ದೇವನಿಂದ ಅವತರಿಸುತ್ತದೆ. ಮನುಷ್ಯನ ಸ್ವಂತ ವಚನಗಳೂ ಸ್ವಂತ ಕಲ್ಪನೆಗಳೂ ಅವನಿಗೆ ಯಥಾರ್ಥ ದೈವಿಕಜ್ಞಾನ ನೀಡಲು ಪರ್ಯಾಪ್ತವಲ್ಲ. ಏನು, ನಿಮಗೆ ದಿವ್ಯ ಸಾಕ್ಷಾತ್ಕಾರದ ಹೊರತು ದೇವನನ್ನು ಪಡೆಯಲು ಸಾಧ್ಯವಿದೆಯೇ? ಪ್ರಕಾಶದ ಸಹಾಯವಿಲ್ಲದೆ ಅಂಧಕಾರದಲ್ಲಿ ನಿಮಗೆ ಏನನ್ನಾದರೂ ಕಾಣಲು ಸಾಧ್ಯವಿದೆಯೇ? ಅದು ಸಾಧ್ಯವೆಂದಾದರೆ ದೇವನಿಗೆ ಸಂಬಂಧಿಸಿದ ಅಧ್ಯಾತ್ಮ ಜ್ಞಾನವೂ ದೈವವಾಣಿಯ ಸಹಾಯವಿಲ್ಲದೆಯೇ ಸಿದ್ಧಿಸಬಹುದು. ಆದರೆ ನಮ್ಮ ಕಣ್ಣುಗಳಿಗೆ ಕಾಣುವ ಶಕ್ತಿಯಿದ್ದರೂ ನೋಡಲು ಅದಕ್ಕೆ ಪ್ರಕಾಶದ ಆವಶ್ಯಕತೆ ಇದೆ; ಕಿವಿಗಳಿಗೆ ಶ್ರವಣ ಶಕ್ತಿಯಿದ್ದರೂ ಕೇಳಲು ಅದಕ್ಕೆ ವಾಯುವಿನ ಅಗತ್ಯವಿದೆ. ಒಟ್ಟಾರೆ, ಮಾತನಾಡದೆ ಮೌನಾವಲಂಬಿಯಾದ, ಎಲ್ಲವನ್ನೂ ನಮ್ಮ ಕಲ್ಪನಾಶಕ್ತಿಯಿಂದ ತಿಳಿದುಕೊಳ್ಳಲು ಬಿಡುವ ದೇವನು ಖಂಡಿತವಾಗಿಯೂ ಸತ್ಯದೇವನಲ್ಲ. ತನ್ನ ಅಸ್ತಿತ್ವದ ಕುರಿತು ಸರಿಯಾದ ಜ್ಞಾನವನ್ನು ನೀಡುವವನೇ ಪರಿಪೂರ್ಣನೂ ಸಜೀವನೂ ಆದ ದೇವನು. ಅವನು ಈಗಲೂ ತನ್ನ ಇರುವಿಕೆಯ ಬಗ್ಗೆ ಲೋಕಕ್ಕೆ ಅರುಹಲಿಕ್ಕೆ ಉದ್ದೇಶಿಸಿರುವನು. ಸ್ವರ್ಗದ ಬಾಗಿಲುಗಳು ತೆರೆಯಲ್ಪಡಲಿವೆ. ಅರುಣೋದಯದ ಸಮಯ ಸಮೀಪಿಸಿದೆ. ಶೀಘ್ರ ಎಚ್ಚೆತ್ತು ಸತ್ಯದೇವನನ್ನು—ಯಾವ ರೀತಿಯ ದು:ಖಕ್ಕೂ ಕಷ್ಟಕ್ಕೂ ಗುರಿಯಾಗದ, ಸದಾ ಕಾಲವೂ ಪ್ರತಾಪಶಾಲಿಯೂ ತೇಜೋಮಯನೂ ಆಗಿರುವ ದೇವನನ್ನು—ಅನ್ವೇಷಿಸುವವನು ಭಾಗ್ಯಶಾಲಿ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

ಅಲ್ಲಾಹು ನೂರುಸ್ಸಮಾವಾತಿ ವಲ್ ಅರ್ಳಿ
(24:36)
ದೇವನು ಆಕಾಶ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ.

ಸರ್ವ ತೇಜೋಕೇಂದ್ರವಾಗಿರುವ ಅವನಿಂದಲೇ ಎಲ್ಲೆಡೆಗೂ ಪ್ರಕಾಶ ವ್ಯಾಪಿಸುತ್ತದೆ. ಸೂರ್ಯನಿಗೆ ಪ್ರಭೆ ನೀಡುವವನೂ ಸರ್ವಜೀವಿಗಳ ಜೀತದಾತನೂ ಅವನೇ ಆಗಿದ್ದಾನೆ. ಸಜೀವ ಸತ್ಯದೇವನು ಅವನೇ. ಅವನನ್ನು ಅಂಗೀಕರಿಸುವವನು ಭಾಗ್ಯವಂತನು.

( ಮುಂದುವರಿಯುವುದು )



**Read Ahmadiyya Periodicals in different languages to study different religions.**

# BADR

URDU WEEKLY

Single Copy : 0-40 Paise — Annual Subscription : Rs. 20/-

Apply to : The Manager,
"BADR" Urdu Weekly, P. O. QADIAN-143 516 [Punjab]

# MINARET

ENGLISH QUARTERLY JOURNAL

Single Copy : Rs. 1-50 — Annual Subscription : Rs. 6/-

Apply to : Mr. M. P. Koyatty
Minaret Accounting Section
14/346, Francis Road
CALICUT-670 003 [Kerala]

# SATYADOOTHAN

MALAYALAM MONTHLY

Single Copy : Re. 1-00 — Annual Subscription : Rs. 10/-

Apply to : The Manager
Satyadoothan Monthly
CANNANORE-670 001

# SAMADHANA VAZHI

TAMIL MONTHLY

Single Copy : 0-50 Paise — Annual Subscription Rs. 6/-

Apply to : The Manager
Samadhana Vazhi Monthly
3, United India Colony
Kodambakkam
MADRAS-600 024


# ಜಪಾನಿನಲ್ಲಿ ಅಹ್ಮದಿಯಾ ಕೇಂದ್ರ




ಜಪಾನಿನ ಪ್ರಧಾನ ನಗರಗಳ ಪೈಕಿ ಒಂದಾದ ನಗೋಯಾದಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ತೆರೆಯಲಾದ ಅಹ್ಮದಿಯಾ ಕೇಂದ್ರ. ನಗೋವಾ ಭೌಗೋಳಿಕವಾಗಿ ಜಪಾನ್ ದೇಶದ ಮಧ್ಯಭಾಗದಲ್ಲಿದೆ ಹಾಗೂ ಸೆಂಟ್ರಲ್ ಜಪಾನಿನ ಅತ್ಯಂತ ದೊಡ್ಡ ನಗರವಾಗಿದೆ.

Regd. with the Registrar of Newspapers for India. Regd. No. R. N. 27354/75
**YUGARASHMI Kannada Quarterly, Jan. 1982 / Sulha 1362**

# English Translation of the HOLY QUR'AN
## with Arabic Text & Extensive Index




**Price : Rs. 15-00**

**Postal Charge Extra**

### AHMADIYYA ENGLISH LITERATURE

| | | |
|---|---|---|
| 1 | INTRODUCTION TO THE STUDY OF HOLY QUR'AN<br>by Hazrath Mirza Bashiruddin Mahamud Ahmad | 16-00 |
| 2 | THE TEACHINGS OF ISLAM<br>by Hazrath Mirza Ghulam Ahmad | 6-00 |
| 3 | JESUS IN INDIA<br>by Hazrath Mirza Ghulam Ahmad | 2-25 |
| 4 | CHARACTERISTICS OF THE QUR'ANIC TEACHINGS<br>by Hazrath Mirza Bashiruddin Mahamud Ahmad | 1-00 |
| 5 | WHERE DID JESUS DIE ?<br>by J. D. Shams, Ex-Imam, London Mosque | 2-25 |

**Write to : NAZIR DAWAT-O-TABLIGH, Qadian [Punjab]-143516**

Edited and Published by Muhammad Yusuf on behalf of Jamath Ahmadiyya at 10-23/1008, Ansari Road, Bunder, Mangalore-575 001.
Printed at Karavali Printers Azizuddin Road, Bunder, Mangalore-575 001.